ಪ್ರೊ. ಸಾ.ಕೃ.ರಾ. - ಸಮಗ್ರ ಸಾಹಿತ್ಯ - ೧೧

ಭಾರತದ ದೇವಾಲಯ

ನೆಲೆ-ಹಿನ್ನೆಲೆ

ವಿದ್ಯಾಲಂಕಾರ

ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ

ಬೆಂಗಳೂರು-11

ಭಾರತದ ದೇವಾಲಯ
ನೆಲೆ-ಹಿನ್ನೆಲೆ

ಭಾರತದ ದೇವಾಲಯ

ನೆಲೆ-ಹಿನ್ನೆಲೆ

ಲೇಖಕರು :

ವಿದ್ಯಾಲಂಕಾರ

ಪ್ರೊ. ಎಸ್. ಕೆ. ರಾಮಚಂದ್ರರಾವ್

ಸುರಮಾ ಪ್ರಕಾಶನ

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಬೆಂಗಳೂರು-560 011

Bharatada Devalaya - Nele-Hinnele -
written by *Prof. S. K. Ramachandra Rao,*
Published by Dr. S. R. Sudarshan for Surama Prakashana, the publication wing of Prof. S. K. Ramachandra Rao Memorial Trust (R.), 305, 6th Cross, 1st Block, Jayanagar. Bangalore-11. Ph.: 080-26563957
e-mail : drsrsudarshan@gmail.com

Pages : viii + 160 = 168

© The Prof. S.K. Ramachandra Rao Memorial Trust (R)

First Edition : 1980 (by IBH)
Second Edition : 2010

Price : Rs. 75/-

ರೇಖಾಚಿತ್ರಗಳು : ಗ್ರಂಥ ಕರ್ತರು
ಛಾಯಾಚಿತ್ರಗಳು : ಬಿ. ಕೇಸರ್ ಸಿಂಗ್
ದೇವಾಲಯದ ಸ್ಥಳ ವಿನ್ಯಾಸ ಪುಟ ೧೫೩ : ಪಿ. ಗುರುರಾಜ ಭಟ್ಟ

Composed at :
Sree Lakshmi Enterprises,
#1052, 50 Ft. Rd., 1st Stage,
Kumaraswamy L/o, Bangalore-78.
Ph.: 64555684

Printed at :
Vagartha

ISBN : 978-81-906740-0-3

ಅನುಕ್ರಮಣಿಕೆ

ಲೇಖಕರ ಪರಿಚಯ	v
ಮುನ್ನುಡಿ	vii
ಮೊದಲ ಮಾತು	ix
⅄ ಹಳೆಯ ಕಾಲದಲ್ಲಿ ದೇಗುಲ	೧
⅄ ದೇಗುಲ ಬೆಳೆಯಿತು	೨೩
⅄ ಆಲಯದ ಕಟ್ಟಡ	೪೯
⅄ ಸಂಕೇತದ ಬಲೆ	೯೦
⅄ ಸಾಂಪ್ರದಾಯಿಕವಾದ ಚೌಕಟ್ಟು	೧೨೪
⅄ ಗುಡಿಯೊಂದು ಮಂಡಲ	೧೩೯

ಲೇಖಕರ ಪರಿಚಯ



ಪ್ರೊ. ಸಾ. ಕೃ. ರಾಮಚಂದ್ರರಾಯರು (೧೯೨೫-೨೦೦೬) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ ಮನಃಶಾಸ್ತ್ರ

ದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಿಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಿಕಗಳನ್ನು, ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ' ಮತ್ತು 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕಗಳು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.

ಮುನ್ನುಡಿ

ಈ ಪುಸ್ತಕಕ್ಕೆ ಒಂದು ಮುನ್ನುಡಿಯನ್ನು ಬರೆಯಬೇಕಾದ ಅವಶ್ಯಕತೆ ನನಗೆ ಮೊದಲು ತೋರಲಿಲ್ಲ. ಈ ಆವೃತ್ತಿಯಲ್ಲಿ ಯಾವ ಬದಲಾವಣೆಯನ್ನು ಮಾಡಿಲ್ಲ, ಯಾವ ಹೊಸ ವಿವರಗಳನ್ನು ಸೇರಿಸಿಲ್ಲ. ಆದರೆ ಈ ಮುನ್ನುಡಿಯಲ್ಲಿ ನಾನು ಬರೆಯಬೇಕೆಂದಿಚ್ಚಿಸುವುದು ಪುಸ್ತಕದ ವಿಷಯವಾಗಲ್ಲ, ಲೇಖಕರ ವ್ಯಾಸಂಗದ ವಿಚಾರವಾಗಿ. ಇದಕ್ಕೊಂದು ಕಾರಣವಿದೆ. ನನ್ನ ತಂದೆಯವರ ಜೀವನದ ಪ್ರಸಂಗಗಳನ್ನು ಉಲ್ಲೇಖಿಸಿದ ಒಂದು ಪುಸ್ತಕದಲ್ಲಿ ಯಥಾರ್ಥವಲ್ಲದ ಕೆಲವು ವಿಚಾರಗಳು ಕಾಣಿಸಿಕೊಂಡಿವೆ. ಆದ್ದರಿಂದ ನನ್ನ ತಂದೆಯವರ ಬಗ್ಗೆ ನಿಶ್ಚಿತವಾದ ಮಾಹಿತಿಯನ್ನು ಕೊಡುವುದು ನನ್ನ ಕರ್ತವ್ಯವೆಂದು ಭಾವಿಸಿ ಕೆಲವು ವಿವರಗಳನ್ನು ಒದಗಿಸುತ್ತಿದ್ದೇನೆ.

ಪ್ರೊ. ರಾಮಚಂದ್ರರಾಯರು ೧೯೪೮ರಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಬಂದಮೇಲೆ ಅವರು 'Indian Institute of Science' ರಲ್ಲಿ ವೃತ್ತಿ ಪ್ರಾರಂಭಿಸಿದರು. ಅವರಿಗೆ ಇತಿಹಾಸದ ಹಲವು ಮುಖಗಳಲ್ಲಿ ಕುತೂಹಲವಿದ್ದ ಕಾರಣ 'Mythic Society' ಯ ಸದಸ್ಯರಾದರು; ಮುಂದೆ ಹಲವಾರು ವರ್ಷ ಅದರ ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿದ್ದರು. ಆಗ ಅವರು ದೇವಾಲಯದ ಕಲ್ಪನೆ, ಅದರ ವಿಕಾಸ, ಅದರ ವಾಸ್ತು ಶಿಲ್ಪ, ಮೂರ್ತಿಶಿಲ್ಪ, ಅದರ ಸಾಮಾಜಿಕ ವ್ಯವಸ್ಥೆ, ಅದರ ಚಾರಿತ್ರಿಕ ಹಿನ್ನೆಲೆ - ಹೀಗೆ ಹಲವಾರು ಅಂಶಗಳ ಬಗ್ಗೆ ಅಧ್ಯಯನ ಮಾಡಿದರು. ಅವರಿಗೆ ಆಗಮಗಳನ್ನು ಕುರಿತು ಆಸಕ್ತಿ ಇದ್ದಿತು. ಅದರ ಅಧ್ಯಯನ ಕಾಲದಲ್ಲಿ ಕೆಲವು ಮಾಹಿತಿಗಳನ್ನು ಪಡೆಯಲು ಆಗಮ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಕೃಷ್ಣ ದೀಕ್ಷಿತರ ಬಳಿ ಕೆಲವೊಮ್ಮೆ ಹೋಗುತ್ತಿದ್ದರು. ಅವರ ಅಧ್ಯಯನ ಸ್ವಪ್ರಚೋದಿತ ಮತ್ತು ಸ್ವಪರಿಶ್ರಮದಿಂದ ಮುಂದೆ ಸಾಗಿತು.

೧೯೬೫ರಲ್ಲಿ ಅವರು NIMHANS ಬಿಟ್ಟಮೇಲೆ ಅವರ ಅಧ್ಯಯನದ ಬೀಜ ಬೇರೂರಿ ಪುಸ್ತಕಗಳ ರೂಪದಲ್ಲಿ ಅಭಿವ್ಯಕ್ತವಾಯಿತು. ೧೯೭೫ರಲ್ಲಿ ಹೊರಬಂದ ಮೇರುಕೃತಿ *'ಮೂರ್ತಿಶಿಲ್ಪ-ನೆಲೆ, ಹಿನ್ನೆಲೆ,'* ಸಾಹಿತ್ಯ ಅಕಾಡಮಿ

ಪ್ರಶಸ್ತಿ ಪಡೆಯಿತು. ೧೯೮೦ರಲ್ಲಿ ಪ್ರಕಟವಾದ '**ತಿರುಪತಿ ತಿಮ್ಮಪ್ಪ**'ಕ್ಕೂ ಸಾಹಿತ್ಯ ಪ್ರಶಸ್ತಿ ದೊರಕಿತು. ಅದಾದನಂತರ ದೇವಾಲಯದ ಹಿನ್ನೆಲೆ ಮತ್ತು ಜಾನಪದದ ಮೂಲ ಕುರಿತು ಕೆಲವು ಪುಸ್ತಕಗಳನ್ನು IBH ಪ್ರಕಾಶನ ಹೊರತಂದಿತು. ನಂತರ ಕಲ್ಪಿತರು ರಿಸರ್ಚ್ ಅಕಾಡಮಿಯವರು "ಪ್ರತಿಮಾ ಕೋಶ " ಅಥವ Encyclopedia of Indian Iconography ಯನ್ನು (೬ ಸಂಪುಟದಲ್ಲಿ), Vastu-Shilpa Kosha, Art and Architecture of Indian Temples (ಮೂರು ಭಾಗಗಳಲ್ಲಿ), 'Indian Temple Traditions', Devata-rupa-mala (ನಾಲ್ಕು ಭಾಗಗಳಲ್ಲಿ) 'Devata-dhyana-malika' ಮತ್ತು Agama-kosha (೧೨ ಸಂಪುಟಗಳಲ್ಲಿ) ಪ್ರಕಟವಾಯಿತು. ದಿಲ್ಲಿಯ Indian Books Centre ಅವರು Encyclopedia of Indian Iconography ಯನ್ನು ಮೂರು ಸಂಪುಟಗಳಲ್ಲಿ ಮರು ಪ್ರಕಟನೆ ಮಾಡಿದ್ದಾರೆ.

ಪ್ರೊ. ರಾಮಚಂದ್ರರಾಯರ ಇನ್ನೊಂದು ವಿಶೇಷತೆ ನೆನಪಿಗೆ ತರಬಹುದು. ಅವರು ಕುಲದೇವರಾದಂಥ ಶ್ರೀ ವೆಂಕಟೇಶ್ವರನ ಕ್ಷೇತ್ರವಾದ ತಿರುಮಲವನ್ನು ಬಿಟ್ಟು ಇತರ ದೇವಾಲಯಗಳಿಗೆ ಪೂಜೆ ಸಲ್ಲಿಸಲು ಸಾಮಾನ್ಯವಾಗಿ ಹೋಗುತ್ತಿರಲಿಲ್ಲ. ದೇವಾಲಯಗಳಿಗೆ ಹೋದರೂ ಅವರು ಸಂಶೋಧನಾತ್ಮಕ ದೃಷ್ಟಿಕೋಣದಿಂದ ಅದರ ವಾಸ್ತು ಶಿಲ್ಪವನ್ನು, ಮೂರ್ತಿ ಶಿಲ್ಪವನ್ನು ಮತ್ತು ಐತಿಹಾಸಿಕ ವಿವರಗಳನ್ನು ನೋಡುತ್ತಿದ್ದರು. ಅವರ ಪ್ರಕಾರ ನಮ್ಮ ಸನಾತನ ಸಂಪ್ರದಾಯದಲ್ಲಿ ಪೂಜೆ ಸಲ್ಲಿಸಬೇಕಾದದ್ದು ಏಕಾಂತದಲ್ಲಿ, ವೈಯಕ್ತಿಕವಾಗಿ .

ಈ ಪುಸ್ತಕದ ಅಕ್ಷರ ಜೋಡಣೆಯನ್ನು ಮಾಡಿದ ಶ್ರೀಮತಿ ವಸಂತಲಕ್ಷ್ಮೀ ಅವರಿಗೆ ಮತ್ತು ಅಂದವಾಗಿ ಮುದ್ರಿಸಿದ ವಾಗರ್ಥ ಅವರಿಗೆ ನಮ್ಮ ಸ್ಮಾರಕ ನಿಧಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಫಾಲ್ಗುಣ ಶುದ್ಧ ಸಪ್ತಮಿ
೨೧-೨-೨೦೧೦

ಡಾ॥ ಸಾ. ರಾ. ಸುದರ್ಶನ

ಮೊದಲ ಮಾತು

ಭಾರತೀಯ ದೇವಾಲಯಗಳ ತಾತ್ಪರ್ಯವನ್ನು ಬಹುಮಟ್ಟಿಗೆ ಜನ ಅರಿಯರು. ಅದರ ಬಗ್ಗೆ ಬೇಕಾದಂತೆ ತಪ್ಪು ಅಭಿಪ್ರಾಯಗಳೂ ಬೆಳೆದು ಬಂದಿವೆ. ಈಗ ಮಾರುಕಟ್ಟೆಗೆ ಬಂದಿರುವ ಗ್ರಂಥಗಳಲ್ಲಿ ಹಲವು ದೇವಾಲಯದ ವಾಸ್ತು, ಶಿಲ್ಪ, ಇತಿಹಾಸ, ಸಾಮಾಜಿಕ ನೆಲೆ ಇವನ್ನು ಕುರಿತವು. ಆದರೆ ಇವೆಲ್ಲ ದೇವಾಲಯದ ಬೇರೆ ಬೇರೆ ವಿವರಗಳನ್ನು ಬಿಡಿಬಿಡಿಯಾಗಿ ಮೇಲೆ ಮೇಲೆ ಪರಿಶೀಲಿಸುವ ಉದ್ಯಮಗಳು; ಇಂಥ ಉದ್ಯಮದಲ್ಲಿ ಮೂಲಭೂತವಾದ ಕಲ್ಪನೆ ಮರೆಯಾಗುವುದು ಸಹಜ ; ಒಟ್ಟಾರೆ ಚಿತ್ರ ತೋರಿಕೊಳ್ಳದಿರುವುದೂ ಸಹಜವೇ.

ದೇವಾಲಯವು ಸ್ಥಪತಿಯ, ಅರ್ಚಕನ ಅನುಭವದ ಆಳದಿಂದ ಎದ್ದದ್ದು , ಅದಕ್ಕೊಂದು ಆಗಮದ ಚೌಕಟ್ಟಿದೆ ಎಂಬುದನ್ನು ಸಾಮಾನ್ಯವಾಗಿ ಜನ ಮರೆಯುತ್ತಾರೆ. ದೇವಾಲಯದ ನಿರ್ಮಾಣ, ಅಲ್ಲಿ ನಡೆಯುವ ಆರಾಧನೆ ಇವುಗಳನ್ನು ಕುರಿತು ನಮ್ಮಲ್ಲಿ ದೊಡ್ಡದೊಂದು ಶಾಸ್ತ್ರವೇ ಇದೆ. ಈ ಶಾಸ್ತ್ರವನ್ನು ನೋಡದೆ ದೇವಾಲಯದ ತಾತ್ಪರ್ಯ ಅರ್ಥವಾಗುವುದಿಲ್ಲ.

ಆಗಮದ ಜಾಡನ್ನೇ ಹಿಡಿದು ನಮ್ಮ ದೇಶದ ದೇವಾಲಯಗಳ ಸಂಪ್ರದಾಯವನ್ನು ವಿವರಿಸಲೆಂದು ಈ ಪುಸ್ತಕಮಾಲೆ ಸಿದ್ಧವಾಗಿದೆ. ದೇವಾಲಯದ ಸಾಂಕೇತಿಕ ಸ್ವರೂಪವನ್ನೂ ಆಧ್ಯಾತ್ಮಿಕ ಪ್ರಯೋಜನವನ್ನೂ ವಿಚಾರಮಾಡುವುದು ಲೇಖಕರ ಉದ್ದೇಶ.

— ಎಸ್.ಕೆ. ರಾಮಚಂದ್ರ ರಾವ್

ಒಂದು

ಹಳೆಯ ಕಾಲದಲ್ಲಿ ದೇಗುಲ

ಪ್ರಾಣಿವರ್ಗದಲ್ಲಿ ಮನುಷ್ಯನ ಮೇಲ್ಮೆಯಿರುವುದು ಅವನ ಸಂಸ್ಕೃತಿಯಿಂದ. ಉಳಿದ ಪ್ರಾಣಿಗಳಲ್ಲಿ ಸಂಸ್ಕೃತಿಯಿರುವ ಕುರುಹುಗಳಿಲ್ಲ. ಮನುಷ್ಯನ ಬಂಡವಾಳವೇ ಸಂಸ್ಕೃತಿ. ಸಂಸ್ಕೃತಿಯಿರದಿದ್ದರೆ ಅವನ ಇರವೇ ಸಾಧ್ಯವಾಗುತ್ತಿರಲಿಲ್ಲ. ಎಂದರೆ, ಸಂಸ್ಕೃತಿಯೆನ್ನುವುದು ಬರಿಯ ಬೆಡಗಿನ ಬಿನ್ನಾಣವಲ್ಲ, ಯಾವುದೋ ಕನಸಿನ ಗಂಟಲ್ಲ, ಗಾಳಿಗೋಪುರವಲ್ಲ. ಅವನ ಉಳಿವಿಗೆ ಊರುಗೋಲು ಅದು. ಬದುಕಿನಲ್ಲಿ ಇಂದಿನ ಅಡ್ಡಿ ಮುಂದಿನ ಆತಂಕಗಳನ್ನೆಲ್ಲ ಬದಿಗೊತ್ತಿ ಮುಂದೆ ಸಾಗಲು ಸಂಸ್ಕೃತಿ ಒಂದು ಸಾಧನ. ಸಂಸ್ಕೃತಿಯೊಂದು ವಿವರವನ್ನು ಬಿಟ್ಟರೆ ಮನುಷ್ಯನಿಗೂ ಇತರ ಪ್ರಾಣಿಗಳಿಗೂ ವ್ಯತ್ಯಾಸ ಅಷ್ಟೇನಿರದು. ಅಷ್ಟುಮಾತ್ರವಲ್ಲ, ಇತರ ಪ್ರಾಣಿಗಳು ಬಾಳಿ ಬದುಕಲು ಇರುವ ಸಾಧನಸೌಲಭ್ಯಗಳು ಮನುಷ್ಯನಿಗಿಲ್ಲ. ಪ್ರಕೃತಿಯೇ ಅವನನ್ನು ದುರ್ಬಲನನ್ನಾಗಿಸಿದೆ. ಆದರೆ ಅವನ ಉಳಿವು ಸಾಗಲೆಂದು ಮೆದುಳನ್ನು ಧಾರಾಳವಾಗಿ ನೀಡಿದೆ. ಮೆದುಳನ್ನು ಬಳಸಿಯೇ ಅವನು ಸಂಸ್ಕೃತಿಯನ್ನು ಮೂಡಿಸಿಕೊಂಡುದು.

ಸಂಸ್ಕೃತಿಯ ಹರವಿನಲ್ಲಿ ಮನುಷ್ಯ ತನ್ನ ಕೈಗಳಿಂದ ಮಾಡಿರುವ ವಿವರಗಳೆಲ್ಲವೂ ಸೇರುತ್ತವೆ, ಮನಸ್ಸಿನಿಂದ ಒದಗಿಸಿಕೊಂಡಿರುವ ಸಾಧನೆಗಳೆಲ್ಲ ಸೇರುತ್ತವೆ. ಎಂದರೆ ಬದುಕಿನ

ವಿಶಿಷ್ಟ ವಿವರಗಳೂ ಸಂಸ್ಕೃತಿಯ ಪ್ರಕಾರಗಳೇ. ಆತಂಕಗಳೆಂದೆವಲ್ಲ, ಇವನ್ನು ಎದುರಿಸಲು ಮನುಷ್ಯ ಮಾನಸಿಕ ಕಲ್ಪನೆಗಳನ್ನು ತನ್ನ ಬಾಳಿನಲ್ಲಿ ತುಂಬಿಕೊಂಡ, ಕೈಗಳನ್ನು ಬಳಸಿ ಈ ಕಲ್ಪನೆಗಳಿಗೆ ರೂಪಗಳನ್ನು ಒದಗಿಸಿದ. ಕಲ್ಪನೆಗಳು ಧರ್ಮವೆಂದಾದುವು ; ಕೈ ಕೆಲಸ ಮೂರ್ತಿಶಿಲ್ಪವಾಯಿತು. ಮನುಷ್ಯ ಈ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಕಲ್ಪನೆಗಳೂ ಮೂರ್ತಿಗಳೂ ಇದ್ದೇ ಇವೆ ; ಅವನ ಬದುಕಿನ ಮುಖ್ಯ ವಿವರಗಳಾಗಿಯೇ ಇವೆ. ದೇವಾಲಯದಲ್ಲಿ ಕಲ್ಪನೆ-ಮೂರ್ತಿಗಳೆರಡೂ ಕಲೆಯುತ್ತವೆ. ಆದರಲ್ಲಿ ಧರ್ಮವೂ ಉಂಟು, ಕಲೆಯೂ ಉಂಟು. ಮನುಷ್ಯ ಪ್ರಾಣಿವರ್ಗದ ಕೆಳ ಹಂತಗಳಿಂದ ತಲೆಯನ್ನು ಮೇಲೆತ್ತಿ ನಿಂತಾಗಲೇ ಧರ್ಮವೂ ಅವನ ನೆರವಿಗೆ ಎದ್ದು ನಿಂತಿತು. ಪ್ರಾಕ್ತನ ಸಂಶೋಧನೆಗಳಿಂದ ಈ ವಿಚಾರ ಸ್ಪಷ್ಟವಾಗಿದೆ. ಮನುಷ್ಯನ ಅತ್ಯಂತ ಪ್ರಾಚೀನ ಅವಶೇಷಗಳೊಂದಿಗೇ ಧಾರ್ಮಿಕವೆನ್ನಬಹುದಾದ ವಿವರಗಳ ಸೂಚನೆಯೂ ಇದೆ.

ಮನುಷ್ಯನಿಗೆ ಧರ್ಮದ ಅಗತ್ಯವಿದೆ. ಪ್ರಕೃತಿಯ ಪ್ರಕೋಪ ಗಳಿಂದ, ನೆರೆಹೊರೆಯ ಜನರ ಆಕ್ರಮಣದಿಂದ ತನ್ನನ್ನು ತಾನು ಕಾಪಿಟ್ಟುಕೊಳ್ಳಲು ಧಾರ್ಮಿಕ ಕಲ್ಪನೆಗಳು ನೆರವಾದುವು. ಬದುಕಿನ ಆತಂಕದಲ್ಲಿ ಧರ್ಮವೊಂದು ರಕ್ಷೆಯಾಯಿತು. ಇಂದಿನ ಕಿರಿಕಿರಿ, ಮುಂದಿನ ಅನಿಶ್ಚಿತತೆ ಎರಡೂ ಅವನಲ್ಲಿ ಭಯವನ್ನು ಮೂಡಿಸಿದುವು. ಧರ್ಮಕ್ಕೆ ಭಯವೇ ಮೂಲ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು. ಈಗಲೂ ನಮ್ಮನ್ನು ಸುತ್ತರಿದು ನಿಂತಿರುವ ಧಾರ್ಮಿಕ ವಿವರಗಳನ್ನು ನೋಡಿದರೆ, ಅದರಡಿಯಲ್ಲಿರುವುದು ಭೀತಿ ಎಂಬುದನ್ನು ಮನಗಾಣುತ್ತೇವೆ. ಹೊರಗಣ ನಿಸರ್ಗದ ಮಡಿಲಲ್ಲಿ

ಅಡಗಿರುವ ವೈಚಿತ್ರ್ಯ, ಅದ್ಭುತಗಳನ್ನು ಮನುಷ್ಯ ಅಡಿಗಡಿಗೆ ಆಲೋಚಿಸಿ ತನ್ನ ದೌರ್ಬಲ್ಯವನ್ನೂ ಅಸಹಾಯಕತೆಯನ್ನೂ ಮನದಟ್ಟುಮಾಡಿಕೊಳ್ಳುವನು. 'ಹರ ಮುನಿದರೆ ನರ ಕಾವನೇ ?' ಎಂದುಕೊಳ್ಳುವನು. ಪ್ರಕೃತಿಯು ಸಿಟ್ಟಿಗೆದ್ದರೆ ಮನುಷ್ಯನ ಆಟ ಏನೇನೂ ಸಾಗದು ಎಂದು ನಿಟ್ಟುಸಿರು ಬಿಡುವನು.

ಮನುಷ್ಯನ ಬಾಳನ್ನು ನಡೆಸುವುದು ಈ ಆತಂಕ, ಭೀತಿಗಳಷ್ಟೇ ಎಂದು ಬಗೆಯಬಾರದು. ನಿಸರ್ಗದ ಸ್ವಾರಸ್ಯವನ್ನು ಕಂಡು, ಅದರ ಆಳ-ಎತ್ತರಗಳನ್ನು ಅಳೆಯಲಾಗದೆ ಮನುಷ್ಯ ದಿಗ್ಭ್ರಾಂತನಾದಾಗ, ಅವನಲ್ಲಿ ಭಯವೂ ಮೂಡುತ್ತದೆ, ಅದಕ್ಕಿಂತ ಹೆಚ್ಚಾಗಿ ಅಚ್ಚರಿಯೂ ಕಾಣಿಸಿಕೊಳ್ಳುತ್ತದೆ. ಅದ್ಭುತವನ್ನು ನೋಡಿದಾಗ ಆಶ್ಚರ್ಯಪಡುವ ಸಾಮರ್ಥ್ಯ, ತನ್ನಲ್ಲಿ ಭಯವನ್ನು ಒದಗಿಸುವ ವಿವರವನ್ನು ನೋಡಿ ತಲೆದೂಗಿ ಮೆಚ್ಚಿಕೊಳ್ಳುವ ಸಾವಧಾನ ಅವನ ಮೆದುಳಿಗೆ ಸಹಜವಾದ ಪ್ರವೃತ್ತಿಗಳೇ. ನಿಸರ್ಗದ ಸೌಂದರ್ಯ ಹಿರಿಮೆಗಳನ್ನು ಅವನು ಕಾಣದೆ ಇರಲಾರ. ತಲೆಯೆತ್ತಿ ಆಕಾಶವನ್ನು ನೋಡಿದಾಗ, ಎದುರಿಗೆ ಎದ್ದುನಿಂತ ಬೆಟ್ಟವನ್ನು ದಿಟ್ಟಿಸಿದಾಗ, ಮೇರೆಯರಿಯದೆ ಹರಡಿದ ಸಾಗರವನ್ನು ಕಂಡಾಗ, ಮೇಲೆರಗುವಂತೆ ಮೇಲಿಂದ ಜಾರಿ ಬರುವ ಮಿಂಚು ತನ್ನ ಕಣ್ಣನ್ನು ಕೋರೈಸಿದಾಗ ಅವನಿಗೆ ಭಯವೂ ಆಗುತ್ತದೆ. ಅಚ್ಚರಿಯೂ ಆಗುತ್ತದೆ. ಧರ್ಮಕ್ಕೆ ಭಯ ತಾಯಾದರೆ ಆಶ್ಚರ್ಯ ತಂದೆ ; ಎರಡರ ಕೂಸು ಅದು.

ಇವೆರಡರೊಂದಿಗೆ ಇನ್ನೊಂದು ಪ್ರವೃತ್ತಿ ಬೆರೆಯುತ್ತದೆ. ತನ್ನ ಪರಿಸರದಿಂದ ಮುಂದೆ ಸಾಗುವ, ತನ್ನ ನೆಲೆಯಿಂದ ಮೇಲೇಳುವ, ಕಣ್ಣಿಗೆ ಕಾಣದುದನ್ನು ಕಾಣಬಯಸುವ, ಕೈಗೆ ಎಟುಕದುದನ್ನು ಹಿಡಿದು ಕೊಳ್ಳುವ ಪ್ರವೃತ್ತಿ ಮನುಷ್ಯನಿಗೆ ಸಹಜವಾದುದು. ಭಯದಿಂದ

ಮನುಷ್ಯ ಮುದುಡಿಕೂಡುವುದಿಲ್ಲ ; ಅಚ್ಚರಿಯಿಂದ ಸುಮ್ಮನೆ ಬಾಯ್ದೆರೆದು ನಿಲ್ಲುವುದಿಲ್ಲ. ನಿಸರ್ಗದ ಸ್ವಾರಸ್ಯವನ್ನು ಸೀಳಿ ಅದರ ಹಿಂದಿರುವ ತತ್ತ್ವವನ್ನು ಕಂಡು ಅದನ್ನು ತನ್ನದಾಗಿಸಿಕೊಳ್ಳುವ ತವಕ ಮನುಷ್ಯನಲ್ಲಿ ಇದೆ. ದೂರವಿರುವುದನ್ನು ಹತ್ತಿರ ಸೆಳೆದು ಕೊಳ್ಳಬೇಕು, ಮೇಲಿರುವುದನ್ನು ಕೆಳಗಿಳಿಸಿಕೊಳ್ಳಬೇಕು, ಅಡಗಿರು ವುದನ್ನು ಹೊರಮಾಡಬೇಕು, ಅದ್ಭುತವಾದುದನ್ನು ತನ್ನ ಅರಿವಿನೊಳಗೆ ತೂರಿಸಿಕೊಳ್ಳಬೇಕು ಎನ್ನುವ ಹಂಬಲ ಮನುಷ್ಯನಿಗೆ ಹಿಂದಿನಿಂದಲೂ ಇದೆ. ಅಚ್ಚರಿಪಡುವ ಪ್ರವೃತ್ತಿಯೂ ಅರಿತು ಕೊಳ್ಳುವ ಕುತೂಹಲವೂ ಕಲೆತು ಧರ್ಮಕ್ಕೆ ಹೊಸದೊಂದು ಕಳೆ ಕೂಡಿ ಬಂದಿತು. ಅದರಲ್ಲಿ ಕಲೆಯ ಅಂಶ ಅವಶ್ಯವೆಂಬಂತೆ ಸೇರಿತು. 'ಪವಿತ್ರ'ವೆಂಬ ಭಾವನೆಯ ಅಭಿವ್ಯಕ್ತಿಗಳೆನಿಸಿದ ವ್ರತ, ಕಲ್ಪ, ಪೂಜೆ, ಮಂತ್ರ, ತಂತ್ರ, ಮೂರ್ತಿ, ದೇಗುಲ ಮೊದಲಾದವುಗಳಲ್ಲಿ ಕಲೆಯ ಪಾತ್ರ ತಪ್ಪದೆ ಸೇರಿಕೊಂಡಿದೆ. ಧಾರ್ಮಿಕ ಕಲ್ಪನೆಗಳಲ್ಲಿ ಕಲೆಗಾರಿಕೆಯ ಪ್ರಕಾರವನ್ನು ನಾವು ಎಲ್ಲೆಲ್ಲಿಯೂ ಕಾಣಬಹುದು. ಕಲೆಯ ಮೂಲದಲ್ಲಿ ಅಚ್ಚರಿಯೂ ಕುತೂಹಲವೂ ಅಡಗಿವೆ ; ಎರಡಕ್ಕೂ ವಿಷಯವಾದುದನ್ನು ಅನುಭವಕ್ಕೆ ತಂದುಕೊಳ್ಳುವ ಹಟವೂ ಸಾಹಸವೂ ಒದಗಿಬರುತ್ತದೆ.

ನಮ್ಮನ್ನು ಒಳಮಾಡಿಕೊಂಡು, ನಮ್ಮ ಆತಂಕ ಆಶ್ಚರ್ಯ ಕುತೂಹಲವೇ ಮೊದಲಾದ ಭಾವನೆಗಳನ್ನು ಮೂಡಿಸುತ್ತ ಸುತ್ತರಿದ ಪ್ರಪಂಚದ ಗರ್ಭದಲ್ಲಿ ಅಡಗಿರುವ ಶಕ್ತಿಯನ್ನು ಅರಿತುಕೊಳ್ಳಬೇಕು. ವಶಮಾಡಿಕೊಳ್ಳಬೇಕು ಎನ್ನುವ ಹಂಬಲ ಮನುಷ್ಯನಿಗೆ ಸಹಜ ವಾಗಿಯೇ ಬರುತ್ತದೆ. ನಿಸರ್ಗದಲ್ಲಿನ ವಿವರ ಗಾಢವಾಗಿದ್ದಷ್ಟೂ ಅದ್ಭುತವಾಗಿದ್ದಷ್ಟೂ ಆತಂಕಕಾರಿಯಾಗಿದ್ದಷ್ಟೂ ಅದರಲ್ಲಿನ ಶಕ್ತಿಯ

ಕಲ್ಪನೆ ಆಳವಾಗುತ್ತದೆ. ಮುಗಿಲೆತ್ತರ ನಿಂತ ಬೆಟ್ಟ, ಪಾತಾಳ ಮುಟ್ಟುವ ಕಮರಿ, ಹಗಲಲ್ಲೇ ಕತ್ತಲೆಗವಿಯುವ ದಟ್ಟಡವಿ, ಬಾನಿನೊಂದಿಗೆ ಬೆರೆಯುವ ಸಾಗರ, ಪರ್ವತದ ತುತ್ತ ತುದಿಯಲ್ಲಿ ನದಿಯ ಉಗಮ ಇವೆಲ್ಲ ನಿದರ್ಶನಗಳು. ಇವುಗಳ ಸಂಪರ್ಕದಲ್ಲಿ ನಿಂತ ಮನುಷ್ಯನಿಗೆ ಅಚ್ಚರಿಯಾಗುತ್ತದೆ, ಆತಂಕವೆನ್ನಿಸುತ್ತದೆ, ಅದ್ಭುತವೆಂಬ ಅನುಭವ ವಾಗುತ್ತದೆ, ಇದರಲ್ಲಿ ಯಾವುದೋ ಶಕ್ತಿ ಅಡಗಿದೆಯೆಂಬ ಅರಿವಾಗುತ್ತದೆ, ಅದರ ವಿಚಾರದಲ್ಲಿ ಪೂಜ್ಯಬುದ್ಧಿ ಮೂಡುತ್ತದೆ. ಹಿಂದಿನವರು ಬೆಟ್ಟಗುಡ್ಡಗಳನ್ನು ಕಾಡುಮೇಡುಗಳನ್ನು ನದಿ ಸಾಗರಗಳನ್ನು ದೇವತೆಗಳೆಂದು ಬಗೆದದ್ದು ಈ ನೆಲೆಯಲ್ಲಿಯೇ. ಹಾಗೆಯೇ ಅಪೂರ್ವವೆನಿಸಿದ, ವಿಚಿತ್ರವೆನಿಸಿದ, ಭಯಾನಕವೆನಿಸಿದ ವಸ್ತುಗಳಲ್ಲಿಯೂ ಅವರು ಅದ್ಭುತಶಕ್ತಿಗಳನ್ನು ಕಂಡರು. ಅಪರೂಪದ ಕಲ್ಲು, ಸೋಜಿಗವಾದ ಮರದ ಆಕಾರ, ಆಕಾಶದಿಂದ ಬಿದ್ದ ಧೂಮಕೇತುವಿನ ಕುರುಹು, ಸಂಜೆಯಂದು ದಿಗಿಲುಬೀಳಿಸುವ ಒಣ ಮರದಕೊಂಡು ಇವುಗಳಲ್ಲಿ ಅವರು ಶಕ್ತಿಯನ್ನು ಕಲ್ಪಿಸಿಕೊಳ್ಳುವುದು ಕಷ್ಟವಾಗಲಿಲ್ಲ. ಪೂಜಾಸ್ಥಾನಗಳ ಮತ್ತು ಅರ್ಚನಾಮೂರ್ತಿಗಳ ಹಿನ್ನೆಲೆಯನ್ನು ನಾವು ಇಲ್ಲಿ ಗುರುತಿಸಬೇಕು.

ಹಿಂದಿನ ಕಾಲದ ಮನುಷ್ಯನಿಗೆ ಪೂಜಾಬುದ್ಧಿ ಬೆಳೆದುದು ಅವನ ಅಜ್ಞಾನದಿಂದಷ್ಟೇ ಎನ್ನಲಾಗದು. ಅಪೂರ್ವವಾದುದರ, ಅದ್ಭುತವೆನಿಸಿದುದರ ಎದುರು ನಿಂತಾಗ ಅವನಲ್ಲಿ ಒದಗಿಬಂದ ಉದಾತ್ತಭಾವನೆಗಳೂ ಇಲ್ಲಿ ಕೆಲಸ ಮಾಡುತ್ತವೆ. ಅದ್ಭುತವಾದುದನ್ನು ಅನುಭವಿಸುವ, ಸುಂದರವಾದುದನ್ನು ಸವಿಯುವ ಸಾಮರ್ಥ್ಯ ಮನುಷ್ಯನಿಗಿರುವುದರಿಂದಲೇ ಅವನಲ್ಲಿ ಆರಾಧನಾಪ್ರವೃತ್ತಿ ಕಾಣಿಸಿಕೊಂಡಿತು. ಈ ಸಾಮರ್ಥ್ಯ ಇಂದಿಗೂ ಕಳೆಗುಂದಿಲ್ಲ, ಹಳತಾಗಿಲ್ಲ, ವಿಜ್ಞಾನದಲ್ಲಿಯೂ ಇದರ ಪಾತ್ರವಿಲ್ಲದೆ ಇಲ್ಲ, ಸಾಹಿತ್ಯ,

ಕಲೆ, ಧರ್ಮಗಳ ವಿಚಾರವಂತೂ ಸರಿಯೇ ಸರಿ. ಈ ಸಾಮರ್ಥ್ಯ ಇರುವುದರಿಂದಲೇ ಬದುಕು ಸ್ವಾರಸ್ಯವಾಗುತ್ತದೆ, ಅರ್ಥವತ್ತಾಗುತ್ತದೆ.

ಅಪೂರ್ವ, ಅದ್ಭುತ, ದಿವ್ಯವೆಂದಾದುದನ್ನು ಅನುಭವಿಸುವ ಸಾಮರ್ಥ್ಯವಿರುವಂತೆಯೇ ಮನುಷ್ಯನಿಗೆ ಅದರ ಪ್ರತಿಕೃತಿಗಳನ್ನು ಕಲ್ಪಿಸಿಕೊಳ್ಳುವ, ರೂಪಿಸುವ ಸೃಜನಶಕ್ತಿಯೂ ಇದೆ. ನಿಸರ್ಗಸಿದ್ಧವಾದ ವಸ್ತುಗಳನ್ನು ಸಣ್ಣಪ್ರಮಾಣದಲ್ಲಿ ಕಲಾತ್ಮಕವಾಗಿ ಮಾಡಿಟ್ಟುಕೊಳ್ಳುವ ಹವ್ಯಾಸವೂ ನಿಸರ್ಗಸಿದ್ಧವಾದುದೇ. ಬೆಟ್ಟದ ಆಕಾರವನ್ನು ತಳೆದ ದೇಗುಲ, ಶಿಖರದಂತೆ ಕಾಣುವ ಗೋಪುರ, ಒಣಮರದ ಕೊಂಟನು ಹೋಲುವ ಲಿಂಗ ಇವೆಲ್ಲ ಈ ಹವ್ಯಾಸದ ಅಭಿವ್ಯಕ್ತಿಗಳೇ. ಹೀಗೆ ಪ್ರತಿಕೃತಿಗಳನ್ನೂ ಪ್ರತಿಮೆಗಳನ್ನೂ ಮಾಡುವಾಗ ಮನುಷ್ಯ ತನ್ನ ಅನುಭವವಷ್ಟನ್ನೇ ಅವಲಂಬಿಸದೆ ತನ್ನ ಆಕಾಂಕ್ಷೆ-ಪ್ರತೀಕ್ಷೆಗಳನ್ನೂ, ಕಲ್ಪನೆಗಳನ್ನೂ ಬಳಸಿಕೊಂಡ.

ಧರ್ಮದ ನೆಲೆಯಲ್ಲಿ ಪ್ರತಿಕೃತಿಗಳ ಬಳಕೆ ಮೊದಲಾಗುವ ಮೊದಲೇ ಪ್ರಕೃತಿಸಿದ್ಧವಾದ ಪ್ರತಿಮೆಗಳನ್ನು ಬಳಸುವುದಿದ್ದಿತು. ಯಾವುದಾದರೂ ಕೆಲಸಕ್ಕೆ ಹೊರಡುವ ಮೊದಲು ಆದಿಮಾನವನು ಇಂಥ ಪ್ರತಿಮೆಗಳನ್ನು ಬಳಸಿಕೊಳ್ಳುತ್ತಿದ್ದ ನಿದರ್ಶನಗಳಿವೆ. ಅವನು ಬೇಟೆಗೆ ಹೊರಡುವ ಮುನ್ನ ಯಾವುದಾದರೂ ಅಪೂರ್ವವಾದ ಕಲ್ಲುಬಂಡೆಯನ್ನೋ ಸೋಜಿಗವೆನಿಸುವ ಮರವನ್ನೋ ನೋಡಿದರೆ, ಆ ದಿನದ ಬೇಟೆ ಯಶಸ್ವಿಯಾದರೆ ತಾನು ನೋಡಿದ ಪದಾರ್ಥಕ್ಕೂ ಬೇಟೆಯ ಯಶಸ್ಸಿಗೂ ನಂಟನ್ನು ಕಲ್ಪಿಸಿಕೊಳ್ಳುತ್ತಿದ್ದುದು ಸಹಜವೇ. ಮುಂದೆ ಬೇಟೆಗೆ ಹೊರಡುವಾಗಲೆಲ್ಲ ಅದೇ ಕಲ್ಲು ಬಂಡೆಯನ್ನು, ಅದೇ ಮರವನ್ನು ನೋಡಿಯೇ ಹೊರಡುವ ಹಂಬಲ ಅವನಲ್ಲಿ ಮೂಡುತ್ತಿದ್ದುದೂ ಆಶ್ಚರ್ಯವಲ್ಲ, ತಾನು ಕೈಗೊಂಡ ಎಲ್ಲ

ಕೆಲಸಗಳಲ್ಲೂ ಜಯಗಳಿಸಲು ಇದೇ ಉಪಾಯವನ್ನು ಅವನು ಹಿಡಿಯುವುದೂ ಸರಿಯೇ. ಆ ಕಲ್ಲುಬಂಡೆ, ಆ ಮರ ಅವನ ಪಾಲಿಗೆ ಅನುಕೂಲವಾದ ಶಕ್ತಿ ; ತನಗೆ ನೆರವನ್ನು ನೀಡುವ ವಿವರ. ಹೀಗೆ ನಿಸರ್ಗದ ವಸ್ತು ಅವನ ಪಾಲಿಗೆ ಪ್ರತಿಮೆಯಾಯಿತು. ಕಲ್ಲುಬಂಡೆ ದೂರವಾದಾಗ, ಮರ ಒಣಗಿ ಬಿದ್ದಾಗ ಅದರ ಪ್ರತಿಕೃತಿಯನ್ನು ಮಾಡಿಟ್ಟುಕೊಳ್ಳುವ ಪ್ರವೃತ್ತಿಮೂಡಿತು. ಪ್ರಾಚೀನ ಪ್ರತಿಕೃತಿಗಳೆಲ್ಲ ನಿಸರ್ಗಸಿದ್ಧವಾದ ವಿವರಗಳ ಪಡಿಯಚ್ಚುಗಳು. ಕಲೆಗಾರನ ಕಲ್ಪನೆ ಇಲ್ಲಿ ಕೆಲಸ ಮಾಡತೊಡಗುವ ಮೊದಲಿನ ನೆಲೆ ಇದ್ದಿತು.

ಹಿಂದಿನ ಕಾಲದ ಧಾರ್ಮಿಕ ಕಲ್ಪನೆ ಇನ್ನೊಂದು ಬಗೆಯಾಗಿಯೂ ಹರಿದಿದೆ. ಆದಿಮಾನವನು ಬೇಟೆಗೆ ಹೊರಡುವ ಮೊದಲು ಯಶಸ್ಸುಗಳಿಸಲು, ತನ್ನ ಗುಹೆಯೆದುರು ಮಂಡಲವೊಂದನ್ನು ಬರೆದು, ಅದರ ನಡುವೆ ತನಗೆ ಬೇಕಾದ ಪ್ರಾಣಿಯ ಆಕಾರವನ್ನು ಸ್ಥೂಲವಾಗಿ ಬರೆದು, ಅದರ ಮೈಮೇಲೆ ಬಾಣವೊಂದು ನಾಟಿದಂತೆ ಗುರುತಿಸಿ ಹೊರಡುತ್ತಿದ್ದ . ಇದು ಬೇಟೆಗೆ ಪೂರ್ವ ಸಿದ್ಧತೆ. ಹಾಗೆ ಮಾಡಿ ಹೊರಟರೆ ಗೆಲುವು ತಪ್ಪದು ಎಂದು ಅವನ ನಂಬಿಕೆ. ಅಥವಾ, ಯಾವುದಾದರೂ ಅಪೂರ್ವವಾದ ಪದಾರ್ಥವೊಂದನ್ನು ಮೈಮೇಲೆ ಧರಿಸಿ ಹೊರಟರೆ ಕೈಹಿಡಿದ ಕೆಲಸದಲ್ಲಿ ಜಯ ಎಂಬ ನಂಬಿಕೆ. ಕಾಕತಾಳೀಯವಾಗಿ ಆ ದಿನ ಜಯ ಒದಗಿದರೆ, ಅದಕ್ಕೆ ಕಾರಣ ಈ ಪದಾರ್ಥ ಎಂದು ನಂಬಿಕೆ ಬೇರೂರುವುದು. ಮುಂದೆ ಯಾವ ಕೆಲಸಕ್ಕೆ ಹೊರಟರೂ ಜೊತೆಯಲ್ಲಿ ಈ ಪದಾರ್ಥ ಸಿದ್ಧ! ಹೀಗೆ ಗೆಲುವನ್ನು ಒದಗಿಸಿಕೊಡುವ ವಸ್ತುವಿನ ಮೇಲೆ ಆದರ, ಅಭಿಮಾನಗಳು ಬೆಳೆಯದೆ ಇರುತ್ತದೆಯೆ ? ಅವನ ಬದುಕಿನಲ್ಲಿ ಎಲ್ಲಿಲ್ಲದ ಗೌರವ ಅದಕ್ಕೆ. ಮೈಮೇಲೆ ಧರಿಸಿಕೊಳ್ಳದಾಗ ಅದಕ್ಕಾಗಿಯೇ ಸಿದ್ಧಪಡಿಸಿದ

ಸ್ಥಳದಲ್ಲಿ ಅದನ್ನು ಇರಿಸುವನು ; ಅದನ್ನು ಜೋಪಾನವಾಗಿ ಕಾಪಿಟ್ಟುಕೊಳ್ಳುವನು, ಅದನ್ನು ಬೇರೆ ಯಾರೂ ಮುಟ್ಟದಂತೆ ನೋಡಿಕೊಳ್ಳುವನು, ತಾನು ಮುಟ್ಟುವಾಗಲೂ ಎಚ್ಚರಿಕೆ ವಹಿಸುವನು. ಆ ವಸ್ತು ಅವನ ಆರಾಧ್ಯದೈವ, ಜೀವನರಕ್ಷೆ, ಅದನ್ನು ಇರಿಸಿದ ಸ್ಥಳವೇ ದೇಗುಲ. ಬರಿಯ ನೆಲವಾದರೆ ಅದನ್ನು ಸಾರಿಸಿ, ಗುಡಿಸಿ, ಓರಣವಾಗಿರಿಸುವನು. ಇಲ್ಲವಾದರೆ ಮಣ್ಣಿನ ಅಥವಾ ಕಲ್ಲಿನ ಕಟ್ಟೆಯೊಂದನ್ನು ಮಾಡುವನು. ಗುಹೆಯ ಹೊರಗಾದರೆ, ಮರದಡಿಯೋ ಕಲ್ಲುಬಂಡೆಯ ಮೇಲೋ ಆವರಣವೊಂದನ್ನು ರಚಿಸುವನು. ಅಲ್ಲಿ ಬೇರೆ ಯಾರೂ ಬರದಂತೆ, ತನ್ನ ಪ್ರತಿಮೆಯನ್ನು ಕೊಂಡೊಯ್ಯದಂತೆ ಕಟಕಟೆಯನ್ನು ಕಟ್ಟುವನು, ಪ್ರತಿಮೆ ಎಲ್ಲರಿಗೂ ಕಾಣದಂತೆ ಅದನ್ನು ಮುಚ್ಚುವನು. ದೇಗುಲದ ಕಟ್ಟಡ ಮೊದಲಾದುದು ಹೀಗೆ.

ಪ್ರತಿಮೆಯನ್ನು ಇವನು ಹೀಗೆ ನೋಡಿಕೊಳ್ಳುವಾಗ, ವಸ್ತುವಿಗಿಂತ ಹೆಚ್ಚಾಗಿ ಕಲ್ಪನೆಯು ಕೆಲಸಮಾಡುತ್ತದೆ. ಪದಾರ್ಥಕ್ಕೇ ಇಲ್ಲದ ಗುಣಧರ್ಮಗಳೆಲ್ಲ, ಹಿರಿಮೆ-ಸಾಮರ್ಥ್ಯಗಳೆಲ್ಲ ಅವನ ಕಲ್ಪನೆಯ ನೆರವಿನಿಂದ ಅದರಲ್ಲಿ ಮೂಡಿಬರುತ್ತವೆ. ಸಾಧಾರಣ ವಾದ ಪದಾರ್ಥ ಆರಾಧ್ಯ ಪ್ರತಿಮೆಯಾಗುವುದು ಮನುಷ್ಯನ ಕಾಣ್ಕೆಯ ಬಲದಿಂದ. ಹೀಗೆ ಪ್ರಾಕೃತಿಕ ಪ್ರತಿಮೆಗಳನ್ನು ಬಳಸುವ, ಪ್ರತಿಕೃತಿಗಳನ್ನು ಸಿದ್ಧಪಡಿಸಿ ಕೊಳ್ಳುವ ಪ್ರವೃತ್ತಿ ಮನುಷ್ಯನಲ್ಲಿ ಮೂಡಿಬಂದುದೇ ಧರ್ಮದ ಕಲ್ಪನೆಗಳಿಗೂ ಪದ್ಧತಿಗಳಿಗೂ ಅಭಿವ್ಯಕ್ತಿ ಮೂಡಿಬಂದಿತು. ಪ್ರಪಂಚದಲ್ಲಿ ತನಗೆ ಪ್ರತಿಕೂಲ ವಾದ ವಿವರಗಳ ನಡುವೆ, ಉಳಿದ ಪ್ರಾಣಿಗಳ ಉಪದ್ರವದ ಮಧ್ಯೆ, ಮನುಷ್ಯ ತನ್ನನ್ನೇ ತಾನು ಗುರುತಿಸಿಕೊಂಡು, ತನ್ನ ಸಾಮರ್ಥ್ಯ-

ದೌರ್ಬಲ್ಯಗಳನ್ನು ಅಳೆದುಕೊಂಡು, ಬದುಕಿನ ಆಗು-ಹೋಗುಗಳನ್ನು ಗೊತ್ತುಮಾಡಿಕೊಂಡಂದೇ, ಪ್ರಪಂಚದಲ್ಲೆಲ್ಲ ಹರಡಿದ್ದರೂ ಅಡಗಿರುವ, ಅಜ್ಞಾತವಾದರೂ ಅದ್ಭುತವಾದ ಶಕ್ತಿಗಳಿಂದ ನೆರವನ್ನು ಪಡೆದುಕೊಳ್ಳಬೇಕೆಂಬ ಹಂಬಲ ಮೂಡಿತು.

ಪಾವಿತ್ರ್ಯದ ಕಲ್ಪನೆ ಮೂಡಿದ ಮೇಲೆ ಪ್ರತಿಮೆಗಳನ್ನು ಬಳಸತೊಡಗಿದರೆಂದೂ ಮಾಡತೊಡಗಿದರೆಂದೂ ಹೇಳುವುದು ತಪ್ಪಾದೀತು. ವಾಸ್ತವವಾಗಿ ಪ್ರತಿಮೆಗಳನ್ನು ಬಳಸತೊಡಗಿದ ಮೇಲೇ ಪಾವಿತ್ರ್ಯದ ಕಲ್ಪನೆ ಮೂಡಿ ಬಂದಿತು. ಯಾವುದಾದರೊಂದು ನಿಸರ್ಗ ಸಿದ್ಧವಾದ ವಸ್ತುವಿನ ಅಪೂರ್ವ ಆಕಾರ ಅಥವಾ ಅಲೌಕಿಕ ಸಾಮರ್ಥ್ಯಗಳನ್ನು ಗಮನಿಸಿ, ಅದರಿಂದ ಆಕರ್ಷಿತನಾಗಿ ಮನುಷ್ಯ ಅದನ್ನು ಬಳಸತೊಡಗಿ ಅದರಲ್ಲಿ ವಿಶೇಷವಾದ ಸನ್ನಿಧಾನವೊಂದನ್ನು ಕಲ್ಪಿಸಿಕೊಳ್ಳುತ್ತಾನೆ. ತನ್ನ ವ್ಯವಹಾರದಲ್ಲೆಲ್ಲ ಈ ಪ್ರತಿಮೆಯೊಂದಿಗೆ ಸಂಪರ್ಕವನ್ನು ಇರಿಸಿಕೊಂಡೇ ತೊಡಗುತ್ತಾನೆ. ಉಳಿದ ವಸ್ತುಗಳಂತೆ ಅದೊಂದು ಸಾಧಾರಣವಸ್ತುವಾಗಿ ಉಳಿಯುವುದಿಲ್ಲ. ಅದು ಅವನ ಬದುಕಿನಲ್ಲಿ ನಿಕಟವಾದ ಸಂಬಂಧವನ್ನೂ ವಿಶೇಷವಾದ ಪಾತ್ರವನ್ನೂ ಪಡೆದುಕೊಳ್ಳುತ್ತದೆ. ಇದೇ ಪಾವಿತ್ರವೆನಿಸಿಕೊಳ್ಳುವುದು. ಆ ವಸ್ತುವನ್ನು ಅವನು ಹೇಗೋ ಕಳೆದುಕೊಂಡನೆಂದರೆ, ಅದರದ್ದೊಂದು ಪ್ರತಿಕೃತಿಯನ್ನು ಮಾಡಿ ಇರಿಸಿಕೊಳ್ಳುವನು. ಪ್ರತಿಕೃತಿಯನ್ನು ಸಿದ್ಧಪಡಿಸುವಾಗ ನೆನಪಷ್ಟೇ ನೆರವಾಗುವುದಿಲ್ಲ ; ಅವನ ಕಲ್ಪನೆಗಳೂ ಕೆಲಸಮಾಡುತ್ತವೆ. ಪವಿತ್ರವಾದ ಪದಾರ್ಥವೆಂದು ಅವನು ಬಗೆದು, ಅದರಲ್ಲಿನ ಸನ್ನಿಧಾನವನ್ನು ಸೂಚಿಸುವಂತೆ ವಿವರಗಳನ್ನು ಸೇರಿಸುವನು ; ಪದಾರ್ಥವೆಂಬ ಭಾವನೆಗಿಂತ ತನ್ನ ದೈವವೆಂಬ ನಂಬಿಕೆ ಪ್ರತಿಕೃತಿಯನ್ನು ನಡೆಸುತ್ತದೆ. ಪ್ರತಿಕೃತಿ ಸಿದ್ಧವಾದಾಗ ಅವನ

ಪೂಜ್ಯಬುದ್ಧಿ ಮಾತ್ರವಲ್ಲದೆ ಭಾವಶುದ್ಧಿಯೂ ಕೈಗೂಡುವಂತೆ ಇರುತ್ತದೆ.

ಪ್ರತಿಮೆಗಳನ್ನು ಬಳಸುವುದು ಮತ್ತು ಮಾಡುವುದು ಮನುಷ್ಯ ನಲ್ಲಿಯೇ ಕಾಣಬಹುದಾದುದು ; ಇತರ ಪ್ರಾಣಿಗಳಲ್ಲಿ ಇದರ ಸಾಧ್ಯತೆ ಇದ್ದಂತಿಲ್ಲ, ಆದರೆ ಮೇಲ್ಮಟ್ಟದ ವಾನರವರ್ಗದಲ್ಲಿ ಪ್ರತಿಮೆಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಪ್ರವೃತ್ತಿಯಿರುತ್ತದೆ. ಮನಃಶಾಸ್ತ್ರಜ್ಞ ನಾದ ಕೊಯ್ಲರ್ ನಡೆಸಿದ ಸಂಶೋಧನೆಯೊಂದು ಸ್ವಾರಸ್ಯವಾದುದು. ಚಿಂದಿಬಟ್ಟೆಗಳಿಂದ ಅವನು ಕತ್ತೆಯ ಸಣ್ಣ ಪ್ರತಿ ಕೃತಿಯೊಂದನ್ನು ಮಾಡಿದ. ಪ್ರತಿಕೃತಿಯೇನೋ ಒರಟಾಗಿದ್ದಿತು ; ಮನಃಶಾಸ್ತ್ರಜ್ಞನೇನು ಕುಶಲಕರ್ಮಿಯಲ್ಲವಷ್ಟೆ! ಅದು ಕತ್ತೆಯನ್ನು ತೀರ ಸ್ಥೂಲವಾಗಿ ಹೋಲುತ್ತಿತ್ತು ಅಷ್ಟೆ. ಆದರೆ ಅದು ಬೇರೆ ಯಾವ ಪ್ರಕೃತಿಸಿದ್ಧವಾದ ಪದಾರ್ಥದಂತೆಯೂ ಇರಲಿಲ್ಲ; ಅದನ್ನು ಕುರ್ಚಿ, ಮೇಜು ಎಂದು ಮೊದಲಾಗಿ ಪರಿಚಿತವಾದ ವಸ್ತುಗಳಂತೆ ನಿರ್ದೇಶಿಸುವುದೂ ಸಾಧ್ಯವಿರಲಿಲ್ಲ. ಈ ಪ್ರತಿಕೃತಿಯನ್ನು ಚಿಂಪಾಂಜಿಯೊಂದರ ಮುಂದೆ ತಂದಾಗ, ಮೊದಲು ಅದಕ್ಕೆ ಗಾಬರಿಯಾಯಿತು, ಅಚ್ಚರಿಯೂ ಮೂಡಿತು. ಆದರೆ ಆ ಪ್ರತಿಕೃತಿಯು ಮೇಲ್ಮಟ್ಟದ ಈ ಮಂಗನ ಆಸಕ್ತಿಯನ್ನು ಸೆಳೆಯಿತು. ಅದರಿಂದ ದೂರ ಓಡುವ ಪ್ರಯತ್ನವನ್ನೇನು ಅದು ಮಾಡಲಿಲ್ಲ; ಆದರೆ ಹತ್ತಿರವೂ ಬರಲೊಪ್ಪಲಿಲ್ಲ. ಸುರಕ್ಷಿತವೆಂಬಷ್ಟು ದೂರದಲ್ಲೇ ನಿಂತು ಈ ಪ್ರತಿಕೃತಿಯನ್ನು ದಿಟ್ಟಿಸಿ ನೋಡ ತೊಡಗಿತು. ಪ್ರಾಚೀನ ಮನುಷ್ಯನು ಪ್ರತಿಮೆಗಳ ವಿಚಾರವಾಗಿ ವ್ಯಕ್ತಪಡಿಸಿರಬಹುದಾದ ಪ್ರತಿಕ್ರಿಯೆ ಹೆಚ್ಚೂ ಕಡಿಮೆ ಹೀಗೆಯೇ ಇದ್ದಿರಬೇಕು. ಈಗಲೂ ಆದಿವಾಸಿ ಜನರಲ್ಲಿ ವಿಚಾರ

ಮಾಡಲಾಗದ ಜನರಲ್ಲಿ ಇಂಥದೇ ಪ್ರತಿಕ್ರಿಯೆಯನ್ನು ಕಾಣಬಹುದು. ಭಯ, ಆಶ್ಚರ್ಯ, ಕುತೂಹಲ ಮೂರೂ ಬೆರೆತಾಗ ಪೂಜ್ಯಬುದ್ಧಿಯು ಕಾಣಿಸಿಕೊಳ್ಳುತ್ತದೆ.

ಪ್ರತಿಮೆಯೆಂದರೆ ರೂಪ, ನಿರೂಪಣೆ, ಸಾದೃಶ್ಯ ; ಮೂಲಭೂತವಾಗಿ ಅದೊಂದು ಕಲ್ಪನೆ. ಆದರೆ ಪ್ರತಿಮೆಯೆಂಬ ಕಲ್ಪನೆಯಲ್ಲಿ ವಿಶೇಷ ಅಂಶವೊಂದಿರುತ್ತದೆ. ಅರ್ಥವು ಬೇರೆಯಾಗಿ, ಹೊಸದಾಗಿ ಮೂಡಿಬಂದಿರುವ ನಿರೂಪಣೆಯನ್ನು ಪ್ರತಿಮೆಯೆನ್ನ ಬಹುದು. ಕಣ್ಣು ದಿಟವಾಗಿ ಎಲ್ಲಿಯೂ ಕಾಣದುದನ್ನು ಮನಸ್ಸು ಕಲ್ಪಿಸಿಕೊಂಡು ಅದಕ್ಕೊಂದು ರೂಪವನ್ನು ಒದಗಿಸಿ ನಿರೂಪಣೆ ಮಾಡಿದರೆ ಅದು ಪ್ರತಿಮೆ. ಅದು ಬರಿಯ ಪ್ರತಿಕೃತಿಯಲ್ಲ, ಅಪೂರ್ವವಾದ ವಸ್ತುವೊಂದರಲ್ಲಿ ಕಾಲ್ಪನಿಕವಾದ ತಾತ್ಪರ್ಯವನ್ನು ತುಂಬಿ ಸಿದ್ಧಪಡಿಸಿದ ಸಾಮಗ್ರಿ ಅದು. ಪ್ರಾಕೃತಿಕವಾದ ಪ್ರತಿಮೆ ವಿಚಿತ್ರವಾದ ಆಕಾರವುಳ್ಳ ಕಲ್ಲುಬಂಡೆಯಾಗಬಹುದು, ಮರವಾಗಬಹುದು, ಸಾಮನ್ಯವಾಗಿ ನಮಗೆ ನೋಡಸಿಗದ ಸ್ಫಟಿಕ ಲಿಂಗವಾಗಬಹುದು, ಶಾಲಗ್ರಾಮ ಶಿಲೆಯಾಗಬಹುದು, ಅಪರೂಪದ ಶಂಖವಾಗಬಹುದು, ಅಚ್ಚರಿಯ ಆಕಾರವನ್ನು ತಳೆದ ಮರಗಿಡಗಳ ಬೇರಾಗಬಹುದು. ಇಂಥ ಅಪೂರ್ವ ವಸ್ತುಗಳಲ್ಲಿ ಅದ್ಭುತ ಶಕ್ತಿಯೊಂದು ಅಡಗಿರುವುದೆಂಬ ನಂಬಿಕೆ ಎಲ್ಲ ಹಳೆಯ ಜನರಲ್ಲೂ ಉಂಟು. ಪಾಲಿನೀಶಿಯನ್ ಜನರು ಬಳಸುವ 'ಮ್ಯಾನಾ' ಎಂಬ ಮಾತು ಈಗ ಪ್ರಸಿದ್ಧವಾಗಿದೆ. ಈ ಶಕ್ತಿ ಅಥವಾ ಮ್ಯಾನಾ ಇರುವ ಪದಾರ್ಥದೊಂದಿಗೆ ಸಂಪರ್ಕದಲ್ಲಿ ನಿಂತ ಮನುಷ್ಯನೂ ಈ ಶಕ್ತಿಯಲ್ಲಿ ಒಂದು ಪಾಲನ್ನು ಪಡೆದುಕೊಳ್ಳುವನೆಂದು

ನಂಬಿಕೆಯಿದೆ. ಮನುಷ್ಯನಲ್ಲಿ ಈ ಶಕ್ತಿ ಸಂಕ್ರಮವಾಗಬೇಕಾದರೆ ಆ ಪದಾರ್ಥದ ಸಂಬಂಧವಾಗಿ ವಿಶೇಷವಾದ ಕಲ್ಪವೊಂದನ್ನು ಅವನು ಕೈಗೊಳ್ಳಬೇಕಾಗುತ್ತದೆ.

ಪ್ರತಿಮೆಯೆಂದರೆ ಬರಿಯ ಪ್ರತಿಕೃತಿಯಲ್ಲ, ಪಡಿಯಚ್ಚಲ್ಲ, ಗೊಂಬೆಯಲ್ಲ. ಅದ್ಭುತಶಕ್ತಿಯನ್ನು ತುಂಬಿಕೊಂಡಿರುವ ಕಲ್ಪನೆ ಅದರ ಜೀವಾಳ. ಮನುಷ್ಯನು ಪ್ರತಿಮೆಯನ್ನು ಸಿದ್ಧಪಡಿಸಿದಾಗ, ಈ ಅಚಿಂತ್ಯಾದ್ಭುತ ಶಕ್ತಿಯನ್ನು ಅದರಲ್ಲಿ ತುಂಬಿಸುವುದೇ ಅವನ ಉದ್ದೇಶ. ಪ್ರತಿಮೆಯನ್ನು ಮಾಡುವುದೇ ಒಂದು ಕಲ್ಪವಾಯಿತು ; ಅದರಲ್ಲಿ ಶಕ್ತಿಯನ್ನು ತುಂಬುವುದೇ ಒಂದು ಕಲ್ಪವಾಯಿತು. ಯಾವ ಕೆಲಸವನ್ನಾದರೂ ಭಯಭಕ್ತಿಗಳಿಂದ ಮಾಡಿದರೆ ಅದು ಕಲ್ಪ (ritual). ಹೀಗೆ ಶಕ್ತಿಸಂಪನ್ನವಾದ ಪ್ರತಿಮೆಯನ್ನು ಒಳಗೊಳ್ಳುವ ಸ್ಥಳದಲ್ಲೇ ಶಕ್ತಿಯ ಸನ್ನಿಧಾನವಿದೆಯೆಂಬ ನಂಬಿಕೆ ಸಹಜವಾಗಿಯೇ ಬೇರೂರಿತು. ಆದಿಮಾನವನು ತನಗೆ ನೆರವಾಗುವ ಪ್ರತಿಮೆಯನ್ನು ಇರಿಸಿದ ಕಟ್ಟೆ, ಅದರ ಸುತ್ತ ನಿರ್ಮಿಸಿದ ಆವರಣ, ಅದನ್ನು ಮರೆಮಾಡಿದ ಗುಡಿ ಇವೆಲ್ಲವೂ ಪ್ರತಿಮೆಯ ಶಕ್ತಿಯಲ್ಲಿ ಪಾಲ್ಗೊಳ್ಳುವ ವಿವರಗಳು. ಪ್ರತಿಮೆ ಪವಿತ್ರವಾದಂತೆಯೇ, ಅದನ್ನು ಇರಿಸಿದ ಕಟ್ಟೆಯೂ ಪವಿತ್ರವೇ, ಅದಕ್ಕಾಗಿ ಕಟ್ಟಿದ ಗುಡಿಯೂ ಪವಿತ್ರವೇ. ಮೊದಮೊದಲು ಮನುಷ್ಯನು ಆರಿಸಿ ಇರಿಸಿಕೊಂಡ ಪ್ರತಿಮೆಗಳೆಲ್ಲ ನಿಸರ್ಗಸಿದ್ಧವಾದುವು ; ಅವುಗಳಲ್ಲಿ ಅವನ ಕೈವಾಡ ಏನೂ ಇರುತ್ತಿರಲಿಲ್ಲ, ಇದ್ದುದನ್ನು ಹಾಗೆಯೇ ತಂದು ತನ್ನ ದೈವವಾಗಿಸಿಕೊಳ್ಳುವನು. ಆದರೆ ಅದನ್ನು ಇಡುವ ಕಟ್ಟೆ, ಅದಕ್ಕೆ ಕಟ್ಟುವ ಗುಡಿ ಮೊದಲಾದ ವಿವರಗಳಲ್ಲಿ ಅವನ ಕೈಕೆಲಸವನ್ನು ಮೂಡಿಸಬಹುದಷ್ಟೆ ? ತನ್ನ ಕಲಾಪ್ರವೃತ್ತಿಯನ್ನು ಹರಿಯಬಿಡಲು

ಇವೆಲ್ಲ ವಿಷಯಗಳಾದವು. ಸಾಧ್ಯವಾದಷ್ಟೂ ಅವನ್ನು ಗಂಭೀರ, ಆಶ್ಚರ್ಯಕರ, ಅಪೂರ್ವ ಎಂದು ಕಾಣಿಸುವಂತೆ ಸಿದ್ಧಪಡಿಸ ಬೇಕೆಂಬ ಕಾತರ, ಕುತೂಹಲ ಅವನಿಗಿರುತ್ತಿದ್ದರೆ ಆಶ್ಚರ್ಯ ವೇನಲ್ಲ. ಪವಿತ್ರವೆನಿಸಿದ ಪ್ರತಿಮೆಗಾಗಿ ಮೂಡಿಕೊಂಡ ಕಟ್ಟಡಗಳು ಬೇರೆಲ್ಲ ಕಟ್ಟಡಗಳಿಗಿಂತ ಬೇರೆಯಾಗಿರುತ್ತಿದ್ದುದನ್ನು ಹಿಂದಿನ ಕಾಲದಿಂದ ನಾವು ನೋಡಬಹುದು.

ಜನಾಂಗದ ವ್ಯವಸ್ಥೆಯಲ್ಲಿ ಪ್ರತಿಮೆಯೊಂದಿಗೆ ಸಂಪರ್ಕ ವನ್ನು ಬೆಳೆಯಿಸಿಕೊಂಡು ಬಂದ ಯಜಮಾನ, ಪುರೋಹಿತ ಇವರಲ್ಲಿ ಪ್ರತಿಮೆಯ ಅಲೌಕಿಕ ಶಕ್ತಿಯ ಪಾಲೊಂದು ಉಳಿಯುವು ದೆಂಬ ಭಾವನೆ ಆದಿಮಾನವರಿಗಿದ್ದಿತು. ''ರಾಜಾ ಪ್ರತ್ಯಕ್ಷದೇವತಾ'' ಎಂಬ ಮಾತನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು ; ಪುರೋಹಿತರು ಭೂ-ಸುರರಾದರು. ರಾಜನ, ಪುರೋಹಿತನ ಶರೀರವೇ ಪವಿತ್ರ, ಅವನ ಮಾತಿನಲ್ಲಿ ವಿಚಿತ್ರವಾದ ಶಕ್ತಿಯೊಂದಿದೆ, ಸ್ಥಾವರಪ್ರತಿಮೆಯ ಜಂಗಮ ಪ್ರತಿನಿಧಿ ಅವನು, ಎಂದು ಮೊದಲಾಗಿ ನಂಬಿಕೆಗಳು ಎಲ್ಲ ದೇಶದ ಎಲ್ಲ ಜನರಲ್ಲಿಯೂ ಒಂದಲ್ಲ ಒಂದು ಕಾಲದಲ್ಲಿ ಇದ್ದುವು ; ಜನಾಂಗದ ನಾಯಕ ಅಥವಾ ಯಜಮಾನನು ತನ್ನ ಅಸಾಧಾರಣ ಸಾಮರ್ಥ್ಯವನ್ನು ಜನಾಂಗವನ್ನು ಕಾಪಾಡಲು ಈ ಅಜ್ಞಾತಶಕ್ತಿಯಿಂದಲೇ ಪಡೆದಿದ್ದಾನೆಂಬ ಶ್ರದ್ಧೆಯಿದ್ದಿತು. ಆದುದರಿಂದ, ಅವನು ತೀರಿಕೊಂಡಾಗ, ಅವನಲ್ಲಿದ್ದ ಶಕ್ತಿಯು ಜನಾಂಗಕ್ಕೆ ಹಿಂದಿರುಗುವುದೂ, ಯಾವುದೋ ಒಂದು ಬಗೆಯಲ್ಲಿ ಉಳಿದುಕೊಳ್ಳುವುದೂ ಈ ಶ್ರದ್ಧೆಯಲ್ಲಿ ಸೇರಿದ್ದ ವಿವರಗಳೇ. ಈ ಶಕ್ತಿಗೆ ನೆಲೆಯೊಂದನ್ನು ಒದಗಿಸುವ ಹೊಣೆ ಜನಾಂಗದ್ದು. ಜನಾಂಗದ ಜನರು ತೀರಿಕೊಂಡ ನಾಯಕನ

ಹೆಸರಿನಲ್ಲಿಯೇ ಗುಡಿಯೊಂದನ್ನು ಕಟ್ಟಿ ಅದರಲ್ಲಿ ಆ ಶಕ್ತಿ ನೆಲೆಸುವ ಸನ್ನಾಹ ಮಾಡುತ್ತಿದ್ದರು.

ತುಂಬ ಹಿಂದಿನ ಗುಡಿಗಳೆಲ್ಲ ಸತ್ತವರ ಸಮಾಧಿಗೆ ಸಂಬಂಧಿಸಿದುವೇ. ಸತ್ತವನ ನೆನಪನ್ನು ಉಳಿಸುವುದು ಈ ಗುಡಿಗಳ ಉದ್ದೇಶವಲ್ಲ; ಅವನಲ್ಲಿ ತಾತ್ಕಾಲಿಕವಾಗಿ ನೆಲೆಗೊಂಡಿದ್ದ ಅಜ್ಞಾತಾದ್ಭುತಶಕ್ತಿಗೊಂದು ಮನೆಯನ್ನು ಮಾಡುವುದೇ ಉದ್ದೇಶ. ಜನಾಂಗದ ರಕ್ಷಣೆ ಈ ಶಕ್ತಿಯಿಂದಲೇ, ಎಂದಾದುದರಿಂದ ಜನಾಂಗದ ಜನರ ಪಾಲಿಗೆ ಇಂಥ ಗುಡಿಗಳು ವಿಶೇಷವಾದ ಆದರಕ್ಕೆ ತಕ್ಕುವು. ಜನಾಂಗದ ಜನರು ಗುಡಿಗಳನ್ನು ನೋಡಿಕೊಂಡರು. ಕಾಲ ಉರುಳಿದಂತೆ ನಾಯಕರ ನೆನಪು ಮರೆಯಾಯಿತು. ಆ ನಾಯಕನ ಸಾಹಸ-ಸಾಧನೆಗಳು ಪುರಾಣ ಕಥೆಗಳಂತೆ ಮಾರ್ಪಟ್ಟುವು. ಗುಡಿಗೊಂದು ಕಥೆ ; ಕ್ಷೇತ್ರಕ್ಕೊಂದು ಮಹಾತ್ಮ್ಯೆ ; ಆಲಯಕ್ಕೊಂದು ಹಿನ್ನೆಲೆ. ಇತಿಹಾಸದ ವಿವರಗಳು ಮುಸುಕಾಗಿ, ಶಕ್ತಿಯ ಪ್ರಭಾವ ಮೆರೆಯಿತು. ಜನಾಂಗದ ಉಳಿವಿಗೆ ಈ ಮಾರ್ಪಾಟು ಅವಶ್ಯಕವೇ. ವ್ಯಕ್ತಿಗಿಂತ ಹಿರಿದಾದುದು ಶಕ್ತಿಯಲ್ಲವೇ ?

ಸಾವೆಂಬುದು ಒಂದು ಗಂಭೀರ ಸಮಸ್ಯೆ. ಅದರ ಒಗಟನ್ನು ಬಿಡಿಸುವುದು ಅಂದಿನಿಂದ ಇಂದಿನವರೆಗೂ ಸಾಧ್ಯವಾಗಿಲ್ಲ ; ಬಿಡಿಸುವ ಪ್ರಯತ್ನವಂತೂ ನಿಂತಿಲ್ಲ. ಮನುಷ್ಯನ ಆಸೆ, ಆಶಯ, ಸನ್ನಾಹ, ಯೋಜನೆಗಳಿಗೆಲ್ಲ ಸಾವು ಸಂಚಕಾರಿ. ಅದಕ್ಕೆ ಮನುಷ್ಯ ಭಯಪಡುವಷ್ಟು ಬೇರೆ ಯಾವ ಪ್ರಸಂಗಕ್ಕೂ ಭಯಪಡುವುದಿಲ್ಲ. ಸಾವಿನ ಹೆದರಿಕೆ ಸತ್ತವನಿಗೂ ಹರಡಿದುದು ಸೋಜಿಗ, ಸಾವನ್ನು ಕಂಡರೆ ಅಂಜುವವರು ಸತ್ತವನನ್ನೂ ಕಂಡು ಅಂಜತೊಡಗಿದರು. ಸತ್ತವರನ್ನು ಒಪ್ಪಮಾಡುವ ಎಲ್ಲ ಪದ್ಧತಿಗಳೂ, ಸತ್ತವರು ಮತ್ತೆ ಬರದಂತೆ, ಬದುಕಿರುವ ಇತರರಿಗೆ ಅವರಿಂದ ತೊಂದರೆಯಾಗದಂತೆ

ನೋಡಿಕೊಳ್ಳುವ ಉಪಾಯಗಳೇ ! ಸತ್ತವರಿಗೆ ಸಿದ್ಧಪಡಿಸಿದ ಸ್ಮಾರಕಗಳಲ್ಲಿ ಇಬ್ಬಗೆಯ ಮನೋವೃತ್ತಿಗಳು — ಸತ್ತವನ ನೆನಪನ್ನು ಉಳಿಸಿಕೊಳ್ಳಬೇಕು, ಮತ್ತು ಅವನು ಮೇಲೆದ್ದು ಹಿಂದಿರುಗಿ ಬಂದು ಕಾಡಬಾರದು ಎಂಬುವು.

ಪ್ರಾಚೀನ ಮಾನವನ ಊಹೆ, ಸತ್ತವನು ಎಂದೂ ಇಲ್ಲ ವಾಗುವುದಿಲ್ಲ, ಯಾವುದೋ ಬಗೆಯಲ್ಲಿ ಉಳಿದುಕೊಂಡಿರುತ್ತಾನೆ ಎಂಬುದು. ಸಾವೆಂಬುದು ಗೋಡೆಯಲ್ಲ, ಬಾಗಿಲು. ಕಾಣುವ ನೆಲೆ ಯಿಂದ ಕಾಣದ ಯಾವುದೋ ನೆಲೆಗೆ ಜಾರುವುದೇ ಸಾವು. ದೇಹ ಇಲ್ಲಿಯೇ ಬಿದ್ದುಕೊಂಡು, ಭೂಮಿಯಲ್ಲಿ ಹುದುಗಿ ಅಥವಾ ಬೆಂಕಿಯಲ್ಲಿ ಬೂದಿಯಾಗಿ ಮರೆಯಾದರೂ ಆ ದೇಹವನ್ನು ಬದುಕಿರುವವರಗೆ ಮಿಡಿಯುತ್ತಿದ್ದ ಜೀವ ಅಥವಾ ಚೇತನ ಈ ನೆಲೆಯಿಂದ ಹಾರಿಹೋಗುತ್ತದೆ. ಆದರೆ ತನ್ನವರೊಂದಿಗೆ ನೆಂಟನ್ನು ಮುಂದುವರಿಸಿಕೊಂಡು ಹೋಗುತ್ತದೆ. ಜನರು ತಮ್ಮ ನೆರವಿಗೆ ಈ ಜೀವವನ್ನು ಬೇಕೆಂದಾಗ ಕರೆದುಕೊಳ್ಳಬಹುದು. ಹಾಗೆಯೇ ಅದರಿಂದ ತೊಂದರೆಯೂ ಒದಗಬಹುದು. ಆದುದರಿಂದ ತೀರಿಕೊಂಡವನ ಜೀವವನ್ನು ಅಥವಾ ಚೇತನವನ್ನು ತಣ್ಣಗೆ ಮಾಡುವುದು, ತೃಪ್ತಿಪಡಿಸುವುದು ತುಂಬ ಅಗತ್ಯ. ಸರಿಯಾಗಿ ಅಪರಕರ್ಮ ನಡೆಯದಿದ್ದರೆ, ಮೃತಕನ ಕಾಟ ತಪ್ಪುವುದಿಲ್ಲ ವೆಂಬ ಭೀತಿ ಎಲ್ಲ ದೇಶದ ಎಲ್ಲ ಜನರಲ್ಲಿಯೂ ಇದೆ. ತಮಿಳುನಾಡಿನ ಶ್ರೀಮಂತ ನಾಟುಕೋಟೆ ಚೆಟ್ಟಿಯಾರರು ತಮ್ಮ ಸೀಮೆಯ ಪಾಳುಬಿದ್ದ ನೂರಾರು ಗುಡಿಗಳನ್ನು ದುರಸ್ತಿಮಾಡತೊಡಗಿದಾಗ, ಗರ್ಭಗುಡಿಗಳ ಅಡಿಯಲ್ಲಿ ಶವಕರಂಡಗಳೂ, ಮೂಳೆಯ ರಾಶಿಗಳೂ, ಚಿತೆಯ ಬೂದಿಯೂ ಕಂಡುಬಂದುವು. ತಮಿಳಿನಲ್ಲಿ



'ಪಳ್ಳಿಪ್ಪಡೈ' ಎಂದರೆ ಗುಡಿ ; ಆ ಮಾತಿಗೆ, 'ಎಂದೂ ಏಳದ ನಿದ್ದೆಯಲ್ಲಿ ತೊಡಗಿರುವ,' ಎಂದರೆ ಸತ್ತವನನ್ನು ಹುಗಿದಿರುವ ಜಾಗ ಎಂದರ್ಥ. ಮಧ್ಯಯುಗದ ತಮಿಳು ಶಾಸನಗಳು ಹಲವು ಶಿವಾಲಯಗಳನ್ನು ಹೀಗೆಯೇ ಬಣ್ಣಿಸಿವೆ.

ಸತ್ತವನನ್ನು ಒಪ್ಪಮಾಡಿದೆಡೆ, ಅದನ್ನು ಸೂಚಿಸಲು ಗುಡ್ಡದಂತೆ ಕಾಣುವ ಮಣ್ಣುರಾಶಿಯನ್ನೋ, ಕಲ್ಲುಗಳ ಗುಡ್ಡೆಯನ್ನೋ ಇಡುವ ಪದ್ಧತಿ ತುಂಬ ಪ್ರಾಚೀನವಾದುದು. ಸತ್ತವನು ಇರುವ ಸ್ಥಳ ಜನರ ನೆನಪಿನಲ್ಲಿ ಉಳಿಯಬೇಕು ; ಅವರು ಅದರ ಮೇಲೆ ಕಾಲಿಡದೆ, ಅದರ ಸುತ್ತಮುತ್ತ ನಡೆದಾಡದೆ ದೂರವಿರಲೂ ಬೇಕು. ಗೌರವವೊಂದೇ ತಾತ್ಪರ್ಯವಲ್ಲ ; ಇಲ್ಲಿ ಭೀತಿಯೂ ಅಡಗಿದೆ. ಮಣ್ಣು, ಕಲ್ಲುಗಳ ರಾಶಿಯೇಕೆ ? ಈ ರಾಶಿ ಬೆಟ್ಟದ ಸಂಕೇತ. ಸತ್ತವನ ಉಸಿರು ಬೆಟ್ಟದ ಮೇಲೇರಿ ಹೋಗುವುದೆಂಬುದು ಹಳೆಯ ನಂಬಿಕೆ. ಪ್ರಾಚೀನ ಜನಾಂಗದ ಜನರು ಬೆಟ್ಟಗುಡ್ಡಗಳನ್ನು ಪೂಜಿಸುತ್ತಿದ್ದುದರ ತಾತ್ಪರ್ಯ ಇದೇ. ಕೈಲಾಸದಲ್ಲಿ ಶಿವ ; ಶಿವನೆಂದರೆ ಭೂತಗಳ ಒಡೆಯ ; ಭೂತ ಗಳೆಂದರೆ ಒಂದು ಕಾಲಕ್ಕೆ ಇಲ್ಲಿದ್ದವರು, ಬದುಕಿದ್ದವರು. ಸತ್ತವರೆಲ್ಲ ಬೆಟ್ಟದ ಮೇಲೆ ಕಲೆಯುವರು. ಈ ನಂಬಿಕೆಯಿದ್ದುದರಿಂದಲೇ ಹಲವು ಹಳೆಯ ಜನರಲ್ಲಿ ಹೆಣವನ್ನು ಗುಡ್ಡದ ಮೇಲೆಳೆದೊಯ್ದು ಅಲ್ಲಿ ಬಿಡುವ ಪದ್ಧತಿಯಿದ್ದಿತು. ಹೂಳುವುದು, ಸುಡುವುದು ಆಮೇಲೆ ಬಳಕೆಗೆ ಬಂದುವು. ಸತ್ತವನ ಮೇಲೆ ಮೂಡಿಸುವ ಸಣ್ಣಗುಡ್ಡ ಅಥವಾ ನೆಡುವ ಕಲ್ಲುಗಂಭ ಅಥವಾ ಕಟ್ಟೆ ಬೆಟ್ಟವನ್ನು ಪ್ರತಿನಿಧಿಸುತ್ತದೆ. ಸತ್ತ ಮನುಷ್ಯ ಜನಾಂಗದ ಮುಖ್ಯಸ್ಥನಾದರೆ ಅವನ ಕಳೇಬರದ ಮೇಲೆ ಏರಿಸುವ ಸಮಾಧಿಯೂ ದೊಡ್ಡದಾಗಿ ಭವ್ಯವಾಗಿರುತ್ತಿದ್ದಿತು ;

ಏಕೆಂದರೆ ಅವನು ಬಿಟ್ಟುಹೋದ ಚೇತನವೂ ದೊಡ್ಡದಷ್ಟೆ ? ಅದನ್ನು ತೃಪ್ತಿಪಡಿಸುವ ಬಗೆಯೂ ವಿಶಿಷ್ಟವಾಗಿರಬೇಕಲ್ಲವೆ ? ಅಂಥವರ ಸ್ಮಾರಕ ಸರಳವಾಗಿದ್ದರೆ ಹೇಗೆ ?



ಗುಹಾಯುಗದಲ್ಲಿ ಮನುಷ್ಯನೊಬ್ಬ ಸತ್ತರೆ ಅವನ ಹೆಣವನ್ನು ಹೂಳಿ, ಅದರ ಮೇಲೆ ದೊಡ್ಡದೊಂದು ಕಲ್ಲನ್ನಿಡುವ ಪದ್ಧತಿಯಿದ್ದಿತು, ಅಥವಾ ಅಲ್ಲೊಂದು ಕಲ್ಲುಹರಳುಗಳ ರಾಶಿಯನ್ನು ಪೇರಿಸುತ್ತಿದ್ದರು, ಮತ್ತು ಸ್ವಲ್ಪ ದೂರದಲ್ಲಿ ಅದರ ಸುತ್ತ ವೃತ್ತಾಕಾರದಲ್ಲಿ ಕಲ್ಲುಗಳನ್ನು ಇರಿಸುತ್ತಿದ್ದರು. ಹಲವಾರು ಪ್ರಾಚೀನ ಜನಾಂಗಗಳಲ್ಲಿ ಈ ಪದ್ಧತಿ ಇಂದಿಗೂ ಇದೆ. ಕೆಲವು ಜನಾಂಗಗಳಲ್ಲಿ, ಹೆಣವನ್ನು ಮಲಗಿಸಿ ಹೂತಮೇಲೆ, ಅದರ ಹೃದಯ ಇರುವೆಡೆ ಒಂದು ದೊಡ್ಡ ಕಲ್ಲು, ತಲೆಯ ಕಡೆ ಇನ್ನೊಂದು ಕಲ್ಲು, ಕಾಲಿನ ಕಡೆ ಮತ್ತೊಂದು ಕಲ್ಲು, ಹೀಗೆ ಮೂರು ಕಲ್ಲುಗಳನ್ನು ಇರಿಸುವ ವಾಡಿಕೆಯಿದ್ದಿತು. ನಡುವಣ ಕಲ್ಲೇ ಪ್ರಧಾನವಾದುದು ; ಈ ಕಲ್ಲು ಬರುಬರುತ್ತ ಲಿಂಗದ ಆಕಾರವನ್ನು ತಳೆಯಿತು. ಅಕ್ಕಪಕ್ಕದ ಕಲ್ಲುಗಳು ಕಂಬಗಳಾದುವು. ಈ ಕಂಬಗಳ ಮೇಲೆ ಸೂರನ್ನು ಚಾಚಿ, ಸಮಾಧಿಯನ್ನು 'ಸಾವು-ಮನೆ'ಯನ್ನಾಗಿ ಸಿದರು. ಈ ಸಾವು-ಮನೆಯ ರೂಪ ಹಳೆಯ ಗುಡಿಸಲುಗಳಂತೆಯೇ ಇರುತ್ತಿದ್ದುದು ಸಹಜವೇ. ತೋಡರು ಇಂದಿಗೂ ಕಲ್ಲಿನ-ವೃತ್ತದೊಳಗೆ ಸಾವು-ಮನೆಯನ್ನು ಕಟ್ಟುವ ಅಭ್ಯಾಸವನ್ನು ಉಳಿಸಿಕೊಂಡಿದ್ದಾರೆ. ಇಂಥ ಸಾವು-ಮನೆಗಳ ತಳಾಕೃತಿ ಚಚ್ಚೌಕವಾಗಿದ್ದು, ಅಥವಾ ವೃತ್ತಾಕಾರವಾಗಿದ್ದು, ಮೇಲುಭಾಗ ಶಂಕುವಿನ ಆಕಾರದಲ್ಲಿ ಅಥವಾ ಸೂಚ್ಯಗ್ರವಾಗಿ ಇರುತ್ತಿದ್ದಿತು. ತುಂಬ ಪ್ರಾಚೀನವೆನ್ನಬಹುದಾದ ಗುಡಿಗಳು ಇದೇ ರೂಪದಲ್ಲಿರುವುದನ್ನು ಕಾಣಬಹುದು.

ಸಮಾಧಿಗಲ್ಲಿನ ಸುತ್ತಲೂ ಕಲ್ಲುಗಳ ವೃತ್ತವಿರುವುದೆಂದೆವಲ್ಲ ? ಇದರ ಉದ್ದೇಶ, ಸತ್ತವನ ಚೇತನ ಈ ಮೇರೆಯನ್ನು ಮೀರಿ ಹೊರಗೆ ಹಾಯಬಾರದೆಂದು. ನಡುವಣ ಕಲ್ಲೇ ಆ ಚೇತನವನ್ನು

ಪ್ರತಿನಿಧಿಸಿದರೆ ಈ ವೃತ್ತ ಅದರ ಹರವನ್ನು ಮಿತಗೊಳಿಸುತ್ತದೆ. ಕಲ್ಲಿನ ಬದಲು ಮಣ್ಣುಕಲ್ಲಿನ ಗುಡ್ಡವನ್ನು ರಚಿಸಿದರೆ ಅದು ಈ ವೃತ್ತವನ್ನೂ ಒಳಗೊಂಡು ಸ್ತೂಪವಾಗುತ್ತದೆ ; ಅಥವಾ ಈಗ ದೇವಾಲಯಗಳ ಮೇಲೆ ನಾವು ಕಾಣುವ ವಿಮಾನದ ಆಕಾರವನ್ನು ತಳೆಯುತ್ತದೆ. ಸ್ತೂಪಗಳು ಬೌದ್ಧ ಕಟ್ಟಡಗಳೆಂದು ಪ್ರಸಿದ್ಧವಾಗಿವೆ ; ದೇವಾಲಯದ ಹಿನ್ನೆಲೆಯನ್ನು ಸ್ತೂಪಗಳಲ್ಲೇ ಗುರುತಿಸಬೇಕೆಂದು ಹೇಳುತ್ತಾರೆ. ಆದರೆ ಸ್ತೂಪದ ಹಿನ್ನೆಲೆಯಲ್ಲಿ ವೈದಿಕಯುಗದ ಅಗ್ನಿದ್ರಿಯ ಎಂಬ ಸಮಾಧಿಮಂದಿರವಿರುವುದನ್ನು ಹಲವರು ಅರಿಯರು. ಇದು ಗುಂಭಾಕಾರ ವಾದ ರಚನೆಯಾಗಿದ್ದು, ಒಳಗೆ ಟೊಳ್ಳಾಗಿರುತ್ತಿದ್ದಿತು. ಅದರ ನಟ್ಟನಡುವೆ ನಾಳವೊಂದನ್ನೊಳಗೊಂಡ ಕಂಭ, ಅದರ ಎರಡೂ ಪಕ್ಕಗಳಲ್ಲಿ ಕಲ್ಲುಕಟ್ಟೆಗಳು ಇರುತ್ತಿದ್ದುವು. ಈ ಕಟ್ಟೆಗಳ ಮೇಲೆ ಅಗ್ನಿ ಮತ್ತು ಸೋಮ ಎನಿಸಿಕೊಳ್ಳುವ ಎರಡು ಹೋಮಗಳನ್ನು ನಡೆಸುತ್ತಿದ್ದರು. ಗುಂಭವನ್ನು ಮರದ ಹಲಗೆಗಳಿಂದ ಮಾಡಿ ಮೇಲ್ಭಾಗವನ್ನು ಮಣ್ಣಿನಿಂದ ಮುಚ್ಚುತ್ತಿದ್ದರು. ಇಡೀ ಕಟ್ಟಡದ ರಚನೆ ಆರ್ಯರ ಗುಡಿಸಿಲನ್ನು ನೆನಪಿಗೆ ತರುವಂತಿರುತ್ತಿದ್ದಿತು. ನಡುವಣ ನಾಳದಿಂದ ಅಗ್ನಿಕಾರ್ಯದ ಹೊಗೆ ಹೊರಗೆ ಹೋಗುವ ವ್ಯವಸ್ಥೆಯಿದ್ದಿತು. ಇದು ವೈದಿಕಸ್ತೂಪ. ಸ್ತೂಪವೆಂಬ ಮಾತೂ ವೇದಕಾಲದಷ್ಟೇ ಪ್ರಾಚೀನವಾದುದು.

ಆದರೆ ಸ್ತೂಪದ ಪ್ರಖ್ಯಾತಿಗೆ ಬೌದ್ಧಯುಗ ನೆರವಾಯಿತು. ಬೌದ್ಧ ಯುಗದಲ್ಲಿ ಸ್ತೂಪ ಸಮಾಧಿ, ಸ್ಮಾರಕ, ಆರಾಧನೆ ಮೂರು ವಿವರಗಳನ್ನೊಳಗೊಂಡು ನಿಂತಿತು. ಅಶೋಕನು 84,000 ಸ್ತೂಪಗಳನ್ನು ನಿರ್ಮಿಸಿದನೆಂದು ತಿಳಿದುಬಂದಿದೆ. ಇವೆಲ್ಲವೂ ಸಮಾಧಿ ಮಂದಿರಗಳೇ ಎನ್ನಲಾಗದು. ಅವನು ಬುದ್ಧನು ಜನ್ಮತಳೆದ,

ಸಂಬೋಧಿಯನ್ನು ಕಂಡ, ಮೊದಲ ಪ್ರವಚನ ಮಾಡಿದ, ಸಂದರ್ಶಿಸಿದ, ಕಳೇಬರವನ್ನಿಟ್ಟು ಪರಿನಿರ್ವಾಣ ಪಡೆದ ಸ್ಥಳಗಳನ್ನೆಲ್ಲ ನೋಡಿಕೊಂಡು ಬಂದು ಆ ಸ್ಥಳಗಳಲ್ಲೆಲ್ಲ ಸ್ತೂಪಗಳನ್ನು ರಚಿಸಿದ ನೆಂದು ಕಥೆಯಿದೆ. ಎಂದರೆ ಇವೆಲ್ಲ ಸ್ಮಾರಕ ಮಂದಿರಗಳು. ಆದರೆ ಒಂದೊಂದು ಸ್ತೂಪದೊಳಗೂ ಬುದ್ಧನ ಅಥವಾ ಅವನ ಶಿಷ್ಯರ ಕಳೇಬರದ ಅವಶೇಷಗಳಲ್ಲಿ ಒಂದು ಭಾಗವನ್ನು ಇರಿಸುವ ವ್ಯವಸ್ಥೆಯಿದ್ದಿತು. ನಿದರ್ಶನಕ್ಕೆ ಸಾಂಚಿಯ ಸ್ತೂಪದಲ್ಲಿ ಬುದ್ಧನ ಪ್ರಧಾನಶಿಷ್ಯರಾಗಿದ್ದ ಶಾರಿಪುತ್ರ ಮತ್ತು ಮಹಾಮೌದ್ಗಲ್ಯಾಯನ ಇವರ ಅವಶೇಷಗಳನ್ನೊಳಗೊಂಡ ಕರಂಡಗಳಿದ್ದುವು. ಅವರಿಬ್ಬರು ತೀರಿಕೊಂಡದ್ದು ದೂರದ ನಾಲಂದದಲ್ಲಿ. ಅಲ್ಲಿಂದ ಅವರ ಅವಶೇಷಗಳಲ್ಲಿ ಸ್ವಲ್ಪಭಾಗವನ್ನು ಇಲ್ಲಿಗೆ ತರಲಾಯಿತು. ಬುದ್ಧನು ತೀರಿಕೊಂಡಮೇಲೆ ಅವನ ಕಳೇಬರವನ್ನು ಸುಟ್ಟು ಬೂದಿಯನ್ನು ಹಲವು ಜನಾಂಗದವರು ಅವನ್ನು ಕೊಂಡೊಯ್ದು ತಂತಮ್ಮ ನಾಡುಗಳಲ್ಲಿ ಸ್ತೂಪಗಳನ್ನು ಕಟ್ಟಿಸಿದರೆಂಬ ಉಲ್ಲೇಖವೂ ಇದೆ.

ದೇವಾಲಯದ ಕಲ್ಪನೆಗೆ, ರಚನೆಗೆ ಸ್ತೂಪ ನೇರವಾದ ಹಿನ್ನೆಲೆಯನ್ನೊದಗಿಸಿತು, ಸ್ತೂಪದ ಹಿನ್ನೆಲೆ ಅಗ್ನಿದ್ರಿಯದಲ್ಲಿದ್ದಿತು. ಈ ಸಂಪ್ರದಾಯದುದ್ದಕ್ಕೂ ಸಾವು, ಸಮಾಧಿ, ಸ್ಮಾರಕ, ಆಲಯ, ಆರಾಧನೆ ಇವು ಕಲೆತು ಬಂದಿರುವುದನ್ನು ಕಾಣಬಹುದು. ಸತ್ತವರನ್ನು ಹುಗಿದ ಸ್ಥಳದ ಮೇಲೆ ಕಟ್ಟೆಯನ್ನು ಕಟ್ಟಿ ಅದರ ಮೇಲೆ ಲಿಂಗವನ್ನು ಕೂರಿಸುವ ಪದ್ಧತಿ ಇಂದಿಗೂ ಇದೆ. ಈ ಸ್ಥಳದಲ್ಲಿ ಮಂಟಪವನ್ನೂ ರಚಿಸುವ ವಾಡಿಕೆಯಿದೆ. ಹಿರಿಯರ, ಯತಿಗಳ ಸಮಾಧಿಸ್ಥಳದಲ್ಲಿ ಬೃಂದಾವನಗಳನ್ನು ನಾವು ಕಾಣಬಹುದು. ಅವೆಲ್ಲ ಪೂಜಾಸ್ಥಾನಗಳೆಂದೂ ಜನ ಬಗೆಯುವುದಿದೆ. ಹಳೆಯ

ಕಾಲದಲ್ಲಿ, ಸಮಾಧಿಸ್ಥಳದ ಮೇಲೆ ಯಾವುದಾದರೊಂದು ಮರವನ್ನು ಹುಟ್ಟಿಹಾಕುವ ಪದ್ಧತಿಯಿದ್ದಿತು. ಇವನ್ನು ಚೈತ್ಯವೃಕ್ಷ ಗಳೆಂದು ಕರೆಯುತ್ತಾರೆ. ಸಂಸ್ಕೃತದಲ್ಲಿ 'ಚಿತಿ' ಎಂದರೆ ಹೆಣವನ್ನು ಸುಟ್ಟು ಬೂದಿಯನ್ನು ರಾಶಿಮಾಡುವುದೆಂದರ್ಥ ; ಅದಕ್ಕೆ ಸಂಬಂಧಿ ಸಿದ್ದು 'ಚೈತ್ಯ.' ಸತ್ತವರ ಚೇತನಗಳು ಮರಗಳಲ್ಲಿ ಮನೆಮಾಡಿ ಕೊಂಡಿರುವುವು ಎಂದು ಪ್ರಾಚೀನ ಕಲ್ಪನೆ. ಕೆಲವು ಮರಗಳು ಈ ವ್ಯವಹಾರಕ್ಕೆ ತುಂಬ ಅನುಕೂಲವಾದುವೆಂದೂ ಜನ ಬಗೆದಿದ್ದರು. ಜನಾಂಗದ ಹಿರಿಯರಿಗೆ ತಾಣವನ್ನೊದಗಿಸಿದ ಮರ ಪೂಜೆಗೊಳ್ಳು ವಂತಾದರೆ ಏನಾಶ್ಚರ್ಯ ? ಸತ್ತವರಿಗೆ ಮಾಡುವ ಸತ್ಕಾರ ಈ ಮರಕ್ಕೇ ನಡೆಯುತ್ತಿದ್ದಿತು. ವೃಕ್ಷಾರಾಧನೆಯ ಮೂಲವೇ ಇದು. ಈಗಲೂ ದೇವಾಲಯಗಳಲ್ಲಿ ಬಹುಮಟ್ಟಿಗೆ ಮರಗಳಿರುತ್ತವೆ. ಪ್ರಸಿದ್ಧವಾದ ದೇವಾಲಯವೊಂದೊಂದಕ್ಕೂ ವಿಶಿಷ್ಟವಾದ 'ಸ್ಥಳವೃಕ್ಷ' ಇರುತ್ತದೆ.

ಮೊದಲಿಗೆ ಜನಾಂಗದ ಹಿರಿಯನ ಚೇತನವನ್ನು ಪ್ರತಿನಿಧಿ ಸುವ ಮರವೊಂದು ಮಾತ್ರ ನಿಂತಿರುತ್ತಿದ್ದು, ಕಾಲಕ್ರಮದಲ್ಲಿ ಅದನ್ನೊಳಗೊಂಡಂತೆ ಮಂದಿರಗಳು ಮೂಡಿಕೊಂಡುವು. ಮರವು ಮುದಿಯಾಗಿ ಒಣಗಿ ನಿಂತರೆ ಅದರ ಕೊಂಟನ್ನೇ ದೇಗುಲದಲ್ಲಿ ಇರಿಸಿ ಪೂಜೆ ಮಾಡುವ ಪದ್ಧತಿ ಬೆಳೆಯಿತು. ಮರವಿದ್ದೆಡೆ, ಅದು ತೀರಿಕೊಂಡೆಡೆ ಆಲಯವನ್ನು ಕಟ್ಟುತ್ತಿದ್ದರು. ನಮ್ಮ ದೇಶದ ಪ್ರಸಿದ್ಧ ದೇವಾಲಯಗಳ ಇತಿಹಾಸವನ್ನು ಆಳವಾಗಿ ಪರಿಶೋಧಿಸಿದರೆ ಈ ವಿವರ ಎದ್ದು ನಿಲ್ಲುತ್ತದೆ.

*

ಎರಡು

ದೇಗುಲ ಬೆಳೆಯಿತು

ತುಂಬ ಪ್ರಾಚೀನ ದೇಗುಲಗಳೆಂದರೆ ಗುಹೆಗಳೇ. ಹಳೆಯ ಜನರು ಸತ್ತವರನ್ನು ಒಪ್ಪಮಾಡುತ್ತಿದ್ದುದು ಗುಹೆಗಳಲ್ಲೇ. ಹೊರಗೆ ಎಲ್ಲಿಯಾದರೂ ಒಪ್ಪಮಾಡಿದರೂ ಸ್ಮಾರಕ ಕುಂಭವನ್ನು ಗುಹೆಯೊಳಗೇ ಅಡಗಿಸಿಡುತ್ತಿದ್ದರು. ಗುಹೆಯೆಂದರೆ ಸುರಕ್ಷಿತವಾದ ಪ್ರದೇಶ ಎಂದು ಮಾತ್ರವಲ್ಲದೆ, ಹೆಣವಾಗಲೀ ಕಳೇಬರವನ್ನು ಒಪ್ಪ ಮಾಡಿದ ಅವಶೇಷಗಳಾಗಲೀ ಬಹುಕಾಲ ಕೆಡದೆ ಇರುವುದು ಗುಹೆಯಲ್ಲಿ ಸಾಧ್ಯ ಎಂಬ ಕಾರಣವೂ ಈ ಪದ್ಧತಿಯ ಹಿಂದಿದ್ದಿತು. ಗುಹೆಯಲ್ಲಿ ಚೇತನ ಅಡಗಿರುವ ಕಲ್ಪನೆಯೂ ಸಹಜವಾಗಿಯೇ ಮೂಡಿ ಬಂದಿರಬೇಕು. ಉಪನಿಷತ್ತುಗಳಲ್ಲಿ 'ಹೃದಯಗುಹೆ' ಎಂಬ ಪ್ರಕ್ರಿಯೆ ಮೊದಲಾದುದೂ ಇದೇ ನೆಲೆಯಲ್ಲಿಯೇ ಇರಬೇಕು. ಪ್ರಕೃತಿಸಿದ್ಧವಾದ ಗುಹೆ ಇಲ್ಲದ ಕಡೆ, ಜನರೇ ಗುಹೆಯನ್ನು ನಿರ್ಮಿಸಬೇಕಾಗುತ್ತಿತ್ತು. ಬಂಡೆಗಳನ್ನು ಕಡೆದು ಕೊರೆದು ಸಿದ್ಧಮಾಡಿದ ಗುಹೆಗಳೊಂದಿಗೆ, ಬಿದಿರು, ಮರ, ಮಣ್ಣುಗಳಿಂದ ಗುಹೆಯಾಕಾರದಲ್ಲಿ ಮಂದಿರಗಳನ್ನು ಮಾಡುತ್ತಿದ್ದುದುಂಟು. ಹಲವು ಜನಾಂಗಗಳಲ್ಲಿ ಈ ಪದ್ಧತಿ ಉಳಿದುಬಂದಿದೆ. ಇವನ್ನು ಕಾಲದ ಹೊಡೆತ ಮರೆಮಾಡಿದೆ. ದಕ್ಷಿಣ ಕರಾವಳಿಯ ಕಡೆ ಈಗಲೂ ನಿಂತಿರುವ ಪ್ರಾಚೀನ ದೇಗುಲಗಳನ್ನು ನೋಡಿದರೆ ಇದರ ಕಲ್ಪನೆ ಅಷ್ಟಿಷ್ಟು ಬರಬಹುದು.

ದೇವಾಲಯಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಉಳಿದುಬಂದಿರುವ ಕಟ್ಟಡಗಳೆಂದರೆ ಸ್ತೂಪಗಳೇ. 'ಸ್ತೂಪ' ಎಂಬ ಮಾತಿಗೆ ಧಾನ್ಯದ ರಾಶಿ ಅಥವಾ ಮಣ್ಣುಗುಡ್ಡೆ ಎಂಬ ಅರ್ಥಗಳಿವೆ. ಧಾನ್ಯದ ರಾಶಿಯೆಂದರೆ ತುಂಬ ಅಗತ್ಯವಾದುದು, ಮಣ್ಣುಗುಡ್ಡೆಯೆಂದರೆ ನೆನಪನ್ನು ಉಳಿಸು ವಂಥದು. 'ಸ್ತೂಪ'ವೆಂಬ ಮಾತನ್ನು ಯಜುರ್ವೇದದಲ್ಲಿ ಅಗತ್ಯವಾದ ಸ್ಮಾರಕ ಎಂಬರ್ಥದಲ್ಲಿ ಬಳಸಿದ್ದಾರೆ ; ''ವಿಷ್ಣೋಃಸ್ತೂಪಃ'' ಎಂಬುದು ಅಲ್ಲಿ ಬರುವ ಪ್ರಯೋಗ. ವೈದಿಕ ಸ್ತೂಪವಾದ ಅಗ್ನಿಧ್ರಿಯದ ಉಲ್ಲೇಖ ಹಿಂದೆಯೇ ಬಂದಿತಷ್ಟೆ. ಸ್ತೂಪವನ್ನು ನಿರ್ಮಿಸುವ ಪದ್ಧತಿ ತುಂಬ ಪ್ರಾಚೀನ ಕಾಲದ್ದಿರಬೇಕು. ಆದರೆ ಅಶೋಕಮೌರ್ಯನ ಕಾಲದಲ್ಲಿ ಇದರ ಬಳಕೆ ಹರಡಿತು, ಪ್ರಖ್ಯಾತವಾಯಿತು. ಅಶೋಕನ ಕಾಲದಲ್ಲೇ ಸಿದ್ಧವಾದ ಸ್ತೂಪಗಳಲ್ಲಿ ಇಂದಿಗೆ ಯಾವುದೂ ಉಳಿದು ಬಂದಿಲ್ಲ. ಆದರೆ ಆ ಸ್ತೂಪಗಳ ಆಕಾರ, ರಚನೆಯ ವಿವರಗಳು ಅನಂತರದ ಹಲವಾರು ಸ್ತೂಪಗಳಲ್ಲಿ ಕಾಣಸಿಗುತ್ತವೆ. ಬುದ್ಧ ಗಯಾ, ಬಾರ್ಹುತ್, ಸಾಂಚಿ, ಸಾರನಾಥ ಮೊದಲಾದ ಸ್ಥಳಗಳಲ್ಲಿ ಈಗಲೂ ನಿಂತಿರುವ ಸ್ತೂಪಗಳು ಪ್ರಾಚೀನ ಸ್ತೂಪದ ಪ್ರತಿನಿಧಿಗಳೇ. ಇವೆಲ್ಲ ಕ್ರಿಸ್ತಪೂರ್ವ ಒಂದು ಮತ್ತು ಮೂರು ಶತಮಾನಗಳ ನಡುವೆ ಸಿದ್ಧವಾದುವು ; ಕಾಲಕಾಲಕ್ಕೆ ಕೊಂಚಮಟ್ಟಿಗೆ ಮಾರ್ಪಟ್ಟಿವೆಯೆನ್ನಿ.

ಬೌದ್ಧರು ಅಳವಡಿಸಿಕೊಂಡ ಸ್ತೂಪದ ಕಲ್ಪನೆ ಹರವುಳ್ಳ, ಅರ್ಧ ಗೋಳಾಕಾರದ ರಚನೆ. ಅದರ ಒಳಮೈ ಟೊಳ್ಳಾಗಿರದೆ, ಕಲ್ಲುಹರಳು ಮಣ್ಣುಗಳಿಂದ ತುಂಬಿದ್ದು ಮೇಲ್ಭಾಗದಲ್ಲಿ ಇಟ್ಟಿಗೆಗಳ ಹೊದಿಕೆಯಿರುತ್ತದೆ. ಈ ಹೊದಿಕೆಯ ಮೇಲೆ ನಯವಾದ ಕಲ್ಲುಚಪ್ಪಡಿಗಳನ್ನು ಜೋಡಿಸಿ ಕಟ್ಟಡವನ್ನು ಮುಗಿಸುತ್ತಾರೆ. ಅದನ್ನು ಮೇಧಿಯೆಂಬ ಹೆಸರಿನ ವೃತ್ತಾಕಾರದ ವೇದಿಕೆಯ ಮೇಲೆ

ಕಲ್ಲುಗುಡ್ಡದಂತೆ ಕಾಣುವ ಈ ಸ್ತೂಪವನ್ನು ಕಟ್ಟುವರು. ಸುತ್ತಲೂ ಪ್ರದಕ್ಷಿಣೆ ಮಾಡಿಬರಲು ಅನುಕೂಲವಾಗುವಂತೆ ದಾರಿಯನ್ನೂ ಮೇಧಿಯು ಒಳಗೊಳ್ಳುತ್ತದೆ. ನಡೆಯುವವರ ನೆರವಿಗೆ ಮೇಧಿಯ ಸುತ್ತಲೂ ಬೇಲಿಯಂತಿರುವ ಕಲ್ಲಿನ ಸರಳುಗಳ ಸಾಲೂ ಇರುತ್ತದೆ. ಸ್ತೂಪದ ಸ್ವರೂಪ ಸರಳವಾಗಿರುತ್ತದೆ. ಅದರ ಮೇಲ್ಭಾಗದಲ್ಲಿ ಚಚ್ಚೌಕವಾದ ಮಾಡಿಯಿದ್ದು ಹರ್ಮಿಕೆಯೆನಿಸಿಕೊಳ್ಳುತ್ತದೆ. ಇದಕ್ಕೂ ಕಟಕಟೆಯ ರಚನೆಯನ್ನು ಅಳವಡಿಸುವರು. ಅದರ ಮೇಲೆ ಛತ್ರಿಯಾಕಾರದ ಕಲ್ಲುರಚನೆ ಸ್ತೂಪಕ್ಕೆ ವಿಶಿಷ್ಟವಾದ ಭಾಗ. ಸ್ತೂಪದ ಹಿರಿಮೆಯನ್ನು ಸೂಚಿಸುವುದು ಈ ಛತ್ರಿ, ಸಾರ್ವಭೌಮತ್ವದ ಪ್ರತೀಕ.

ಸ್ತೂಪವಿರುವ ಆವರಣವನ್ನು ನಾಲ್ಕೂ ಕಡೆ ತೋರಣಗಳಿಂದ ಸೀಮಿತಗೊಳಿಸುತ್ತಾರೆ. ಸ್ತೂಪದ ತಳ ವಿನ್ಯಾಸದಲ್ಲಿ ಕಾಣುವ ವೃತ್ತಾಕಾರ, ಅದರ ಸುತ್ತಲೂ ಚಚ್ಚೌಕಾಕೃತಿ, ಇದರ ನಾಲ್ಕೂ ಕಡೆಗಳಲ್ಲಿ ನಾಲ್ಕು ಬಾಗಿಲುಗಳು ಇವೆಲ್ಲವೂ ತಾಂತ್ರಿಕ ಪ್ರಕ್ರಿಯೆಯನ್ನು ಅವಲಂಬಿಸಿದವು. ಸ್ತೂಪವೇ ಒಂದು ಮಂಡಲ ; ಅದರ ಸ್ವಾರಸ್ಯವಿರುವುದು ಅದರ ಗರ್ಭದಲ್ಲಿ ಅಡಗಿರುವ ಚೇತನ ದ್ರವ್ಯದಲ್ಲಿ. ಸ್ತೂಪಕ್ಕೆ 'ಧಾತುಗರ್ಭ'ವೆಂದೂ ಹೆಸರಿದೆ, ಎಂದರೆ ಧಾತುವನ್ನು (ಧಾತುವೆಂದರೆ ಕಳೇಬರದ ಅವಶೇಷ) ಅಡಗಿಸಿಕೊಂಡಿರುವುದು, ಸಿಂಹಳದ ಭಾಷೆಯಲ್ಲಿ ಬಳಕೆಯಲ್ಲಿರುವ 'ದಾಗೋಬ' ಎಂಬ ಮಾತಿಗೆ ಧಾತು ಗರ್ಭವೇ ಮೂಲ. ಧಾತುವು, ಎಂದರೆ ಅವಶೇಷವು, ಯಾವನೊಬ್ಬ ಮಹಾಪುರುಷನ ಮೂಳೆ, ಕೂದಲು, ಉಗುರು ಮುಂತಾದುವಾಗಿದ್ದರೆ ಅದನ್ನು 'ಶಾರೀರಿಕ'ವೆನ್ನುತ್ತಾರೆ. ಅವನು ಬದುಕಿದ್ದಾಗ ಬಳಸುತ್ತಿದ್ದ ಬಟ್ಟೆ, ಪಾತ್ರೆ, ಊರುಗೋಲು ಮೊದಲಾದುವಾಗಿದ್ದರೆ ಪಾರಿಭೋಗಿಕವೆನಿಸಿಕೊಳ್ಳುತ್ತದೆ. ಅವನ ಸಿದ್ಧಿಯನ್ನು ಸೂಚಿಸುವ ಚಕ್ರ, ತ್ರಿರತ್ನ



ಮೊದಲಾದುವಾಗಿದ್ದರೆ ಉದ್ದೇಶಿಕವೆನ್ನುತ್ತಾರೆ. ಇಂಥ ಅವಶೇಷಗಳನ್ನು ಸ್ತೂಪದೊಳಗೆ ಇಡುವಾಗ ನಿರ್ದಿಷ್ಟವಾದ ಕಲ್ಪಗಳಿರುತ್ತವೆ. ಈ ಧಾತು ವಿನಲ್ಲಿರುವ ಚೇತನದ ಪ್ರಭಾವವನ್ನು ತಡೆಹಿಡಿಯಲೆಂದೇ ನಾಲ್ಕೂ

ದಿಕ್ಕುಗಳಿಗೆ ಮುಖ ಮಾಡಿದಂತೆ ನಾಲ್ಕು ಪ್ರಾಕಾರಗಳಿರುವುದು ; ಪ್ರಭಾವದ ಹರವನ್ನು ತಡೆದಾಗ ಆವರಣದೊಳಗಿನ ಚೇತನ ಇನ್ನಷ್ಟು ಪ್ರಬಲವಾಗುತ್ತದೆ. ಅಷ್ಟಲ್ಲದೆ ಪ್ರಾಕಾರಗಳು ಹೊರಗಿನ ದುಷ್ಟಶಕ್ತಿಗಳು ಒಳಗೆ ಬಾರದಂತೆ ತಡೆಯುತ್ತವೆ. ಹೀಗೆ ಮಂಡಲದ ತಾತ್ಪರ್ಯ ವನ್ನೂ ಸಂಕೇತವನ್ನೂ ಆಕಾರವನ್ನೂ ಸ್ತೂಪ ಪ್ರತಿನಿಧಿಸುತ್ತದೆ.

ಸ್ತೂಪದ ಮುಖ್ಯ ವಿವರ ಧಾತುವೇ. ಧಾತುವೆಂಬ ಚೇತನದ ಬೀಜವನ್ನು ಇದು ಒಳಗೊಳ್ಳುವುದರಿಂದ ಸ್ತೂಪವನ್ನು ಅಂಡವೆಂದೂ



ಕರೆಯುವುದುಂಟು. ಸಮಾಧಿಸ್ತೂಪವು ದಿಟವಾಗಿ ಕಾಲ್ಪನಿಕವಾದ ಸ್ಮಾರಕ. ಅದರ ತೋರಣಗಳಲ್ಲಿ ಕಾಣಬರುವ ಚಿತ್ರಶಿಲ್ಪಗಳೆಲ್ಲ ಸಾಂಕೇತಿಕವಾದುವು. ಬುದ್ಧನ ಬಾಳುವೆಯನ್ನು ತಿಳಿಯಪಡಿಸುವಂತೆ ಹಲವು ಶಿಲ್ಪಫಲಕಗಳು ತೋರುವುದಾದರೂ, ಅವುಗಳ ಪ್ರಯೋಜನ ಐಂದ್ರಜಾಲಿಕವಾದುವು, ಸಾಧನೆಗೆ ನೆರವಾಗುವಂಥವು. ಇದೇ ಕಾರಣದಿಂದಲೇ ಅಲ್ಲೆಲ್ಲ ಯಕ್ಷ-ಯಕ್ಷಿಣಿಯರ ದೈವ-ದೇವತೆಗಳ ಚಿತ್ರಣವೂ ಬರುತ್ತದೆ.

ಹಿಂದೂ ದೇವಾಲಯವು ಬೌದ್ಧಸ್ತೂಪದಿಂದ ಬೆಳೆದು ಬಂದುದು ಎಂದು ಹೇಳುವುದು ಸರಿಯೇ. ಆದರೆ ಹೀಗೆ ಹೇಳುವಾಗ, ಬೌದ್ಧಸ್ತೂಪವು ವೈದಿಕ ಸ್ತೂಪದಿಂದ ಬೆಳೆದು ಬಂದುದು ಎಂಬುದನ್ನೂ ವೈದಿಕಸ್ತೂಪಗಳು ಪ್ರಾಚೀನ ಗುಹಾಲಯಗಳ ಹಿನ್ನೆಲೆಯಿಂದ ಬಂದುವು ಎಂಬುದನ್ನೂ ಮರೆಯಬಾರದು. ವೈದಿಕಸ್ತೂಪದಲ್ಲಿರುವ ಐಂದ್ರಜಾಲಿಕ ಕಲ್ಪನೆಯೇ ಬೌದ್ಧಸ್ತೂಪದಲ್ಲಿಯೂ ಇರುವುದು ; ಬೌದ್ಧ ಸ್ತೂಪದ ಸಂಬಂಧದಲ್ಲಿಯೂ ಹಲವಾರು ಕ್ರಿಯಾವಿಧಿಗಳುಂಟು, ವೈದಿಕಸ್ತೂಪದಲ್ಲಿರುವಂತೆಯೇ.

ಬೌದ್ಧಸ್ತೂಪಗಳು ಸಿದ್ಧವಾದ ಕಾಲದಲ್ಲಿಯೇ ಕಾಣಿಸಿಕೊಂಡುವು ನಿರ್ಮಿತ ಗುಹೆಗಳು. ಜುನ್ನಾರ್, ಕನ್ಹೇರಿ (ಕೃಷ್ಣಗಿರಿ), ಅಜಂಟ, ಎಲ್ಲೋರ ಮೊದಲಾದ ಗುಹೆಗಳು ಪ್ರಸಿದ್ಧ ನಿದರ್ಶನಗಳು. ಪುಣೆಯ ಬಳಿಯಿರುವ ಜುನ್ನಾರಿನಲ್ಲಿ ಕ್ರಿಸ್ತಾಬ್ಧ ಮೊದಲ ಶತಮಾನದ ಸುಮಾರಿಗೆ ಸಿದ್ಧವಾದ ನೂರೈವತ್ತು ಗುಹೆಗಳಿವೆ. ಮುಂಬಯಿಯ ಹತ್ತಿರ ಇರುವ ಕನ್ಹೇರಿಯಲ್ಲಿ ಕ್ರಿಸ್ತಾಬ್ಧ 150-189 ಸುಮಾರಿಗೆ ನಿರ್ಮಿತವಾದ ಎಂಟು ಸೊಗಸಾದ ಗುಹೆಗಳಿವೆ. ಅಜಂಟದ ಗುಹೆಗಳಂತೂ ವಿಶ್ವವಿಖ್ಯಾತವಾಗಿವೆ ; ಕ್ರಿಸ್ತಾಬ್ಧ ಮೊದಲ ಕೆಲವು

ಶತಮಾನಗಳಲ್ಲಿ ಕೊರೆಯಲ್ಪಟ್ಟ ಸುಮಾರು ಇಪ್ಪತ್ತೇಳು ಗುಹೆಗಳು ಕಲಾಪೂರ್ಣವಾದುವು. ಎಲ್ಲೋರದಲ್ಲಿರುವ ಸುಮಾರು ಮೂವತ್ತ ಮೂರು ಗುಹೆಗಳು ಕ್ರಿಸ್ತಾಬ್ದ 550 ರಿಂದ 750ರ ನಡುವೆ ಸಿದ್ಧವಾದುವು, ಬೆಟ್ಟದ ಗಟ್ಟಿ ಬಂಡೆಗಳಲ್ಲಿ ಕೊರೆದ ಗುಹೆಗಳು ಇವು. ನಯವಾದ ಶಿಲ್ಪಕಾರ್ಯವನ್ನೂ, ಅಂದವಾಗಿ ನಿಲ್ಲಿಸಿದಂತೆ ಕಡೆದಿರುವ ಕಂಭಗಳನ್ನೂ ಸುಂದರವಾದ ಗವಾಕ್ಷಗಳನ್ನೂ ಇಲ್ಲಿ ಕಾಣಬಹುದು. ಆದೆ ಈ ನಿರ್ಮಿತ ಗುಹೆಗಳು ದೇವಾಲಯಗಳೆನ್ನುವ ಹಾಗಿಲ್ಲ. ಭಿಕ್ಷುಗಳ, ತಪಸ್ವಿಗಳ ತಪಶ್ಚರ್ಯೆಗೆ, ವಸತಿಗೆ ಅನುಕೂಲವಾಗುವಂಥ ಮಂದಿರಗಳು ಇವು ; ಸರಳವಾದ ಪವಿತ್ರವಾದ ಗುಹಾ-ಆಲಯ ಗಳಿಂದ ಉದ್ದೇಶದಲ್ಲಿಯೂ ರಚನೆಯಲ್ಲಿಯೂ ಬೇರೆಯಾದುವು. ಈ ನಿರ್ಮಿತಗುಹೆಗಳಲ್ಲಿಯೂ ಹಲವೆಡೆ ಸ್ತೂಪದ ವಿಗ್ರಹ, ಬುದ್ಧನ, ತೀರ್ಥಂಕರರ ಪ್ರತಿಮೆಗಳು ಮೊದಲಾದ ಪೂಜಾರ್ಹ ಪದಾರ್ಥ ಗಳನ್ನು ಕಾಣಬಹುದು. ಆದರೆ ಗುಹಾಲಯದ ಬಹುಭಾಗ ವಸತಿಗಾಗಿ, ಸಂಗೀತಿ-ಸಭೆಗಳಿಗಾಗಿ, ಅತಿಥಿಗಳ ಸತ್ಕಾರಕ್ಕಾಗಿ ಸಿದ್ಧವಾದುವು. ಶಿಲ್ಪ ವಾಸ್ತು ಎರಡರಲ್ಲಿಯೂ ಉತ್ತಮವಾದ ಸಾಧನೆಗಳನ್ನು ಒಳಗೊಂಡಿರು ವಂಥವು ; ಇವುಗಳಲ್ಲಿ ಧರ್ಮಕ್ಕಿಂತ ಕಲೆಯ ಪಾತ್ರ ಹಿರಿದು, ಪ್ರತಿಮೆ ಯನ್ನು ಹಿಂದೆ ತಳ್ಳಿ ಕಲ್ಪನೆ ಮುಂದೆ ಬಂದಿರುವುದನ್ನು ಕಾಣಬಹುದು.

ಇಂಥ ಗುಹಾಶ್ರಯಗಳಲ್ಲಿ ದೇವಾಲಯದ ಭಾಗ ಮೂಲಭೂತವಾಗಿ ಇದ್ದರೂ ಅದು ಸಾರ್ವಜನಿಕ ಸ್ಥಳವೆಂಬುದು ಪ್ರಧಾನವಾದ ಅಂಶ. ಜನರು ಅಲ್ಲಿ ನೆರೆಯುತ್ತಿದ್ದುದು ಅರ್ಚನೆಗಾಗಿ ಮಾತ್ರ ಅಲ್ಲ, ಅಲ್ಲಿರುತ್ತಿದ್ದ ಭಿಕ್ಷುಗಳನ್ನೂ ತಪಸ್ವಿಗಳನ್ನೂ ಸಾಧಕರನ್ನೂ ಸಂದರ್ಶಿಸಿ, ಅವರೊಂದಿಗೆ ಮಾತು ಕಥೆಯಾಡಿ, ಅವರ ಆಶೀರ್ವಾದವನ್ನು ಪಡೆದು ಹೋಗಲೆಂದು. ಆಗಾಗ, ವಿಶೇಷ

ಸಂದರ್ಭಗಳಲ್ಲಿ, ಭಿಕ್ಷುಗಳು ನೆರೆದ ಜನರೆದುರು ಪ್ರವಚನವನ್ನೂ ನಡೆಸುತ್ತಿದ್ದರು. ನೂರಾರು ಜನರು ಕೂಡುವುದಕ್ಕೆ ಅನುಕೂಲವಾದ ಸಭಾಂಗಣಗಳನ್ನೂ ಈ ಗುಹಾಶ್ರಯಗಳಲ್ಲಿ ಕಾಣಬಹುದು. ಅಲ್ಲಿ ತಂಗಿರುತ್ತಿದ್ದ ಭಿಕ್ಷುಗಳಿಗೆ ಮತ್ತು ಸಾಧಕರಿಗೆ ಆತ್ಮೋನ್ನತಿ ಮಾತ್ರವೇ ಗುರಿಯಾಗಿರದೆ, ಪರೋಪದೇಶವೂ ಅವಶ್ಯವಾದ ಕರ್ತವ್ಯವಾಗಿದ್ದಿತು. ಧರ್ಮಪ್ರಚಾರಕ್ಕೆ ಸಿದ್ಧರಾಗಿದ್ದ ಭಿಕ್ಷುಗಳಿಗೆ ಲೌಕಿಕವ್ಯವಹಾರ, ಜನಸಂಪರ್ಕಗಳು ಹೊರಗಾದುವಲ್ಲ. ಹೀಗಾಗಿ ಅರ್ಚನೆಯ ಅಂಶ ಗೌಣವಾಯಿತು; ಗುಹಾಶ್ರಯಗಳು ಧಾರ್ಮಿಕಸಂಸ್ಥೆಗಳಾಗಿ ಮಾರ್ಪಟ್ಟುವು. ಈ ಮಾರ್ಪಾಟಿನಿಂದ ಹಲವು ಪಂಥಗಳೂ ಸಂಪ್ರದಾಯಗಳೂ ಬೆಳೆದುವು. ಈ ಪಂಥದಿಂದ ನಿರ್ದಿಷ್ಟಗೊಂಡ ಗುಹಾಶ್ರಯಗಳು ಹಲವಿವೆ.

ಆ ಯುಗದಲ್ಲಿ ಎಲ್ಲೆಲ್ಲೂ ಇದ್ದವು ಇಂಥ ಗುಹಾಶ್ರಯಗಳಷ್ಟೇ ಎಂದು ಬಗೆಯಬಾರದು, ಹಿಂದಿನ ಕಾಲದಿಂದ ಮಣ್ಣು, ಮರ, ಹಸಿ-ಇಟ್ಟಿಗೆಗಳಿಂದ ಮಾಡಿದ ಗುಡಿಗಳು ಇರುತ್ತಿದ್ದುವು. ಸಾಮಗ್ರಿಗಳ ಲಕ್ಷಣದಿಂದ ಅವು ಸ್ಥಿರವಾಗಿ ಇರುತ್ತಿರಲಿಲ್ಲ. ಆದರೆ ಅವುಗಳ ನಿರ್ಮಾಣ ನಡೆಯುತ್ತಲೇ ಇದ್ದಿತು. ಪಲ್ಲವರಾಜ ಮೊದಲನೆಯ ಮಹೇಂದ್ರವರ್ಮನ (ಕ್ರಿಸ್ತಾಬ್ಧ 600-630) ಶಾಸನವೊಂದರಿಂದ ಇದು ಧ್ವನಿತವಾಗುತ್ತದೆ. ಈ ರಾಜನೇ ಕಲ್ಲುಬಂಡೆಗಳನ್ನು ಕಡೆದು ಆಲಯವನ್ನು ರಚಿಸಿದವರಲ್ಲಿ ಮೊದಲಿಗನೆನ್ನುತ್ತಾರೆ. ದಕ್ಷಿಣ ಆರ್ಕಾಡು ಪ್ರದೇಶದಲ್ಲಿರುವ ಮಂದಗಪಟ್ಟು ಎಂಬಲ್ಲಿ ದೊರೆತಿರುವ ಶಾಸನವೊಂದು ಈ ರಾಜನನ್ನು 'ವಿಚಿತ್ರಚಿತ್ತ'ನೆಂದು ಕರೆದು, ಇವನು ಇಟ್ಟಿಗೆ, ಮರ, ಗಾರೆ, ಲೋಹ ಯಾವುದನ್ನೂ ಬಳಸದೆ ಬ್ರಹ್ಮ ವಿಷ್ಣು ಶಿವರಿಗೆ ಆಯತನವೊಂದನ್ನು ನಿರ್ಮಿಸಿದನೆಂದು ವಿವರಿಸುತ್ತದೆ.

ಇದನ್ನು ಹೇಳುವ ಶ್ಲೋಕ ಇದು —

ಏತದನಿಷ್ಟಕಮದ್ರುಮಲೋ —
ಹಮಸುಧಂ ವಿಚಿತ್ರಚಿತ್ತೇನ।
ನಿರ್ಮ್ಮಾಪಿತನ್ನೃಪೇಣ ಬ್ರಹ್ಮೇ-
ಶ್ವರವಿಷ್ಣುಲಕ್ಷಿತಾಯತನಂ॥

ಕಲ್ಲುಬಂಡೆಯಲ್ಲಿ ಕಡೆದ ಗುಡಿಯ ಕಲ್ಪನೆ ಇವನಿಂದಲೇ ಮೊದಲಾಯಿತೆನ್ನುವುದು ಸರಿಯಲ್ಲದಿರಬಹುದು. ಏಕೆಂದರೆ ಅವನ ಕಾಲಕ್ಕೆ ಶತಮಾನಗಳ ಮೊದಲೇ ಕರ್ಣಾಟಕ ಪ್ರಾಂತ್ಯದಲ್ಲಿ ಬನವಾಸಿ, ತಾಳಗುಂದ ಮೊದಲಾದೆಡೆ ಇಂಥ ಶಿವಾಲಯಗಳಿದ್ದುವು. ಆದರೆ 'ವಿಚಿತ್ರಚಿತ್ರ'ನೆಂಬ ಪ್ರಶಸ್ತಿಗೆ ಅನುರೂಪವಾಗಿ ಅವನ ಬುದ್ಧಿಶಕ್ತಿ ಹತ್ತಾರು ಕ್ಷೇತ್ರಗಳಲ್ಲಿ ಹರಿದಿತ್ತು. ಭಾರವಿ ಮಹಾಕವಿಗೆ ಆಶ್ರಯದಾತನಾಗಿದ್ದ ಈ ರಾಜನು ಸ್ವತಃ ಕವಿ. ಅವನ 'ಮತ್ತವಿಲಾಸ ಪ್ರಹಸನ' ನಮ್ಮ ಕಾಲದವರೆಗೂ ಉಳಿದು ಬಂದಿದೆ. ಸುಪ್ರಸಿದ್ಧ ಶೈವ ಸಂತ ಅಪ್ಪರ್ ಅವರ ಪ್ರಭಾವವನ್ನು ತಳೆದು ಹಲವಾರು ಶಿವಾಲಯಗಳನ್ನು ಪಲ್ಲವ ಮಂಡಲದಲ್ಲಿ ಕಟ್ಟಿಸಿದ. ಅವನಿಗೆ 'ಚೆಟ್ಟಕಾರಿ' (ಎಂದರೆ ಗುಡಿಗಳನ್ನು ಕಟ್ಟುವವನು) ಎಂದೇ ಹೆಸರಿದ್ದಿತು. ಕಾಂಚೀಪುರ, ಪಲ್ಲಾವರಂ, ವಲ್ಲಂ, ಮಾಮಂದೂರು, ತಿರುಕ್ಕಳುಕುನ್ರಂ ಈ ಪ್ರದೇಶಗಳಲ್ಲಿ ಹತ್ತಾರು ಗುಡಿಗಳನ್ನು ಕಟ್ಟಿಸಿದನೆಂದು ಉಲ್ಲೇಖವಿದೆ. ಕಾಂಚೀಪುರದ ಸುಪ್ರಸಿದ್ಧ ಏಕಾಮ್ರನಾಥ ದೇವಾಲಯದ ಮೂಲ ರಚನೆ ಇವನ ಮಾರ್ಗ ದರ್ಶನದಲ್ಲಿಯೇ ನಡೆಯಿತು ಎನ್ನುತ್ತಾರೆ.

ಇವನ ನಂತರ ರಾಜನಾದ ಮೊದಲನೆಯ ನರಸಿಂಹವರ್ಮ (ಕ್ರಿ. 630-668) ಮದ್ರಾಸಿನ ಬಳಿ ಸಮುದ್ರತೀರದಲ್ಲಿರುವ ಮಾಮಲ್ಲಪುರಂ ಶಿಲಾರಥಗಳನ್ನು ಕಡೆಯಿಸಿ ಕೀರ್ತಿಯನ್ನು ಪಡೆದವನು.

ಇವನಿಗೆ 'ಮಾಮಲ್ಲ' ('ಮಹಾಮಲ್ಲ') ಎಂಬ ಬಿರುದಿದ್ದು ಇವನಿಂದ ಆ ಊರು ಮಾಮಲ್ಲಪುರವಾಯಿತು ; ಜನರ ಬಾಯಲ್ಲಿ 'ಮಹಾಬಲಿ ಪುರ'ವಾಯಿತು ! ಬಲಿಚಕ್ರವರ್ತಿಗೂ ಊರಿಗೂ ನೆಂಟೊಂದು ಸಿದ್ಧವಾಯಿತು ! ಇಲ್ಲಿರುವ ದೇಗುಲಗಳಲ್ಲಿ ಒಂದೊಂದೂ ಒಂದೊಂದು ಬಂಡೆಯಲ್ಲಿ ಕಡೆದವು. ಶಾಸ್ತ್ರಗ್ರಂಥಗಳಲ್ಲಿ 'ರಥ'ವೆಂಬ ಆಲಯ ಪ್ರಕಾರಕ್ಕೆ ಸೇರಿದವು ಇವು. ರಥವೆಂದರೆ ಸಾಮಾನ್ಯವಾಗಿ ನಾವು ಏರಿ ಹೋಗುವ ವಾಹನ ; ಆದರೆ ಪದದ ಮೂಲಾರ್ಥ 'ಆಟವಾಡುವುದು, ಸಂತೋಷಪಡುವುದು' (ರಮು ಕ್ರೀಡಾಯಾಂ). ಶಾಸ್ತ್ರಗ್ರಂಥಗಳಲ್ಲಿ ನಾಲ್ಕು ಬಗೆಯ 'ರಥ'ಗಳನ್ನು ಹೇಳಿದ್ದಾರೆ. ಛಂದೋಮಯವಾದ ರಥ ದೇವರ ಸ್ತುತಿರೂಪವಾದ ಮಂತ್ರ. ಕಟ್ಟಡವು ದೇವತೆಗಳ ವಸತಿಗಾಗಿ, ಅವರ ಕ್ರೀಡಾಸ್ಥಳವಾಗಿ ನಿಂತರೆ ಅದು ದೇವಮಯರಥ. ಕರ್ಮದ ವಾಸನೆಗಳನ್ನು ಹಲವಾರು ಜನ್ಮಗಳಿಗೆ ಒಯ್ಯುವ ಈ ನಮ್ಮ ದೇಹವೇ ಒಂದು ರಥ. ಯುದ್ಧದಲ್ಲಿ ರಾಜರೂ ಸೇನಾನಿಗಳೂ ಬಳಸುವ ತೇರು ವಾಹಮಯರಥ. ಋಗ್ವೇದದಲ್ಲಿ ರಥವೆಂಬ ಮಾತನ್ನು ಈ ನಾಲ್ಕೂ ಅರ್ಥಗಳಲ್ಲಿ ಬಳಸಲಾಗಿದೆ. ಪ್ರಾಚೀನ ಶಿಲ್ಪಶಾಸ್ತ್ರ ಗ್ರಂಥಗಳು ದೇವತೆಗಳ ಆವಾಸವಾಗಿ ದೇವತೆಗಳ ಶಿಲ್ಪಿ ತ್ವಷ್ಟಾರನು ಕಟ್ಟಿದ ಯಾವುದೇ ಕಟ್ಟಡವನ್ನು ರಥವೆಂದು ನಿರ್ದೇಶಿಸುತ್ತವೆ ; ''ವಜ್ರೋ ವೈ ರಥಃ'' ಎಂಬ ಮಾತು ತೈತ್ತಿರೀಯ ಬ್ರಾಹ್ಮಣದಲ್ಲಿ ಬರುತ್ತದೆ. ರಥವು ವಜ್ರದಂತೆ ಅಭೇದ್ಯವಾದುದು, ಎಂದರ್ಥ. ವಜ್ರವೆಂಬ ಪದಕ್ಕೆ ಸಾಂಕೇತಿಕವಾದ ತಾತ್ಪರ್ಯವಿದೆ. ಪ್ರಾಚೀನ ಸಮಾಜ ವ್ಯವಸ್ಥೆಯಲ್ಲಿ 'ರಥಕಾರ'ರೆಂಬ ಒಂದು ಜನಾಂಗವಿದ್ದ ಉಲ್ಲೇಖವಿದೆ. ರಥಕಾರರೆಂದರೆ ತೇರುಗಳನ್ನು ಮಾಡುವರೆಂದು ಅರ್ಥವಲ್ಲ ; ದೇಗುಲಗಳನ್ನು ಕಟ್ಟುವ ಶಿಲ್ಪಿಗಳು. ಅವರದ್ದು 'ಸಂಕೀರ್ಣ ಜಾತಿ', ಏಕೆಂದರೆ ಅವರ ಕೆಲಸದಲ್ಲಿ ಹಲವಾರು ಕೌಶಲಗಳು ಕಲೆತಿದ್ದುವು ; ಎಲ್ಲವನ್ನೂ ಕೂಡಿಸಿದರೇ ಶಿಲ್ಪವಾಗುವುದು.

ಮಾಮಲ್ಲ ಪುರದ 'ರಥಗಳು' ಈ ಅರ್ಥದಲ್ಲಿ ಶಿಲ್ಪಿಗಳು ಕಡೆದು ಕಟ್ಟಿದ ದೇಗುಲಗಳು.

ಮಾಮಲ್ಲಪುರದ ರಥಗಳನ್ನು ಪಾಂಡವರ ಸೋದರರ, ದ್ರೌಪದಿಯ ಹೆಸರುಗಳೊಂದಿಗೆ ಸೇರಿಸುವುದಿದೆ. ಈ ರಥಗಳಲ್ಲಿ ತುಂಬ ಸ್ವಾರಸ್ಯವಾದುದು 'ದ್ರೌಪದೀರಥ'. ವಾಸ್ತವವಾಗಿ ಇದು ದುರ್ಗೆಗೆ ಮೀಸಲಾದ ದೇಗುಲ. ಅದರ ರಚನೆ ಸರಳವಾಗಿದ್ದು ಅದರ ವಾಸ್ತುಶಿಲ್ಪ ಸುಂದರವಾಗಿದೆ. ಅದರಲ್ಲಿರುವುದು ಒಂದೇ ಕೋಣೆ ;







ಆದರಲ್ಲಿ ದುರ್ಗೆಯನ್ನು ಶಿಲೆಯಲ್ಲಿ ಅರ್ಧ ಉಬ್ಬಿದಂತೆ ಕಡೆದಿದ್ದಾರೆ. ಜಗತಿಯ ಮೇಲಿರುವ ಈ ಗುಡಿಯ ಒಳಗೆ ಹಗಲು ಮೂರು ಮೆಟ್ಟಿಲುಗಳ ಸಣ್ಣ ಸೋಪಾನವೊಂದನ್ನೇರಿ ಹೋಗಬೇಕು. ದ್ವಾರದ ಎರಡೂ ಕಡೆ ದ್ವಾರಪಾಲಕಿಯರಿದ್ದಾರೆ. ಉಳಿದ ನಾಲ್ಕೂ ಕಡೆ ಗೋಡೆಗಳಲ್ಲಿ ದುರ್ಗೆಯ ಪ್ರತಿಕೃತಿಗಳನ್ನು ಕಡೆದಿದ್ದಾರೆ.

ದೇಗುಲದ ಕಲ್ಪನೆಯಲ್ಲಿ ಪ್ರಧಾನವಾದ ಮಾರ್ಪಾಡೊಂದನ್ನು ಸೂಚಿಸುವ ಗುಡಿ ಇದು. ಗರ್ಭಗುಡಿಯಲ್ಲಿ ಯಾವ ಧಾತುವೂ ಇಲ್ಲ, ಸ್ತೂಪದಲ್ಲಿರುವಂತೆ. ಅಲ್ಲಿರುವುದು ಶಿಲ್ಪಿಯು ಕಡೆದ ಒಂದು ಪ್ರತಿಮೆ. ಪ್ರತಿಮೆಯಿರುವ ಕೋಣೆಗೆ ದ್ವಾರವೊಂದಿದ್ದು ಅದನ್ನು ಮುಚ್ಚುವ ವ್ಯವಸ್ಥೆ ಇಲ್ಲ ; ಭಕ್ತರು ನೇರವಾಗಿ ಒಳಗೆ ಹೋಗುವಂತಿದೆ. ಚಚ್ಚೌಕವಾದ ತಳವಿನ್ಯಾಸ, ನಾಲ್ಕು ಮೂಲೆಗಳಿದ್ದು ಇಳಿಜಾರಾದ ಸೂರು, ಇವು ಒಂದು ಬಗೆಯಲ್ಲಿ ಸ್ತೂಪಶೈಲಿಯ ಮುಂದುವರಿಕೆಯೇ. ಆದರೆ ಗುಡಿಸಿಲ ಸೂಚನೆ ಸ್ಪಷ್ಟವಾಗಿದೆ. ಸ್ತೂಪದ ನಾಲ್ಕು ತೋರಣಗಳು ಇಲ್ಲಿ ನಾಲ್ಕು ದ್ವಾರಗಳಾಗಿ ಮಾರ್ಪಟ್ಟಿವೆ ; ಈ ನಾಲ್ಕು ದ್ವಾರಗಳಲ್ಲಿ ಪ್ರತಿಮೆಯ ಮುಂದಿರುವುದೇ ದಿಟವಾದ ಪ್ರವೇಶದ್ವಾರ ; ಉಳಿದ ಮೂರೂ ದ್ವಾರದ ಪ್ರತಿಕೃತಿಯನ್ನು ಮಟ್ಟಿಗೆ ತಳೆದಿವೆ. ಈ ದ್ವಾರದ ಪ್ರತಿಕೃತಿಗಳಲ್ಲಿಯೂ ಗುಡಿಯೊಳಗಿರುವ ಮೂರ್ತಿಯ ಪ್ರತಿಕೃತಿಗಳಿವೆ. ಹೀಗಿರುವುದರಿಂದ ಮೂರ್ತಿಯು ನಾಲ್ಕೂ ದಿಕ್ಕುಗಳಿಗೆ ಮುಖಮಾಡಿ ನಿಂತಿರುವಂತಿದೆ. ಸ್ತೂಪದ ನಾಲ್ಕು ತೋರಣ ದ್ವಾರಗಳ ಪ್ರಯೋಜನ ಇಲ್ಲಿಯೂ ಕೂಡಿಬಂದಿದೆ. ಮೇಲಾಗಿ ಇಲ್ಲಿ ಮೂಡಿಬಂದಿರುವ ದೇಗುಲ ಸಣ್ಣ ಪ್ರಮಾಣದ್ದು ; ಒಮ್ಮೆಗೆ ಒಬ್ಬನು ಮಾತ್ರ ಅರ್ಚನೆಗೆ ಗುಡಿಯೊಳಗೆ ಹೋಗುವಂತಿದೆ. ಗುಡಿಯು ಸಾರ್ವಜನಿಕವಾದುದೆನ್ನುವುದರಲ್ಲಿ ಸಂದೇಹವಿಲ್ಲ : ಆದರೆ ಹತ್ತಾರು ಜನ ಒಟ್ಟಿಗೆ ನೆರೆಯುವ

ಕಲ್ಪನೆ ಇನ್ನೂ ಕಾಣುವುದಿಲ್ಲ. ಮುಂದೆ ಮೈದಳೆದ ದೇವಾಲಯಗಳಲ್ಲಿ ಸಭೆಗಳಿಗೆ ಅವಕಾಶವಿದೆ. ಶಾಸ್ತ್ರಗ್ರಂಥಗಳಲ್ಲಿ ಗರ್ಭಗುಡಿಯೇ ದಿಟವಾದ ಆಲಯವೆಂದು ನಿರ್ದೇಶಿಸಲಾಗಿದೆ. ಆದುದರಿಂದ, ಇಲ್ಲಿ ಗುಡಿಯ ಮೊದಲ ಹಂತವನ್ನು ಕಾಣುವೆವು. ಈ ರಥಗಳ ಸಾಲಿನಲ್ಲಿ ಆಚೆ ತುದಿಯಲ್ಲಿರುವುದು ಧರ್ಮರಾಜನ ಹೆಸರನ್ನು ಹೊತ್ತಿದೆ ; ಒಳಗಿರುವುದೇನೋ ಶಿವಲಿಂಗ. ಆದರೆ ಈ ಗುಡಿಯ ಮೇಲ್ಭಾಗದಲ್ಲಿ ದ್ರಾವಿಡ ಶೈಲಿಯ ವಿಮಾನದ ಮೊದಲ ರೂಪವೆನ್ನಬಹುದಾದ ವಿಮಾನವಿದೆ. ಗರ್ಭಗುಡಿಯ ಮುಂದೆ ತೆರೆದ ಹಜಾರವಿದೆ ; ಕಂಭಗಳೂ ಮೂಡಿಕೊಂಡಿವೆ.

ಈ ರಥಗಳಲ್ಲಿ ಅಲಂಕರಣ ಅಷ್ಟು ಹೆಚ್ಚಾಗಿಲ್ಲ. ಪುರಾಣ ಕಥೆಗಳ, ಪ್ರಸಂಗಗಳ ಚಿತ್ರಣವೂ ಕಾಣಬರುವುದಿಲ್ಲ. ಆದರೆ ಈ ರಥಗಳ ಬಳಿಯೇ ಇರುವ ಹತ್ತು ಶಿಲಾಮಂಟಪಗಳಲ್ಲಿ ಸೊಗಸಾದ ಶಿಲ್ಪಗಳಿವೆ ; ವರಾಹ, ಮಹಿಷಾಸುರಮರ್ದಿನಿ—ದುರ್ಗೆ, ಗೋವರ್ಧನೋದ್ಧರಣ— ಕೃಷ್ಣ ಮೊದಲಾದ ಪೌರಾಣಿಕ ಪ್ರಸಂಗಗಳ ಸುಂದರ ನಿರೂಪಣೆಗಳಿವೆ. ಈ ಮಂಡಪಗಳ ನಿರ್ಮಾಣಕ್ಕೆ ಕಾರಣನಾದ ರಾಜನೂ ತನ್ನ ಮಡದಿಯರೊಂದಿಗೆ ಶಿಲ್ಪದಲ್ಲಿ ಮೂಡಿಕೊಂಡು ನಿಂತಿದ್ದಾನೆ. ನಿತ್ಯಜೀವನದ ಸಂದರ್ಭಗಳೂ ಚಿತ್ರಣದಲ್ಲಿ ಸೇರಿಬಂದಿವೆ. ಈ ಮಂಟಪಗಳನ್ನು ಗುಡಿಗಳೆನ್ನುವ ಹಾಗಿಲ್ಲ. ಇಲ್ಲಿ ಕಲೆ ಮುಖ್ಯವಾದ ವಿವರ ; ಈ ಮಂಟಪಗಳನ್ನು ಶಿಲ್ಪ ಕಲಾ ಪ್ರದರ್ಶನಾಲಯಗಳೆಂದರೆ ತಪ್ಪಲ್ಲ.

ಇದೇ ಕಾಲಕ್ಕೆ ಸೇರಿದ ಮತ್ತೆರಡು ಗುಹಾಂತರ್ದೇವಾಲಯಗಳು ತಮಿಳುನಾಡಿನ ಸೇಲಂ ಜಿಲ್ಲೆಗೆ ಸೇರಿದ ನಾಮಕ್ಕಲ್‌ನಲ್ಲಿವೆ. ಇಲ್ಲಿರುವ ಶಿಲ್ಪಫಲಕಗಳನ್ನು ನೋಡಿದರೆ ಮಾಮಲ್ಲಪುರದ

ಮಂಟಪಗಳಲ್ಲಿರುವ ಶಿಲ್ಪಫಲಕಗಳು ನೆನಪಿಗೆ ಬರುತ್ತವೆ. ಆದರೆ ಇವು ಗುಡಿಗಳು, ಗುಹೆಯಂತಿರುವ ಗುಡಿಗಳು ; ವಿಷ್ಣುವಿಗೆ ಮೀಸಲಾದುವು. ಶಾಸನಗಳಲ್ಲಿ ಒಂದು ಗುಹಾಲಯವನ್ನು 'ಅತಿಯನಾಥ-ವಿಷ್ಣುಗೃಹ' ಎಂದು ಕರೆಯಲಾಗಿದೆ. ಅತಿಯರೆಂಬ ರಾಜಮನೆತನಕ್ಕೆ ಸೇರಿದ ಗುಣಶೀಲನೆಂಬುವನು ಈ ಗುಹಾಲಯಗಳನ್ನು ಕಡೆಯಿಸಿದವನು. ತಮಿಳುನಾಡಿನ ತಗಡೂರು (ಈಗಿನ ಧರ್ಮಪುರಿ) ಅವನ ರಾಜಧಾನಿಯಾಗಿದ್ದು ಕ್ರಿಸ್ತಾಬ್ಧ 750ರ ಸುಮಾರಿಗೆ ಆಳುತ್ತಿದ್ದವನೆಂದು ತಿಳಿದುಬರುತ್ತದೆ. ಗುಹಾಲಯಗಳಲ್ಲಿ ವಿಷ್ಣುವಿನ ವರಾಹಾವತಾರ, ನರಸಿಂಹಾವತಾರ ಮತ್ತು ವಾಮನಾವತಾರಗಳು ತುಂಬ ಸುಂದರವಾಗಿ ಶಿಲ್ಪ ಫಲಕಗಳಲ್ಲಿ ಮೂಡಿಬಂದಿವೆ. ಪ್ರಸಂಗ ನಿರೂಪಣಾ ಶೈಲಿಯನ್ನು ಶಿಲ್ಪಿ ಚೆನ್ನಾಗಿ ಬಳಸಿಕೊಂಡಿದ್ದಾನೆ

ಕರ್ಣಾಟಕ ಪ್ರಾಂತ್ಯದಲ್ಲಿ ಬಾದಾಮಿಯಲ್ಲಿ ನಾಲ್ಕು ಗುಹಾಲಯಗಳಿವೆ. ಇವು ಚಾಳುಕ್ಯ ರಾಜರಾಗಿದ್ದ ಮೊದಲನೆಯ ಕೀರ್ತಿವರ್ಮ ಮತ್ತು ಮಂಗಳೀಶರ ಕಾಲದಲ್ಲಿ ಸಿದ್ಧವಾದುವು ; ಎಂದರೆ ಕ್ರಿಸ್ತಾಬ್ಧ ಆರನೆಯ ಶತಮಾನದಲ್ಲಿ. ಈ ಅರಸರು ಭಾರತದ ದಕ್ಷಿಣ ಮತ್ತು ಉತ್ತರ ಎರಡೂ ಭಾಗಗಳೊಂದಿಗೆ ಸಂಪರ್ಕವನ್ನು ಬೆಳೆಯಿಸಿಕೊಂಡಿದ್ದವರು. ಎರಡೂ ಭಾಗಗಳ ಸಂಸ್ಕೃತಿಗಳ ಪರಿಚಯವನ್ನು ಪಡೆದಿದ್ದವರು. ಆದುದರಿಂದ ಇವರ ಆದೇಶದ ಮೇಲೆ ರೂಪುತಳೆದ ಆಲಯಗಳು ಉತ್ತರ-ದಕ್ಷಿಣ ಭಾಗಗಳ ಹಲವು ಶೈಲಿಗಳ ಸಂಗಮವನ್ನು ಸೂಚಿಸುವುದು ಆಶ್ಚರ್ಯವೇನಲ್ಲ. ಬೇರೆ ಬೇರೆ ಶೈಲಿಗಳ ಪ್ರಯೋಗದಿಂದ ಹೊಸ ಶೈಲಿಗಳೂ ಮೈದಳೆದುವು. ನಾಲ್ಕು ಗುಹಾಲಯಗಳಲ್ಲಿ ಒಂದು ಜೈನಧರ್ಮವನ್ನು ಮೆಚ್ಚಿಕೊಂಡದ್ದು. ಈ ಗುಹಾಲಯಗಳಲ್ಲೆಲ್ಲ ದೊಡ್ಡದು (ಇದನ್ನು ಮೂರನೆಯ

ಗುಹೆಯೆಂದು ನಿರ್ದೇಶಿಸುತ್ತಾರೆ) ತುಂಬ ಹಳೆಯದೂ ಹೌದು. ಇದು ಸಿದ್ಧವಾದ ಸಮಯ ಕ್ರಿಸ್ತಾಬ್ದ 578ರ ಸುಮಾರು. ಅದನ್ನು ಕಡೆಯಿಸಿದವನು ಮೊದಲನೆಯ ಕೀರ್ತಿವರ್ಮ (ಕ್ರಿ. 566-597). ಇದರ ಆರಾಧ್ಯದೈವ ವಿಷ್ಣು. ಇಲ್ಲಿ ತ್ರಿವಿಕ್ರಮನ ಭವ್ಯವಾದ ಅರ್ಧ ಶಿಲ್ಪವಿದೆ. ಮತ್ತು ಇಲ್ಲಿರುವ ಆಸೀನ ವಿಷ್ಣುವಿನದು ಜಗದ್ವಿಖ್ಯಾತ ಶಿಲ್ಪ. ಮೊದಲನೆಯ ಮತ್ತು ಎರಡನೆಯ ಗುಹಾಲಯಗಳು ಶೈವಸಂಪ್ರದಾಯಕ್ಕೆ ಸೇರಿದುವು. ಅಜಂಟಾ ಗುಹಾ ಪಂಕ್ತಿಗಳಲ್ಲಿ ಕಡೆಯದರ ಪ್ರಭಾವವನ್ನು ಈ ಗುಹಾಲಯಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಪೂಜಾಗೃಹ ಮತ್ತು ವಸತಿ ಎರಡು ಪ್ರಯೋಜನಗಳನ್ನೂ ಒಳಗೊಂಡ ಗುಹೆಗಳು ಇವು ; ಇವು ಆಲಯಗಳೂ ಹೌದು.

ಕರ್ಣಾಟಕ ಪ್ರದೇಶದ ನಿರ್ಮಿತ ಆಲಯಗಳು ತೀರ ಪ್ರಾಚೀನ ಕಾಲದವು. ಬಿಜಾಪುರ ಜಿಲ್ಲೆಯ ಐಹೊಳೆಯಲ್ಲಿರುವ ಕೊಂತಗುಡಿ ಮತ್ತು ಲಾಡ್‌ಖಾನ್ ಗುಡಿಗಳು ಗುಹಾಲಯಗಳಿಗಿಂತ ಮೊದಲೇ ಮೂಡಿಕೊಂಡುವು ; ಎಂದರೆ ಕ್ರಿಸ್ತಾಬ್ದ 500ಕ್ಕೆ ಮೊದಲೇ ಇವು ಇದ್ದುವು. ಈ ಸಣ್ಣ ಊರಿನಲ್ಲಿ ಎಪ್ಪತ್ತರಷ್ಟು ಗುಡಿಗಳಿವೆ. ಇವುಗಳಲ್ಲಿ ತುಂಬ ಪ್ರಸಿದ್ಧವಾದುದು ದುರ್ಗಿಗುಡಿ. ಎತ್ತರವಾದ ಜಗತಿಯ ಮೇಲೆ ಕಟ್ಟಿರುವ ಈ ಗುಡಿಯು ಕ್ರಿಸ್ತಾಬ್ಧ 450ರಂದು ಮೊದಲಾಯಿತೆಂದು ತಿಳಿದುಬರುತ್ತದೆ. ಅದು ಮುಗಿದುದೇನೋ ಸುಮಾರು ನೂರು ವರ್ಷಗಳ ನಂತರ ! ಈ ಗುಡಿಯನ್ನೂ ಅಲ್ಲಿರುವ ಇತರ ಗುಡಿಗಳನ್ನೂ ನೋಡಿದರೆ ಬೌದ್ಧ ಚೈತ್ಯದ ಆಕಾರವನ್ನೂ ಪ್ರಯೋಜನವನ್ನೂ ಚೆನ್ನಾಗಿ ಅಳವಡಿಸಿಕೊಂಡಿರುವುದು ಕಾಣುತ್ತದೆ ; ಗುಪ್ತ ಶೈಲಿಯ ಶಿಖರವೂ ಸೇರಿಬಂದಿದೆಯೆನ್ನಿ.



ಗುಪ್ತರೆಂಬ ರಾಜರು ಕ್ರಿಸ್ತಾಬ್ದ 330-530ರವರೆಗೆ ಉತ್ತರಭಾಗದಲ್ಲಿ ಆಳಿದರು : ಅವರಿಗೆ ದೇವಾಲಯಗಳನ್ನು ಕಟ್ಟುವುದರಲ್ಲಿ ಆಸಕ್ತಿಯಿದ್ದಿತು. ಉತ್ತರ ಭಾರತದಲ್ಲಿ ಉಳಿದು ಬಂದಿರುವ ಅತಿ ಪ್ರಾಚೀನ ದೇವಾಲಯಗಳೆಲ್ಲ ಅವರ ಆಸಕ್ತಿಯ ಫಲಗಳೇ, ಆ ಕಾಲದವೇ. ಗರ್ಭಗುಡಿಯ ಮೇಲೆ ಆಕಾಶದ ಕಡೆ ಮೈಚಾಚಿ ಎದ್ದು ನಿಲ್ಲುವ ಶಿಖರ ಮೊದಲಾದದ್ದು ಐದನೆಯ ಶತಮಾನದಲ್ಲಿ, ಘನವಾದ ಗುಮ್ಮಟದ ಆಕಾರವನ್ನು ತಳೆದು, ಮೇಲೆ ಸ್ತೂಪಿಯಲ್ಲಿ ಮುಗಿಯುವ ಶಿಖರ ಅಥವಾ ವಿಮಾನ ಈಗ ಭಾರತೀಯ ದೇವಾಲಯದ ಅವಿಭಾಜ್ಯ

ಅಂಗವಾಗಿಬಿಟ್ಟಿದೆ. ಪ್ರಾದೇಶಿಕವಾದ ಕೆಲವು ಮಾರ್ಪಾಟುಗಳಿದ್ದರೂ, ಮೂಲರೂಪ ಇಡೀ ದೇಶಕ್ಕೆ ಸಾಧಾರಣವಾದುದು. ಸ್ತೂಪಿ ಎಂಬ ಲಿಂಗ, ಸ್ತೂಪವೆಂಬ ಕಟ್ಟಡ ಎರಡರ ನಡುವೆ ಇರುವ ನೆಂಟು ಆಕಸ್ಮಿಕ ವಲ್ಲ. ಶಿಖರದ ಕಲ್ಪನೆಯಲ್ಲಿ ಸ್ತೂಪದ ಸ್ಮರಣೆ ನುಸುಳಿಕೊಂಡಿದೆ.

ಶಾತವಾಹನರ ಕಾಲದಲ್ಲೇ, ಎಂದರೆ ಕ್ರಿಸ್ತಾಬ್ದ ಮೊದಲೆರಡು ಶತಮಾನಗಳಲ್ಲೇ, ಹೆಸರು ಪಡೆದಿದ್ದ ಬನವಾಸಿ ಮತ್ತು ತಾಳಗುಂದ ಗುಡಿಗಳಲ್ಲದೆ, ಹಲ್ಮಿಡಿ, ಪುಲಿಗೆರೆ, ಹಲಸಿ, ಮಳವಳ್ಳಿ ಮೊದಲಾದೆಡೆ ಅಷ್ಟೇ ಪ್ರಾಚೀನವಾದ ಗುಡಿಗಳಿದ್ದುದು ಕದಂಬರ ಶಾಸನಗಳಿಂದ ಸ್ಪಷ್ಟವಾಗುತ್ತದೆ. ತಾಳಗುಂದದ ಪ್ರಣವೇಶ್ವರ ಆಲಯವು ಕ್ರಿಸ್ತಾಬ್ದ 450ಕ್ಕಿಂತ ಮುಂಚಿನದು ; ಹಲಸಿಯ ಜಿನಾಲಯವು ಕದಂಬ ಅರಸು ಮೃಗೇಶವರ್ಮನ ಕಾಲದ್ದು, ಎಂದರೆ ಕ್ರಿಸ್ತಾಬ್ದ 455ರ ಸುಮಾರಿನದು. ಆಂಧ್ರಪ್ರದೇಶದ ಗುಡಿಮಲ್ಲಂ ಮತ್ತು ಜೇಚೆರ್ಲ ದೇವಾಲಯಗಳನ್ನು ಬಿಟ್ಟರೆ, ಈ ದೇವಾಲಯಗಳೇ ದಕ್ಷಿಣ ಭಾರತದ ಅತಿ ಪ್ರಾಚೀನ ನಿದರ್ಶನಗಳು.

ಉತ್ತರ ಆರ್ಕಾಡು ಜಿಲ್ಲೆಯಲ್ಲಿ ರೇಣಿಗುಂಟ ಬಳಿಯಿರುವ ಗುಡಿಮಲ್ಲದ ಪರಶುರಾಮೇಶ್ವರನ ಗುಡಿ ಕ್ರಿಸ್ತಾಬ್ಧ ಎರಡನೆಯ ಶತಮಾನದ್ದೆಂದು ಹೇಳುತ್ತಾರೆ. ಈ ಗುಡಿಯ ಸ್ವಾರಸ್ಯ ಇರುವುದು ಗರ್ಭಗುಡಿಯಲ್ಲಿರುವ ಅಪೂರ್ವವಾದ, ಪ್ರಾಚೀನವಾದ ಶಿವಲಿಂಗದಲ್ಲಿ. ಅದರ ವಿಚಾರವಾಗಿ ಹೆಚ್ಚು ಹೇಳುವ ಸಂದರ್ಭ ಮುಂದೆ ಬರುತ್ತದೆ. ಈ ಗುಡಿಗಿಂತ ಜೇಚೆರ್ಲದಲ್ಲಿರುವ ಕಪೋತೇಶ್ವರ ದೇವಾಲಯ ಹೆಚ್ಚು ಗಮನಾರ್ಹವಾದುದು. ಈ ದೇವಾಲಯವನ್ನು ಕ್ರಿಸ್ತಾಬ್ದ ನಾಲ್ಕನೆಯ ಶತಮಾನದ ಸುಮಾರಿಗೆ ಕಟ್ಟಲಾಯಿತೆಂದು ತಿಳಿದುಬರುತ್ತದೆ. ಆಂಧ್ರಪ್ರದೇಶದಲ್ಲಿ ಈಗಿನ ಗುಂಟೂರು ಜಿಲ್ಲೆ ಮತ್ತು

ಸುತ್ತಮುತ್ತಣ ಪ್ರದೇಶವನ್ನು ಆನಂದಗೋತ್ರದ ಅರಸರು ಕ್ರಿಸ್ತಾಬ್ಧ ಮೊದಲ ಶತಮಾನಗಳಲ್ಲಿ ಆಳುತ್ತಿದ್ದರು. ಇವರೇ ಈ ಗುಡಿಯ ನಿರ್ಮಾಣಕ್ಕೆ ಪ್ರೇರಣೆಯನ್ನು ಒದಗಿಸಿದರು. ಈಗ ಇದು ಶಿವಾಲಯವಾದರೂ, ಮೊದಲಿಗೆ ಇದು ಬೌದ್ಧವಿಹಾರವಾಗಿದ್ದಿತೆನ್ನುವುದರಲ್ಲಿ ಸಂಶಯವಿಲ್ಲ. ಬಹುಶಃ ಇದನ್ನು ಕಟ್ಟಿಸಿದವನು ಆನಂದ ಗೋತ್ರದ ದಾಮೋದರವರ್ಮ ; ಇವನಿಗೆ ಶಾಸನಗಳಲ್ಲಿ 'ಸಮ್ಯಕ್-ಸಂಬುದ್ಧ-ಪಾದಾನುಧ್ಯಾತ'ನೆಂಬ ಪ್ರಶಸ್ತಿಯಿದೆ. ಈ ಗುಡಿಯು ಗಜಪೃಷ್ಠಾಕಾರದಲ್ಲಿ ಪ್ರಾಚೀನ ಚೈತ್ಯಾಲಯವನ್ನು ಹೋಲುತ್ತದೆ. ಶಿಲಾದೇಗುಲಗಳಲ್ಲಿ ತುಂಬ ಆಸಕ್ತಿಯನ್ನು ತಳೆದ ಪಲ್ಲವರಾಜ ಮಹೇಂದ್ರವರ್ಮನು ಆನಂದಗೋತ್ರದ ಅರಸರೊಂದಿಗೂ ವಿಷ್ಣುಕುಂಡಿ ಅರಸರೊಂದಿಗೂ ನೆಂಟನ್ನು ಬೆಳೆಸಿದ್ದನೆಂಬ ಸೂಚನೆಯಿದೆ. ಜೇಚೆರ್ಲ ಗುಡಿಯನ್ನು ನೋಡಿ ಅವನು ಸ್ಫೂರ್ತಿಯನ್ನು ತಳೆದಿದ್ದಿರಬಹುದು. ಮಾಮಲ್ಲಪುರದ ರಥಗಳಲ್ಲಿ ಭೀಮರಥ ಮತ್ತು ಸಹದೇವರಥ ಎನಿಸಿಕೊಳ್ಳುವುವು ಜೇಚೆರ್ಲ ಗುಡಿಯನ್ನೇ ಹೋಲುವುದನ್ನು ಗಮನಿಸಬಹುದು.

ಚಾಳುಕ್ಯರ ರಾಜ್ಯದಲ್ಲಿ ಪ್ರಖ್ಯಾತವಾಗಿದ್ದ ಪಟ್ಟದಕಲ್ಲು (ಅಥವಾ ಕಿಸುವೊಳಲ್) ಈಗ ಕರ್ನಾಟಕದ ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನಲ್ಲಿದೆ. ಮೊದಲಿಗೆ ಇದು ಪ್ರಧಾನವಾದ ಪಟ್ಟಣವಾಗಿದ್ದಿತು ; ಲಕುಲೀಶ-ಶೈವಪಂಥ ಇಲ್ಲಿ ಪ್ರಬಲವಾಗಿದ್ದಿತು. ಗ್ರೀಕ್ ಪ್ರವಾಸಿ ಟಾಲೆಮಿಯೂ ಕ್ರಿಸ್ತಾಬ್ದ 150ರ ಸುಮಾರಿಗೆ ಇಲ್ಲಿಗೆ ಬಂದಿದ್ದು, ಅವನ ಬರಹದಲ್ಲಿ ಬದಾಮಿಯೊಂದಿಗೆ ಪಟ್ಟದಕಲ್ಲನ್ನೂ ಉಲ್ಲೇಖಿಸಿದ್ದಾನೆ. ಈಗ ಇಲ್ಲಿ ಸುಮಾರು ಹತ್ತು ಗುಡಿಗಳಿವೆ, ಅವುಗಳಲ್ಲಿ ಹೆಚ್ಚಾಗಿ ಏಳೆಂಟನೆಯ ಶತಮಾನಗಳವೇ. ಈ ಗುಡಿಗಳಲ್ಲಿ ಹೆಸರುವಾಸಿಯಾದ

ವಿರೂಪಾಕ್ಷ ಗುಡಿ ಕ್ರಿಸ್ತಾಬ್ದ 740ರ ಸುಮಾರಿಗೆ ಸಿದ್ಧವಾಯಿತು ; ಇದು ಬಹುಮಟ್ಟಿಗೆ ಕಾಂಚೀಪುರದ ರಾಜಸಿಂಹ ದೇವಾಲಯ (ಕ್ರಿಸ್ತಾಬ್ದ 700ರ ಸುಮಾರಿನ ಕಟ್ಟಡ)ವನ್ನು ಅನುಸರಿಸಿದೆಯೆನ್ನಬಹುದು. ಅಲ್ಲದೆ, ವಿರೂಪಾಕ್ಷ ಗುಡಿಯೇ ಎಲ್ಲೋರದ ಕೈಲಾಸ ದೇವಾಲಯಕ್ಕೆ ಪ್ರೇರಣೆಯನ್ನು ಒದಗಿಸಿರಲು ಸಾಧ್ಯ. ಈ ಕೈಲಾಸ ದೇವಾಲಯವನ್ನು ರಾಷ್ಟ್ರಕೂಟ ಅರಸು ಮೊದಲನೆಯ ಕೃಷ್ಣ ಕ್ರಿಸ್ತಾಬ್ದ 757ರಲ್ಲಿ ಹಳೆಯ ಶಿವಾಲಯವೊಂದರ ಮೇಲೆ ಕಟ್ಟಿಸಿದ. ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಗೆ ಮೊದಲು ಲೋಕೇಶ್ವರಾಲಯವೆಂಬ ಹೆಸರಿದ್ದಿತು. ಲೋಕೇಶ್ವರನೆಂಬ ಮಾಹಾಯಾನ ಬೌದ್ಧದೇವತೆಗೂ ಲಕುಲೀಶಶೈವ ಪಂಥಕ್ಕೂ ಸಂಬಂಧವಿದೆ. ಚಾಳುಕ್ಯ ರಾಜ ಇಮ್ಮಡಿ ವಿಕ್ರಮಾದಿತ್ಯನ ಅರಸಿ ಲೋಕಮಹಾದೇವಿಯ ಹೆಸರಿನ ಮೇಲೆ ಲೋಕೇಶ್ವರನ ಗುಡಿಗೆ ನಾಮಕರಣವಾಯಿತೆಂದು ಸೂಚನೆಯಿದೆ. ಪಟ್ಟದಕಲ್ಲಿನ ಗುಡಿಯ ಅಪೂರ್ವ ಮತ್ತು ಸೋಜಿಗವಾದ ವಿವರವೆಂದರೆ ಈ ಕಟ್ಟಡವನ್ನು ಕಟ್ಟಿದ ಸ್ಥಪತಿಯ ಹೆಸರು ಅಲ್ಲಿ ಉಳಿದುಕೊಂಡಿರುವುದು. ಇವನು ಸೂತ್ರಧಾರಿ ಅನಿವಾರಿತಗುಂಡ. ದೇವಾಲಯಗಳ ಇತಿಹಾಸದಲ್ಲಿ ಸ್ಥಪತಿಯ ಹೆಸರೂ ಮುಂದಿನ ಕಾಲಕ್ಕೆ ಉಳಿದು ಬರಬೇಕೆಂಬ ಹಂಬಲ ಮೊದಲು ಮೂಡಿಕೊಂಡಿರುವುದು ಇಲ್ಲಿಯೇ. ಮೊದಲಿಗೆ ಈ ಗುಡಿ ಸರಳವಾಗಿದ್ದು ಒಂದೇ ಕೋಣೆಯಿದ್ದಿರಬೇಕು ; ಸಣ್ಣದಾದ ಶಿಖರ ಇದರ ಮೇಲೆ ಇದ್ದಿರಬೇಕು. ಆದರೆ ಬರುಬರುತ್ತ ಹಲವಾರು ಮಂಟಪಗಳೂ, ಕೋಣೆಗಳೂ ಸೇರಿಕೊಂಡು ಗುಡಿಯ ರಚನೆ ಜಟಿಲವಾಗಿದೆ. ಆದರೆ ಮೊದಲು ಮೂಡಿದ್ದ ಏಕತಾನತೆ ಮರೆಯಾಗಿಲ್ಲ. ಮುಖಶಾಲೆಯೂ ಇಲ್ಲದ ಮೂಲಗುಡಿ ಹೇಗಿದ್ದಿತೆಂದು ತಿಳಿಯಲು ಅಲ್ಲಿಯೇ ಇರುವ ವಿಜಯೇಶ್ವರ (ಮೊದಲಿನ ಹೆಸರು ಸಂಗಮೇಶ್ವರ) ಗುಡಿಯನ್ನು



ನೋಡಬೇಕು. ಈ ಗುಡಿಯನ್ನು ಕಟ್ಟಿಸಿದವನು ವಿಜಯಾದಿತ್ಯ (ಕ್ರಿ. 696-733).

ಇನ್ನೂ ಪ್ರಾಚೀನವಾದ ಗುಡಿಯೆಂದರೆ ಪಾಪನಾಥ ದೇವಾಲಯ. ಮೊದಲಿಗೆ ಇದು ವಿಷ್ಣುವಿನ ಗುಡಿಯಾಗಿದ್ದಿತೆಂದು ಪೆರ್ಸಿ ಬ್ರೌನ್ ಅವರ ಸೂಚನೆ. ಇದಕ್ಕೆ ಉತ್ತರದೇವಾಲಯಗಳಿಗಿರು ವಂತೆ ಶಿಖರವಿದೆ. ಇದರ ನಿರ್ಮಾಣ ಕ್ರಿಸ್ತಾಬ್ದ 690ಕ್ಕೆ ಮೊದಲೇ ಎಂದು ಹೇಳುತ್ತಾರೆ. ಇಕ್ಕಟ್ಟಾದ ಪ್ರದಕ್ಷಿಣಾಪಥ, ಅತಿದೊಡ್ಡ ಅಂತರಾಳ, ಹರಡಿಕೊಂಡ ಕಂಭಗಳು, ಸಣ್ಣ ವಿಮಾನ ಇವನ್ನೆಲ್ಲ ನೋಡಿದರೆ ಆಗಮ ವಿಧಿಗಳನ್ನು ಅಲಕ್ಷಿಸಿದಂತೆ ತೋರುತ್ತದೆ.

ಗುಹಾಲಯಗಳನ್ನೇ ಹೆಚ್ಚು ಹೋಲುವಂಥ ಗುಡಿ ಇದು. ಗುಡಿಯ ಪ್ರಧಾನಭಾಗದಿಂದ ಬೇರೆಯಾಗಿರುವ ಅರ್ಧ ಮಂಟಪದಲ್ಲಿ ನಟರಾಜ ಗೋಷ್ಠಿಯ ಶಿಲ್ಪಚಿತ್ರಣವಿದೆ. ಮುಖ್ಯ ವಿಗ್ರಹದ ಎಡಭುಜದ ಬಳಿ ಶಿಲ್ಪಿಯ ಹೆಸರು ಬಲದೇವಯ್ಯನೆಂದು ಕಡೆಯಲ್ಪಟ್ಟಿದೆ.

ಬಾದಾಮಿ ಚಾಳುಕ್ಯರ ದೇವಾಲಯಗಳು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕೋಪಣ, ಪುಲಿಗೆರೆ, ವಕ್ಕುಂದ ಮೊದಲಾದ ಸ್ಥಳಗಳಲ್ಲೆಲ್ಲ ಹರಡಿವೆ. ನಮ್ಮ ನಾಡಿನ ದೇವಾಲಯ ನಿರ್ಮಾಣದ ಇತಿಹಾಸದಲ್ಲಿ ಈ ದೇವಾಲಯಗಳು ಪ್ರಮುಖವಾದ ಹಂತವೊಂದನ್ನು ಸೂಚಿಸುತ್ತವೆ. ಗುಹಾಲಯ, ಶಿವಾಲಯಗಳಿಗೂ ನಿರ್ಮಿತ ಆಲಯಗಳಿಗೂ ನಡುವಣ ಹಂತ ಇದು. ಇಲ್ಲಿ ಹಲವಾರು ಪ್ರಯೋಗಗಳನ್ನೂ ಕಾಣಬಹುದು. ಬಹುಶಃ ನಾಗರ, ದ್ರಾವಿಡ, ವೇಸರವೆಂಬ ವಿಭಾಗಕ್ಕೆ ಮೊದಲ ಕ್ಷೇತ್ರ ಇದೇ ಇದ್ದೀತು.

ನಾಗರ, ದ್ರಾವಿಡ, ವೇಸರವೆಂಬ ವಿಭಾಗ ಸಮರ್ಪಕವೂ ಅಲ್ಲ, ಸಂಪೂರ್ಣವೂ ಅಲ್ಲ, ಶಿಖರವನ್ನು ಕುರಿತ ಶೈಲಿಪ್ರಭೇದಗಳನ್ನು ಸೂಚಿಸುವ ವಿಭಾಗ ಅಷ್ಟೇ ಅದು. ವಿಷ್ಣುತಿಲಕ, ಮಾನಸಾರ, ಮುಕುಟಾಗಮ, ಶಿಲ್ಪ ರತ್ನ, ಮಯಮತ ಮತ್ತು ಈಶಾನಶಿವ ಗುರುಪದ್ಧತಿ ಮೊದಲಾದ ಗ್ರಂಥಗಳಲ್ಲಿ ಈ ವಿಭಾಗದ ಉಲ್ಲೇಖವಿದೆ; ಒಂದೊಂದು ರೀತಿಯ ವಿವರಗಳನ್ನೂ ಅವು ಸೂಚಿಸುತ್ತವೆ. ವಿಷ್ಣುತಂತ್ರ, ಮಾರ್ಕಂಡೇಯ ಸಂಹಿತೆ ಮೊದಲಾದ ಇತರ ಕೆಲವು ಗ್ರಂಥಗಳಲ್ಲಿ ದೇವಾಲಯಗಳನ್ನು ಒಂಬತ್ತು ಶೈಲಿಗಳಲ್ಲಿ ವಿಂಗಡಿಸಿರುವುದಿದೆ. ಮೇಲೆ ಹೇಳಿದ ಮೂರರ ಜೊತೆಗೆ ಸಾರ್ವದೇಶಿಕ, ಕಳಿಂಗ, ವರಾಟ (ಈ ಮೂರೂ ಪ್ರಾದೇಶಿಕ ಶೈಲಿಗಳನ್ನು ಕಾಮಿಕಾಗಮ ಒಪ್ಪಿಕೊಂಡಿದೆ), ಮಂದಿರ, ಭವನ, ಯೋಗ ಎಂಬ ಬಗೆಗಳನ್ನು

ಹೇಳಲಾಗಿದೆ. ಆದರೆ ಇಲ್ಲಿ ನಿರೂಪಿಸಿರುವ ಶೈಲಿಭೇದ ತುಂಬ ಸೂಕ್ಷ್ಮ ವಾದುದು ; ಪ್ರಾಯೋಗಿಕವಾಗಿ ಅವುಗಳ ವಿಭಾಗ ನಿಲ್ಲುವುದಿಲ್ಲ. ನಾಗರ, ದ್ರಾವಿಡ , ವೇಸರವೆಂಬ ವಿಭಾಗವೇ ಉಳಿದಿರುವುದು. ಶಿಲ್ಪರತ್ನ ಮತ್ತು ಈಶಾನಶಿವ ಗುರುಪದ್ಧತಿ ಎರಡೂ ಗ್ರಂಥಗಳು ಈ ವಿಭಾಗವು ಶಿಖರವನ್ನು ಕುರಿತದ್ದು ಎಂದು ಸ್ಪಷ್ಟಪಡಿಸುತ್ತವೆ. ನಾಗರವೆಂದರೆ ಚಚ್ಚೌಕವಾಗಿರುವುದು ; ವೇಸರ ವೃತ್ತಾಕಾರದ್ದು, ದ್ರಾವಿಡ ಬಹುಭುಜವುಳ್ಳದ್ದು (ಆರು ಅಥವಾ ಎಂಟು). ಈ ಗ್ರಂಥಗಳ ಪ್ರಕಾರ, ಈ ಆಕಾರಭೇದ ಶಿಖರದ ಮೇಲ್ಮೈಗೆ ಅನ್ವಯಿಸುವುದಿಲ್ಲ, ಅಧಿಷ್ಠಾನ ಅಥವಾ ತಳಕ್ಕೆ ಅನ್ವಯಿಸುತ್ತದೆ. ಶೈಲಿಪ್ರಭೇದಗಳು ಏನಿದ್ದರೂ, ಪ್ರಾದೇಶಿಕ ವಿಭಾಗದ ಪಾತ್ರ ಇಲ್ಲಿದೆಯೆಂದು ಗ್ರಂಥಗಳೇ ಹೇಳುತ್ತವೆ. ನಾಗರವೆಂಬ ಶೈಲಿ ಹಿಮಾಲಯ ಮತ್ತು ವಿಂಧ್ಯಪರ್ವತಗಳ ನಡುವೆ ಬಳಕೆಯಲ್ಲಿರುವುದು ; ವೇಸರವೆಂಬುದು ವಿಂಧ್ಯಪರ್ವತ ಮತ್ತು ಕೃಷ್ಣಾನದಿಯ ನಡುವೆ ಇರುವಂಥದು ; ದ್ರಾವಿಡವು ಕೃಷ್ಣಾನದಿ ಮತ್ತು ಕನ್ಯಾಕುಮಾರಿಯ ನಡುವಣ ಪ್ರದೇಶದಲ್ಲಿರುವುದು. ಇನ್ನೊಂದು ನಿರೂಪಣೆಯ ಪ್ರಕಾರ, ಕೃಷ್ಣಾ ನದಿ ಮತ್ತು ಕನ್ಯಾಕುಮಾರಿಯ ನಡುವೆ ಬಳಕೆಯಲ್ಲಿರುವ ದಾಕ್ಷಿಣಾತ್ಯ ಶೈಲಿಯೇ ವೇಸರ, ವಿಂಧ್ಯಪರ್ವತ ಮತ್ತು ಕೃಷ್ಣಾನದಿಗಳ ನಡುವೆ ಮಧ್ಯಶೈಲಿಯೇ ದ್ರಾವಿಡ. ವೇಸರವೆಂಬ ಮಾತಿಗೆ ಮಿಶ್ರ ಎಂದು ಧ್ವನಿಯಿರುವಂತೆ ತೋರುತ್ತದೆ. ನಾಗರವೆಂಬುದು ತಳವಿನ್ಯಾಸದಲ್ಲಿ ಚಚ್ಚೌಕ, ಸೂಜಿಯ ಮೊನೆಯಂತೆ ಮೇಲೆ ಮೇಲೆ ಸಣ್ಣದಾಗುತ್ತ ಹೋಗುತ್ತದೆ ; ಶಿಖರ ಊರ್ಧ್ವಗಾಮಿಯಾದುದು. ದ್ರಾವಿಡವಾದರೋ ಹರಡಿಕೊಂಡಿರುವುದು ; ಶಿಖರ ಗುಮ್ಮಟದಂತೆ ಅಥವಾ ಅಷ್ಟಭುಜಾಕೃತಿಯಲ್ಲಿ ಇರುವುದು. ದ್ರಾವಿಡ ಶೈಲಿಯ ಇನ್ನೊಂದು ವಿವರವೆಂದರೆ ಗುಡಿಯ ದ್ವಾರದ ಮೇಲೆ ಉನ್ನತವಾಗಿ ಎದ್ದು ನಿಲ್ಲುವ

ಗೋಪುರ. ಆದರೆ ಗೋಪುರವೆಂಬ ವಿವರ ಅನಂತರ ಮೈದಳೆದದ್ದು. ವೇಸರವು ತಳವಿನ್ಯಾಸದಲ್ಲಿ ವೃತ್ತಾಕಾರವಾಗಿದ್ದು ಉಳಿದೆರಡು ಶೈಲಿಗಳ ಶಿಖರ ವಿವರಗಳನ್ನೂ ಅಳವಡಿಸಿಕೊಳ್ಳುತ್ತದೆ.

ಬಾದಾಮಿಯ ಚಾಳುಕ್ಯರು ಕಟ್ಟಿಸಿದ ದೇವಾಲಯಗಳು ಹೆಚ್ಚೂಕಡಿಮೆ ವೇಸರವೆಂಬ ವಿಭಾಗಕ್ಕೆ ಸೇರಿದುವೆಂದು ಹೇಳಬಹುದು ; ಉಳಿದೆರಡು ವಿಭಾಗಗಳ ನಿದರ್ಶನಗಳನ್ನೂ ಈ ದೇವಾಲಯಗಳಲ್ಲಿ ಕಾಣುವೆವು. ವಾಸ್ತವವಾಗಿ, ಈ ದೇವಾಲಯಗಳು ನಿರ್ಮಾಣವಾದ ಮೇಲೆ ಈ ವಿಭಾಗವನ್ನು ಗ್ರಂಥಗಳು ಮಾಡಿರಬೇಕು. ನಿರ್ಮಿತ ದೇವಾಲಯಗಳಲ್ಲಿ ಗರ್ಭಗುಡಿಯ ಮೇಲೆ ಮೂಡಿಕೊಳ್ಳುವ ವಿಮಾನ-ಶಿಖರಕ್ಕೇ ಹೆಚ್ಚು ಗಮನ ಕೊಟ್ಟಿರುವುದನ್ನು ಪಟ್ಟದಕಲ್ಲು ಗುಡಿಗಳಲ್ಲೇ ಮೊದಲಿಗೆ ಕಾಣುವೆವು. ಈ ವಿವರವು ಭಾರತದೇಶದ ಎಲ್ಲ ದೇವಾಲಯಗಳಲ್ಲೂ ಮುಖ್ಯವಾಗಿ ಉಳಿಯಿತು. ದಕ್ಷಿಣ ದೇಶದ ದ್ರಾವಿಡ ಶೈಲಿಗೆ ನಿದರ್ಶನವಾಗಿ ಮಾಮಲ್ಲಪುರದ ಬಳಿ ಕಡಲತೀರ ದಲ್ಲಿರುವ ಶಿವಾಲಯವನ್ನಾಗಲೀ ಕಾಂಚೀಪುರದ ಕೈಲಾಸನಾಥ ದೇವಾಲಯವನ್ನಾಗಲೀ ನೋಡಬಹುದು. ಎರಡನ್ನೂ ಕಟ್ಟಿಸಿದವನು ಪಲ್ಲವರಾಜ ಇಮ್ಮಡಿ ನರಸಿಂಹವರ್ಮ ; ಇವನಿಗೂ ರಾಜಸಿಂಹನೆಂದು ಹೆಸರಿದ್ದಿತು.

ಇವನ ಆಳ್ವಿಕೆಯ ಅವಧಿ ಕ್ರಿಸ್ತಾಬ್ದ 680-720. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವು ಈ ಎರಡು ಶಿವಾಲಯಗಳಿಂದ ಪ್ರಭಾವಿತವಾಗಿದ್ದಿತು. ಆದರೆ ಶೈಲಿಯಲ್ಲಿ ಮಾರ್ಪಾಟುಗಳನ್ನು ಪಟ್ಟದಕಲ್ಲಿನಲ್ಲಿ ಪ್ರಯೋಗಕ್ಕೆ ತರಲಾಗಿದೆ. ಗಳಗನಾಥ ದೇವಾಲಯ ದಲ್ಲಿ ಕಾಣಬಹುದಾದ ಉತ್ತುಂಗ ಶಿಖರ ಮತ್ತು ಆಮಲಕಗಳು ನಾಗರಶೈಲಿಯ ಅವತರಣಿಕೆಗಳೆನ್ನಬಹುದು. ಹಾಗೆಯೇ ವಿಶ್ವೇಶ್ವರ

ದೇವಾಲಯವು ಕಲ್ಯಾಣಿ ಚಾಳುಕ್ಯಶೈಲಿಯ ವಿಮಾನಕ್ಕೆ ಪೂರ್ವಸಿದ್ಧತೆಯೆನ್ನಬಹುದು.

ನಾಗರಶೈಲಿಯು ಉತ್ತರದೇಶಕ್ಕೆ ಹೋದುದನ್ನು ಮೊದಲು ಭುವನೇಶ್ವರದ ಪರಶುರಾಮೇಶ್ವರ ದೇವಾಲಯದಲ್ಲಿ ಕಾಣುವೆವು. ಈ ದೇವಾಲಯದ ನಿರ್ಮಾಣವಾದದ್ದು ಕ್ರಿಸ್ತಾಬ್ದ 750ರ ಸುಮಾರಿಗೆ. ಇದು ಐಹೊಳೆಯ ದುರ್ಗಿಗುಡಿಯನ್ನು ನೆನಪಿಗೆ ತರುತ್ತದೆ. ಇಲ್ಲಿನ ಶಿಖರ ಹರಡಿಕೊಂಡಿದ್ದು ಗಿಡ್ಡಾಗಿದೆ ; ಇದು ಮುಂದೆ ಓಡಿಸ್ಸಾ ಶೈಲಿಯಾಗಿ ಮಾರ್ಪಟ್ಟು ಉತ್ತುಂಗಶಿಖರವಾಯಿತು. ಜೊತೆಗೆ ಹಲವು ನೆಲೆಗಳ ಮುಖಶಾಲೆಯೂ ಸೇರಿಬಂದಿತು. ಇದನ್ನು ನಾವು ಭುವನೇಶ್ವರದ ಮುಕ್ತೇಶ್ವರ ದೇವಾಲಯದಲ್ಲಿ ಮೊಟ್ಟಮೊದಲಿಗೆ ಕಾಣುವೆವು. ಇದರ ಕಾಲ ಮುಂದಿನ ಎರಡು ಶತಮಾನಗಳ ನಂತರ. ಇದೇ ಮಾರ್ಪಾಟನ್ನು ಅಲ್ಲಿಯೇ ಸುಪ್ರಸಿದ್ಧವಾದ ಲಿಂಗರಾಜ ದೇವಾಲಯದಲ್ಲೂ ಕಾಣಬಹುದು. ಲಿಂಗರಾಜ ದೇವಾಲಯವು ಮೈದಳೆದದ್ದು ಕ್ರಿಸ್ತಾಬ್ಧ 1000ರ ಸುಮಾರಿಗೆ. ಕೊಂಚ ವಿಭಿನ್ನವಾದ ಶೈಲಿ ಮಧ್ಯಭಾರತದಲ್ಲಿ ಮೊದಲಾಯಿತು. ಇದರ ನಿದರ್ಶನವನ್ನು ಮಧ್ಯ ಪ್ರದೇಶದಲ್ಲಿರುವ ಜಗತ್ಪ್ರಸಿದ್ಧ ಖಜುರಹೋ ದೇವಾಲಯಗಳಲ್ಲಿ ಕಾಣಬಹುದು. ಕ್ರಿಸ್ತಾಬ್ಧ 950 ರಿಂದ 1050ರ ಅವಧಿಯಲ್ಲಿ ಮೈದಳೆದ ಈ ದೇವಾಲಯಗಳಲ್ಲಿ ಗಾರೆಗಚ್ಚಿನ ಮೇಲುಚಾವಣಿಯ ಮೇಲೆ ಪಿರಮಿಡ್ಡಿನ ಆಕಾರದ ಶಿಖರ ಅತಿ ಎತ್ತರವೂ ಅಲ್ಲದೆ ತೀರ ಕುಳ್ಳೂ ಅಲ್ಲದೆ ಏಳುತ್ತದೆ. ದೇವಾಲಯದ ಹಲವು ಅಂಗಗಳು ಒಟ್ಟಿಗೆ ನಾಜೂಕಾಗಿ ಸಮರಸವಾಗಿ ಬೆರೆತು ಇಡೀ ಗುಡಿಯ ಏಕತಾನತೆ ಮೈದುಂಬಿ ಬರುತ್ತದೆ. ಇಲ್ಲಿ ವಾಸ್ತುವಿನ ಪ್ರಾಧಾನ್ಯಕ್ಕಿಂತ ಶಿಲ್ಪಕ್ಕಿರುವ ಪ್ರಾಧಾನ್ಯ ಹೆಚ್ಚು.

*

ಮೂರು

ಆಲಯದ ಕಟ್ಟಡ

ನಮ್ಮ ದೇಶದಲ್ಲಿ ದೇವಾಲಯವೆಂದರೆ ಬರಿಯ ಕಟ್ಟಡವಲ್ಲ ; ಅದೊಂದು ಸಂಕೇತ, ದೈವತ್ವದ ಕಲ್ಪನೆ. ಕಲ್ಪನೆಗೆ ಪ್ರಾದೇಶಿಕವಾದ ಒಂದು ಹರವನ್ನೂ ಭೌತಿಕವಾಗಿ ಒಂದು ರೂಪವನ್ನೂ ಒದಗಿಸುವುದು ಸಹಜ, ಇದರ ಅಗತ್ಯವೂ ಇದೆ. ಆದರೆ ಒಮ್ಮೆ ರೂಪತಳೆಯಿತೆಂದರೆ ಕಲ್ಪನೆಯು ಅದನ್ನೇ ಅವಲಂಬಿಸಿ ಅಷ್ಟಕ್ಕೇ ಸೀಮಿತವಾಗಿರಬೇಕೆಂಬ ನಿಯಮವಿಲ್ಲ. ಮೊದಲಿಗೆ ಕಲ್ಲುಗುಂಡು ಗಳ ವೃತ್ತವಾಗಿದ್ದುದು ಬರುಬರುತ್ತ ಗುಡಿಗಳು, ಅಂಕಣಗಳು, ಮಂಡಪಗಳು, ಪ್ರದಕ್ಷಿಣಾ ಪಥಗಳು, ಪುಷ್ಕರಿಣಿಗಳು ಮೊದಲಾಗಿ ಬೆಳೆಯಿತು. ದೇಗುಲಗಳ ಪರಿಸರದೊಳಗೆ ಹಲವು ಕಡೆ ಹಳ್ಳಿಗಳು, ನಗರಗಳು ಮೂಡಿ ಕೊಂಡುವು ; ದೇಗುಲಗಳ ವ್ಯವಸ್ಥೆಯನ್ನು ನಿರ್ವಹಿಸಲು ದೊಡ್ಡ ದೊಡ್ಡ ಸಂಸ್ಥೆಗಳೇ ಮೈದಳೆದುವು. ಆದರೆ ದೇವಾಲಯದ ಮುಖ್ಯ ವಿವರವೆಂದರೆ, ಜನರ ಮನಸ್ಸಿನಲ್ಲಿರುವ ಕಲ್ಪನೆ ; ಕಲ್ಪನೆಯ ಕೇಂದ್ರ ಆಲಯದಲ್ಲಿರುವ ಮೂರ್ತಿ. ಮೂರ್ತಿಯೇ ಕಲ್ಪನೆಗೆ ಆಸರೆ ; ಕಲ್ಪನೆಯು ದೂರದ ವರೆಗೆ ಹರಡಬಹುದು, ಮೂರ್ತಿ ಇದ್ದಲ್ಲಿಯೇ ಇರುತ್ತದೆ.

ದೇವಾಲಯದ ಪರಿಕರವಿಲ್ಲದೆ ಇರುವ ಮೂರ್ತಿಯನ್ನು ಕಲ್ಪಿಸಿಕೊಳ್ಳುವುದು ಸಾಧ್ಯ. ದೇವಾಲಯವು ವಿಶಿಷ್ಟವಾದ ಧಾರ್ಮಿಕ,



ಸಾಮಾಜಿಕ ಸಂಸ್ಥೆಯಾಗಿ ಮೈದಳೆದದ್ದು ಈಚೆಗೆ. ಮೊದಲಿನ ಆಲಯಗಳೆಲ್ಲ ಮೂರ್ತಿಗಳಲ್ಲಿಯೇ ಮುಗಿಯುತ್ತಿದ್ದುವು. ಮೊದಲು ದೇವಾಲಯವನ್ನು ಕಟ್ಟಿ ಅನಂತರ ಅದಕ್ಕೆ ಮೂರ್ತಿಯೊಂದನ್ನು ಸಿದ್ಧಪಡಿಸುವ ಹವ್ಯಾಸ ಈಚಿನದು. ಆಗಮಗಳ ನಿಯಮದಂತೆ ಮೂರ್ತಿಗೊಂದು ಆಲಯವನ್ನು ನಿರ್ಮಿಸಬೇಕೇ ವಿನಾ ಆಲಯಕ್ಕೊಂದು ಮೂರ್ತಿಯನ್ನು ಸಿದ್ಧಪಡಿಸಬಾರದು. ಏಕೆಂದರೆ, ಆಲಯವೆನ್ನುವುದು ದಿಟವಾಗಿ ಮೂರ್ತಿಯ ಬಡಾವಣೆ ಅಷ್ಟೆ ; ಮೂರ್ತಿಯ ಕಲ್ಪನೆ ಹರಡಿಕೊಂಡರೆ ಆಲಯವಾಗುತ್ತದೆ.

ನಮ್ಮ ದೇಶದಲ್ಲಿ ಶಾಸ್ತ್ರೋಕ್ತವಾದ ದೇವಾಲಯಗಳು ಸಿದ್ಧವಾಗ ತೊಡಗಿದುದು ಯಾವಾಗ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಕ್ರಿಸ್ತಾಬ್ಧ ಮೂರನೆಯ ಅಥವಾ ನಾಲ್ಕನೆಯ ಶತಮಾನದಷ್ಟು ಹಿಂದೆ ಹೋಗಬಲ್ಲ ಯಾವ ಗುಡಿಯೂ ಈ ಕಾಲಕ್ಕೆ ಉಳಿದುಬಂದಿಲ್ಲ. ಆದರೆ ಆ ಕಾಲಕ್ಕೆ ಮೊದಲೂ ಗುಡಿಗಳು ಇದ್ದುವೆನ್ನುವುದರಲ್ಲಿ ಸಂಶಯವಿಲ್ಲ. ಗುಡಿಸಿಲಿನಂತೆ ಮಣ್ಣು, ಬಿದಿರು, ಮರ, ತಡಿಕೆಗಳಿಂದ ಸಿದ್ಧವಾದ ಗುಡಿಗಳು ಬಹುಕಾಲ ಉಳಿಯ ಲಾರವಷ್ಟೆ ಅಂಥ ಗುಡಿಗಳನ್ನು ಕಟ್ಟಿದವರಿಗೆ ಸೂರ್ಯಚಂದ್ರರಿರುವ





ವರೆಗೂ ತಮ್ಮ ಕಟ್ಟಡ ಉಳಿಯಬೇಕು ಎಂಬ ಆಶಯವಿರುತ್ತಿರಲಿಲ್ಲ. ಮುಂದಿನ ಕಾಲದಲ್ಲಿ ರಾಜರೂ ಶ್ರೀಮಂತರೂ ದೇವಾಲಯಗಳನ್ನು ಕಟ್ಟತೊಡಗಿದಾಗಲೇ ಈ ಆಶಯ ಮೂಡಿಬಂದದ್ದು. ಮೊದಲಿನ ದೇವಾಲಯಗಳ ಪ್ರೇರಣೆ ಅಹಂಕಾರವಾಗಲೀ, ಪ್ರತಿಷ್ಠೆಯಾಗಲೀ, ಕೀರ್ತಿಕಾಮನೆಯಾಗಲೀ ಅಲ್ಲ. ಪೂಜೆಗೊಂದು ತಾಣ ಎಂದಷ್ಟೇ ಗುಡಿಯ ಪ್ರಯೋಜನ.

ಮೊದಲ ಗುಡಿಗಳು ತಾತ್ಕಾಲಿಕ ಕಟ್ಟಡಗಳಾಗಿದ್ದುವು. ಸಂದರ್ಭಕ್ಕೆ ತಕ್ಕಂತೆ, ಅಗತ್ಯ ತೋರಿದಾಗ, ಗುಡಿಯನ್ನು ಕಟ್ಟುವುದು ;

ಅಗತ್ಯ ತೀರಿದರೆ ಗುಡಿಯನ್ನು ಕೆಡವುತ್ತಿದ್ದರು. 'ಮಂಟಪ' ಎಂಬ ಆಗಮವಿಧಿ ಸೂಚಿಸುವುದು ಇದನ್ನೇ. ವಿಶ್ವಕರ್ಮಪ್ರಕಾಶವೆಂಬ ಪ್ರಾಚೀನ ಆಗಮಗ್ರಂಥದ ಪ್ರಕಾರ, ಪೂಜೆಗೆಂದು ನೆರೆಯುವ ಭಕ್ತರ ಸಲುವಾಗಿ ಮಂಟಪ. ಭಕ್ತರು ಪೂಜೆಗಾಗಿ ನೆರೆಯುವುದು ಕೆಲವು ಸಂದರ್ಭಗಳಲ್ಲಿ ಮಾತ್ರ. ಪ್ರತಿಯೊಂದು ಮನೆಯಲ್ಲಿಯೂ ದೇವರ ಕೋಣೆಯೋ ಮಾಡವೋ ಇರುತ್ತದೆ ; ದಿನದ ಪೂಜೆ ಮನೆಯಲ್ಲೇ ನಡೆಯುತ್ತದೆ. ದೇವಾಲಯಗಳಲ್ಲಿ ಎರಡು ಬಗೆಗಳು — ತನಗಾಗಿ ಮತ್ತು ತನ್ನ ಮನೆಯವರಿಗಾಗಿ ಪೂಜೆ ಮಾಡಲು 'ಆತ್ಮಾರ್ಥ' ಆಲಯಗಳು, ಸಾರ್ವಜನಿಕರಿಗಾಗಿ ಪೂಜೆ ನಡೆಯುವ 'ಪರಾರ್ಥ' ಆಲಯಗಳು. ಆತ್ಮಾರ್ಥ ಆಲಯದಲ್ಲಿ ಪೂಜೆನಡೆಸುವವರೂ ಪಾಲ್ಗೊಳ್ಳುವವರೂ ಬೇರೆ ಬೇರೆಯಲ್ಲ; ಪರಾರ್ಥದಲ್ಲಿಯಾದರೋ ಪೂಜೆನಡೆಸುವವರು ಪೂಜಾರಿಗಳು, ಪಾಲ್ಗೊಳ್ಳುವವರು ಸಾರ್ವಜನಿಕರು. ಪರಾರ್ಥ ಆಲಯದ ಗರ್ಭಗುಡಿ ಪೂಜೆ ನಡೆಸುವವರಿಗಾಗಿ ; ಮಂಟಪ ಪಾಲ್ಗೊಳ್ಳುವ ಸಾರ್ವಜನಿಕರಿಗಾಗಿ, ಅವರು ನಿಂತು ಪೂಜೆಯನ್ನು ನೋಡುವ ಸಲುವಾಗಿ. ಹಲವಾರು ಮಂದಿ ಪಾಲ್ಗೊಳ್ಳುವವರು ನೆರೆದರೆ, ನೆರೆಯುವ ನಿರೀಕ್ಷೆಯಿದ್ದರೆ ಮಂಟಪವೂ ದೊಡ್ಡದಾಗಿರುತ್ತದೆ.

ಮುಂದೆ ಇಂಥ ತಾತ್ಕಾಲಿಕ ಮಂಟಪಗಳು ಸ್ಥಿರವಾದ ಕಟ್ಟಡಗಳಾದುವು, ಮೊದಲ ಪ್ರೇರಣೆ ಬಂದುದು ಪ್ರಾಯಶಃ ಭಾರತೀಯ ಧರ್ಮಗಳನ್ನವಲಂಬಿಸಿದ ಇಂಡೋಗ್ರೀಕರಿಂದ. ಅವರ ಪ್ರಭಾವವನ್ನು ಸ್ಪಷ್ಟಪಡಿಸುವ ಶಾಸನಗಳಿವೆ. ಕ್ರಿಸ್ತಪೂರ್ವ ಎರಡನೆಯ ಶತಮಾನದ ಸುಮಾರಿನಲ್ಲಿ ತಕ್ಷಶಿಲೆಯಲ್ಲಿ ವಾಸಮಾಡುತ್ತಿದ್ದ ಇಂಡೋಗ್ರೀಕ್ ರಾಯಭಾರಿ ಹಿಲಿಯೋದೋರಸ್ (ದಿಯಾನನ ಮಗ) ವಿಷ್ಣುಭಕ್ತ, 'ಭಾಗವತ.' ಅವನು "ದೇವದೇವನಾದ ವಾಸುದೇವ"

ನಿಗೆ ಶಿಲಾಸ್ತಂಭವೊಂದನ್ನು ನೆಡಿಸಿದ ಉಲ್ಲೇಖವಿದೆ. ಮಧ್ಯ ಪ್ರದೇಶದ ಗ್ವಾಲಿಯರ್‌ನ ಭಿಲ್ಸಾ ಬಳಿ ಬೇಸ್‌ನಗರ (ಮೊದಲಿಗೆ ವಿದಿಶಾ)ದಲ್ಲಿ ದೊರೆತ ಗರುಡಧ್ವಜವೊಂದರ ಮೇಲೆ ಬ್ರಾಹ್ಮೀಲಿಪಿ ಯಲ್ಲಿ ಬರಹವೊಂದಿದೆ. ಇದು ಅಲ್ಲಿ ಗುಡಿಯೊಂದಿದ್ದುದನ್ನು ಸೂಚಿಸುತ್ತದೆ. ಅದೇ ಕಾಲಕ್ಕೆ ಸಲ್ಲುವ ಇನ್ನೊಂದು ಶಾಸನ ''ಭಗವಾನ ನಿಗಾಗಿ ಪ್ರಾಸಾದವೊಂದನ್ನು'' ಕಟ್ಟಿಸಿದುದನ್ನು ಉಲ್ಲೇಖಿಸುತ್ತದೆ. ಷೋಡಾಶನ ಮಗ ರಾಜೂವಲನೆಂಬ ಶಕಕ್ಷತ್ರಪನು ಈಗ ಉತ್ತರಪ್ರದೇಶದ ಮಥುರಾ ಬಳಿ ಎಳಿರಾ ಎಂಬಲ್ಲಿ ದೊರೆತ ಶಾಸನವೊಂದರಲ್ಲಿ ತಾನು ವೃಷ್ಣಿವಂಶದ ಐವರು ವೀರರ ವಿಗ್ರಹಗಳನ್ನೊಳಗೊಂಡ ಗುಡಿಯೊಂದನ್ನು ಕಟ್ಟಿಸಿದುದನ್ನು ಹೇಳುತ್ತಾನೆ. ಈ ಐವರು ವೀರರು ಭಾಗವತ ಸಂಪ್ರದಾಯದಲ್ಲಿ ವಿಷ್ಣುವಿನ ವ್ಯೂಹಕ್ಕೆ ಸೇರಿದ ದೇವತೆಗಳು — ವಾಸುದೇವ, ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನ ಮತ್ತು ಸಾಂಬ. ಇವರಲ್ಲಿ ಮೊದಲ ಇಬ್ಬರು, ಕೃಷ್ಣ ಮತ್ತು ಬಲರಾಮ. ಕ್ರಿಸ್ತಯುಗಕ್ಕೆ ಮೊದಲು ತುಂಬ ಜನಪ್ರಿಯರಾಗಿದ್ದ ದೇವತೆಗಳು. ರಾಜ ಸ್ಥಾನದ ಚಿತ್ತೂರಿನ ಬಳಿ ಘೋಸುಂದಿ (ನಗರಿ) ಎಂಬಲ್ಲಿ ಕ್ರಿಸ್ತಾಬ್ದ ಎರಡನೆಯ ಶತಮಾನದ ಇನ್ನೊಂದು ಶಾಸನ ದೊರೆತಿದೆ. ಅದರಲ್ಲಿ ''ಪೂಜಾ-ಶಿಲಾ-ಪ್ರಾಕಾರ-ನಾರಾಯಣ-ವಾಟಿಕೆ''ಯ ಉಲ್ಲೇಖ ಬರುತ್ತದೆ. ಇದು ''ಅನಿಹತಾಭ್ಯಾಂ ವಾಸುದೇವ ಸಂಕರ್ಷಣಾಭ್ಯಾಂ'' ಇವರಿಗೆ ಏರ್ಪಟ್ಟುದೆಂಬ ವಿವರಣೆಯಿದೆ.

ಈ ಗುಡಿಗಳು ಹೇಗಿದ್ದುವೋ ಊಹಿಸಿಕೊಳ್ಳುವುದು ಕಷ್ಟ ಈಗಿನಂತೆ ಗುಡಿಗಳಿದ್ದಿರಲಾರವು ಅವು. ವಿಗ್ರಹವೊಂದರ ಸುತ್ತ ಪ್ರಾಕಾರಗಳಂತೆ ಇದ್ದುವೆಂದು ತೋರುತ್ತದೆ. ಆಳ್ವಾರರ ಕಾಲದಲ್ಲಿ, ಎಂದರೆ ಕ್ರಿಸ್ತಶಕ ಮೂರು, ನಾಲ್ಕನೆಯ ಶತಮಾನಗಳಲ್ಲಿ

ತಿರುಮಲೆಯ ಮೇಲಿನ ವೆಂಕಟೇಶ್ವರನ ಗುಡಿ ಹೀಗೆಯೇ ಇದ್ದಿತೆಂದು ತಿಳಿದುಬರುತ್ತದೆ. ಗಾಳಿ, ಬೆಳಕು, ಬಿಸಿಲು, ಮಳೆ ಈ ದೇವರ ಮೇಲೆ ಬೀಳುತ್ತಿದ್ದಿತೆಂದು ಆಳ್ವಾರರ ಪ್ರಬಂಧಗಳು ವರ್ಣಿಸುತ್ತವೆ. ಉತ್ತರ ಆರ್ಕಾಡು ಜಿಲ್ಲೆಯಲ್ಲಿ ರೇಣಿಗುಂಟದ ಬಳಿಯಿರುವ ಗುಡಿಮಲ್ಲಂ ಪರಶುರಾಮೇಶ್ವರನ ಗುಡಿ ಪ್ರಸಿದ್ಧವಾದುದು. ಇಲ್ಲಿರುವ ಪರಶುರಾಮೇಶ್ವರನ ಮೂರ್ತಿಲಿಂಗ ಸ್ವಾರಸ್ಯವಾದುದು ; ಇದು ಕ್ರಿಸ್ತಪೂರ್ವ ಮೊದಲ ಶತಮಾನಕ್ಕೆ ಸೇರಿದುದೆಂದು ಡಾ|| ಆನಂದ ಕುಮಾರ ಸ್ವಾಮಿಯವರ ಎಣಿಕೆ. ಈಗ ಇರುವ ಗುಡಿ ಈಚಿನದು. ಮೊದಲಿಗೆ ಈ ಮೂರ್ತಿ ಗುಡಿಯಿಲ್ಲದೆ ಬಿಡಿಬೀಸಾಗಿ ನಿಂತಿದ್ದಂತೆ ತೋರುತ್ತದೆ. ಮಧ್ಯ ಪ್ರದೇಶದ ಬಿಲಾಸಪುರ ಜಿಲ್ಲೆಯ ಬುರ್ಹಿಖರ್ ಎಂಬ ಹಳ್ಳಿಯಲ್ಲಿ ಅದೇ ಕಾಲದ, ಎಂದರೆ ಕ್ರಿಸ್ತಪೂರ್ವ ಮೊದಲ ಶತಮಾನದ, ಶಿಲ್ಪವೊಂದು ದೊರೆತಿದೆ. ಇದನ್ನು 'ಚತುರ್ಭುಜೀ ಭಗವಾನ್' ಎಂದೂ ಪ್ರಜಾಪತಿ ಎಂಬಾಕೆ ಇದನ್ನು ಮಾಡಿಸಿಕೊಟ್ಟಳೆಂದೂ ಹೇಳುವ ಬರಹ ಅಲ್ಲಿಯೇ ಇದೆ.

ಮಧ್ಯಯುಗದ ಕೃತಿಗಳಾದ ಪುರಾಣಗಳು ದೇವಾಲಯಗಳ ಪ್ರಶಸ್ತಿಯನ್ನು ಹಾಡಿ ಹೊಗಳುತ್ತವೆ ; ದೇವಾಲಯಗಳನ್ನು ಕಟ್ಟಿಸಿದವರಿಗೆ ಬರುವ ಪುಣ್ಯ, ಯಶಸ್ಸು, ಸಂಪತ್ತು ಇವುಗಳನ್ನೂ ಹೇಳುತ್ತವೆ. ನಿದರ್ಶನಕ್ಕೆ, ಅಗ್ನಿಪುರಾಣದ ಪ್ರಕಾರ, ಯಾರಾದರೂ ದೇವಾಲಯವನ್ನು ಕಟ್ಟಿಸುವ ಬಯಕೆಯನ್ನು ಹೊಂದಿದರೆ ಸಾಕು, ಅವರ ಪೂರ್ವಜನ್ಮಾರ್ಜಿತ ಪಾಪಗಳೆಲ್ಲ ತೊಳೆದುಹೋಗುತ್ತವೆ ! ದೇವಾಲಯವನ್ನು ಕಟ್ಟಲೆಂದು ಯಾರಾದರೂ ಒಂದೇ ಒಂದು ಇಟ್ಟಿಗೆಯನ್ನಿಟ್ಟು ಅನಂತರ ಅವನು ಸಾಯಬೇಕಾಗಿ ಬಂದರೆ, ಆ

ಇಟ್ಟಿಗೆಯನ್ನಿಟ್ಟ ಪುಣ್ಯ ಒಂದು ಯಜ್ಞವನ್ನು ಮಾಡಿದಷ್ಟು ಪುಣ್ಯಕ್ಕೆ ಸಮನೆಂದು ಹಯಶೀರ್ಷ ಸಂಹಿತೆ ಸೂಚಿಸುತ್ತದೆ. ಯಾವುದಾದರೊಂದು ಮಗು ಆಟಕ್ಕಾಗಿ ಮರಳಿನಲ್ಲಿ ಗುಡಿಯನ್ನು ಕಟ್ಟಿದರೂ ಅದರಿಂದ ಸ್ವರ್ಗ ದೊರಕುವುದೆಂದು ವಿಷ್ಣುರಹಸ್ಯದ ಆಶ್ವಾಸನೆ. ಇವನ್ನೆಲ್ಲ ನೋಡಿದರೆ, ಆ ಕಾಲಕ್ಕಾಗಲೇ ಗುಡಿಗಳನ್ನು ಕಟ್ಟುವುದು ಪುಣ್ಯಪ್ರದವಾದ, ಶ್ರೇಯಸ್ಕರವಾದ ಕೆಲಸವೆಂಬ ಭಾವನೆ ಇದ್ದಿತೆಂದೂ, ಗುಡಿಗಳನ್ನು ಕಟ್ಟುವ ವಾಡಿಕೆಯಿದ್ದಿತೆಂದೂ ಸ್ಪಷ್ಟವಾಗುತ್ತದೆ. ಶ್ರೀಮಂತರೂ, ಅರಸರೂ ಗುಡಿಗಳನ್ನು ಕಟ್ಟುವುದರಲ್ಲಿ ವಿಶೇಷವಾದ ಆಸಕ್ತಿಯನ್ನು ವಹಿಸುತ್ತಿದ್ದಿರಬೇಕು. ಈ ಕೆಲಸಕ್ಕೆ ಪ್ರೋತ್ಸಾಹ ನೀಡುವಂತೆ ಒಂದು ಗುಡಿಯನ್ನು ಕಟ್ಟಿದರೆ ರಾಜಸೂಯ, ಅಶ್ವಮೇಧ ಎರಡೂ ಯಜ್ಞಗಳನ್ನು ಮಾಡಿದಂತಾಗುವುದೆಂಬ ಮಾತು ವಿಷ್ಣುಧರ್ಮೋತ್ತರದಲ್ಲಿ ಬರುತ್ತದೆ. ಯಜ್ಞಯಾಗಾದಿಗಳನ್ನು ಮಾಡುವ ಪದ್ಧತಿ ಆ ಕಾಲಕ್ಕೆ ನಷ್ಟವಾಗುತ್ತ ಇದ್ದು ದೇವಾಲಯ ನಿರ್ಮಾಣ ಅದರ ಬದಲು ಬಂದಿತೆಂದು ತೋರುತ್ತದೆ.

ದೇಶದ ಕೆಲವು ಕ್ಷೇತ್ರಗಳು ದೇವತೆಗಳಿಗೆ ವಿಶೇಷವಾಗಿ ಪ್ರಿಯವಾದುವೆಂದು ಪ್ರಾಚೀನ ಪುರಾಣಗಳು ಇವುಗಳನ್ನು ಪ್ರಸ್ತಾಪ ಮಾಡತೊಡಗಿದುವು. ಈ ಸ್ಥಳಗಳು ಜಾಗ್ರತವಾದವೆಂದೂ, ದೇವರ ಸಾನ್ನಿಧ್ಯ ಅಲ್ಲಿ ತಾನೇ ತಾನಾಗಿ ಮೂಡಿಕೊಂಡಿರುವುದೆಂದೂ ಈ ಪುರಾಣಗಳು ಹೇಳತೊಡಗಿದುವು. ಈ ಕ್ಷೇತ್ರಗಳ ಪ್ರಖ್ಯಾತಿ ಇಂದಿಗೂ ಉಳಿದಿದೆ. ನಿದರ್ಶನಗಳೆಂದರೆ ಬದರಿ, ಕೇದಾರ, ಜಗನ್ನಾಥಪುರಿ (ಇಂದ್ರದ್ಯುಮ್ನ), ಸಿಂಹಾಚಲ, ವೆಂಕಟಾದ್ರಿ (ತಿರುಮಲೆ), ಸೇತು (ರಾಮೇಶ್ವರ), ಕಾಂಚೀಪುರ, ಸೋಮನಾಥ, ಪ್ರಯಾಗ ಇತ್ಯಾದಿ. ಇಲ್ಲಿರುವ ಮೂರ್ತಿಗಳೆಲ್ಲ ಸ್ವಯಂಭುಮೂರ್ತಿಗಳೆಂದು ಪ್ರತೀತಿ ;

ಮನುಷ್ಯನು ಮಾಡಿದ್ದಲ್ಲವೆಂದು ನಂಬಿಕೆ. ಮನುಷ್ಯನು ಮಾಡಬೇಕಾಗಿದ್ದುದು ಈ ಮೂರ್ತಿಗಳಿಗೆ ಗುಡಿಗಳನ್ನು ಕಟ್ಟುವುದಷ್ಟೆ. ಸ್ಥಳಗಳೇ ಪವಿತ್ರವೆಂಬ ನಂಬಿಕೆಯಿದ್ದುದರಿಂದ, ಇಲ್ಲಿಗೆ ಯಾತ್ರೆ ಬರುವುದು ಪುಣ್ಯಸಂಚಯನಕ್ಕೆ ದಾರಿಯೆಂದೂ ವಿಶ್ವಾಸ ಬೆಳೆಯಿತು. ತೀರ್ಥಯಾತ್ರೆ ಕ್ಷೇತ್ರಾಟನ ಈಗಿನ ಹಿಂದೂಧರ್ಮದಲ್ಲಿ ಹಾಸುಹೊಕ್ಕಾಗಿ ಸೇರಿರುವ ವಿವರ ; ಪುರಾಣಗಳ ಕಾಲದಲ್ಲಿ ಇದು ರೂಢಿಗೆ ಬಂದಿತು. ಪವಿತ್ರ ಕ್ಷೇತ್ರದ ಸ್ವಾರಸ್ಯವೆಲ್ಲ ದೇವಾಲಯದಲ್ಲಿ ಕೇಂದ್ರೀಕೃತವಾಗಿರುತ್ತದೆ ; ದೇವಾಲಯದೊಳಗೆ ಪೂಜೆಗೊಳ್ಳುವ ಮೂರ್ತಿಯೇ ಮುಖ್ಯವಾದ ಆಕರ್ಷಣೆ. ದೇವಾಲಯವನ್ನು ಹಿಗ್ಗಿಸುವಂತೆ ಮಂಟಪಗಳನ್ನು ಕಟ್ಟುವುದು, ಗೋಪುರ-ವಿಮಾನ-ಪ್ರಾಕಾರ ಮೊದಲಾದುವನ್ನು ನಿರ್ಮಿಸುವುದು, ಯಾತ್ರಿಕರ ಸೌಕರ್ಯಕ್ಕಾಗಿ ಅನ್ನಸತ್ರಗಳನ್ನೂ ವಸತಿಗೃಹಗಳನ್ನೂ ವ್ಯವಸ್ಥೆ ಮಾಡುವುದು, ಬರುವ ಜನರ ಉಪಯೋಗಕ್ಕಾಗಿ ಕೆರೆ-ಕೊಳಗಳನ್ನು ತೋಡಿಸುವುದು ಇವೆಲ್ಲ ಪುಣ್ಯದ ಕೆಲಸಗಳೆಂದು ಪುರಾಣಗಳು ಸೂಚಿಸಿದುವು. ಗುಡಿಯ ಸುತ್ತ ಊರೇ ಬೆಳೆದ ನಿದರ್ಶನಗಳಿವೆ. ಇವಕ್ಕೆ ಆಗಮಗಳಲ್ಲಿ ಸ್ವತಂತ್ರ ದೇವಾಲಯಗಳೆಂದು ಹೆಸರು. ಹಳ್ಳಿ ಅಥವಾ ಊರು ಬೆಳೆದು ಅದಕ್ಕೊಂದು ಗುಡಿಯ ಅಗತ್ಯ ಕಂಡುಬಂದು ಹಾಗೆ ಗುಡಿ ಮೂಡಿಕೊಂಡರೆ ಅದು ಪರತಂತ್ರ ದೇವಾಲಯವೆಂದು ಗಣನೆ.

ದೇಶದಲ್ಲಿ ನೂರಾರು ಕಡೆ ವಿಶಾಲವಾದ, ವಿಸ್ತೃತವಾದ ದೇವಾಲಯಗಳು ಬೆಳೆದದ್ದು ಹೀಗೆ. ಪೌರಾಣಿಕ ಪ್ರಶಸ್ತಿಯ ಹಿನ್ನೆಲೆಯನ್ನು ಪಡೆಯದ ಕೆಲವು ನಗರಗಳು ರಾಜಕಾರಣದಿಂದ ಅಥವಾ ವಾಣಿಜ್ಯದಿಂದ ಮುಖ್ಯವೆನಿಸಿದ ಮೇಲೆ, ಅರಸನೋ ನಗರದ ಮುಖ್ಯಸ್ಥರೋ ನಗರದಲ್ಲೊಂದು ಗುಡಿಯನ್ನು ಕಟ್ಟಿಸುವ ವ್ಯವಸ್ಥೆ

ಮಾಡುತ್ತಿದ್ದರು. ಕೆಲವೊಮ್ಮೆ ಜನರು ಸಾಮಾನ್ಯವಾಗಿ ಹೋಗದ, ಹಾಗೆ ಹೋಗಲು ದುಸ್ತರವಾದ, ಪಾಳುಬಿದ್ದ ಕ್ಷೇತ್ರಗಳಿಂದ ಮೂರ್ತಿಗಳನ್ನು ತಂದು ನಗರಗಳಲ್ಲಿ ಪ್ರತಿಷ್ಠೆ ಮಾಡುತ್ತಿದ್ದುದೂ ಉಂಟು. ಅರಸರು ನೆರೆ ರಾಜ್ಯದ ಮೇಲೆ ದಾಳಿಮಾಡಿ ಗೆದ್ದಾಗ, ಅಲ್ಲಿನ ಮೂರ್ತಿಗಳನ್ನು ತಮ್ಮ ರಾಜಧಾನಿಗೆ ತಂದು ಅಲ್ಲಿ ಅವನ್ನು ವೈಭವದಿಂದ ಪುನಃ ಪ್ರತಿಷ್ಠೆ ಮಾಡುತ್ತಿದ್ದುದೂ ಇದೆ. ಪ್ರಸಿದ್ಧ ಕ್ಷೇತ್ರಗಳ ಮೂರ್ತಿಗಳ ಪ್ರತಿಕೃತಿಗಳನ್ನು ಮಾಡಿಸಿ ಹಲವು ಕಡೆ ಪೂಜಿಸುವುದೂ ವಾಡಿಕೆಗೆ ಬಂದಿತು. ಹೀಗಾಗಿ ದೇಶದಲ್ಲಿ ಈಗ ನೂರಾರು ಕಾಶಿವಿಶ್ವೇಶ್ವರನ, ಕೇದಾರೇಶ್ವರನ, ವೆಂಕಟೇಶ್ವರನ ಗುಡಿಗಳನ್ನು ಕಾಣಬಹುದು.

ಹೀಗೆ ಮಧ್ಯಯುಗದಲ್ಲಿ ಸ್ಥಪತಿಗಳು ಮಾತ್ರವಲ್ಲದೆ ಶಿಲ್ಪಿಗಳೂ ಕೆಲಸಕ್ಕೆ ಬಂದರು. ಮತ್ತು ಹೊಸ ಅಗತ್ಯಗಳನ್ನು ಪೂರೈಸಲು ದೇವಾಲಯಗಳ ಮತ್ತು ಶಿಲ್ಪಗಳ ಮಾನ, ರೀತಿ, ಶೈಲಿ, ಪ್ರಕಾರಗಳನ್ನು ನಿಶ್ಚಯಿಸಲು ಆಗಮಗ್ರಂಥಗಳು ಬೆಳಕಿಗೆ ಬಂದುವು. ಕುಶಲಕರ್ಮಿಗಳು ಸಂಸ್ಥೆಗಳನ್ನು ವ್ಯವಸ್ಥೆ ಮಾಡಿಕೊಂಡರು ; ಅರಸರೂ ಶ್ರೀಮಂತರೂ ಜನ ನಾಯಕರೂ ದೇವಾಲಯ ನಿರ್ಮಾಣಕ್ಕೆ ಸಂಬಂಧಪಟ್ಟ ಕುಶಲ ಕಲಾವಿದರನ್ನು ಪ್ರೋತ್ಸಾಹಿಸತೊಡಗಿದರು. ಇಂಥ ಕುಶಲಕರ್ಮಿಗಳ ವ್ಯವಸ್ಥೆಯಲ್ಲಿ ನಾಲ್ಕು ಬಗೆಯ ಕೆಲಸಗಾರರು ಪ್ರಧಾನರಾದವರು ; ಆಲಯದ ನಕ್ಷೆಯನ್ನು ಸಿದ್ಧಪಡಿಸಿ ಅದರ ನಿರ್ಮಾಣಕ್ಕೆ ಸಿದ್ಧಮಾಡುವ ಸ್ಥಪತಿ, ಕೆಲಸದ ವಿವರಗಳನ್ನು ನೋಡಿಕೊಳ್ಳುವ ಸೂತ್ರಗ್ರಾಹಿ, ಶಿಲ್ಪದ ಕೆಲಸವನ್ನು ನಿರ್ವಹಿಸುವ ತಕ್ಷ, ಮತ್ತು ದೇವಾಲಯದ ಅಂಗಗಳನ್ನು ನಿರ್ಮಿಸುವ ವರ್ಧಕಿ. ಸ್ಥಪತಿಯೇ ಮೇಲ್ವಿಚಾರಕ ಮತ್ತು ಮಾರ್ಗದರ್ಶಿ ; ಇತರರ ಕೆಲಸಗಳನ್ನೆಲ್ಲ ಪರಸ್ಪರ ಪೂರಕವಾಗುವಂತೆ

ನೋಡಿಕೊಳ್ಳುವವನು. ಅವನಿಗೆ ಆಗಮ ಗ್ರಂಥಗಳ ಪರಿಚಯವಿರಬೇಕಾಗಿದ್ದಿತು. ಆಲಯಗಳ ಶೈಲಿ, ವಿವರ, ಪ್ರಕಾರಗಳ ಸಂಪೂರ್ಣ ಜ್ಞಾನವಿಲ್ಲದೆ ಅವನು ತನ್ನ ಕೆಲಸವನ್ನು ನಿರ್ವಹಿಸಲಾರ. ತಾರತಮ್ಯದಲ್ಲಿ ಅವನಿಗಿಂತ ಕೆಳಗಿನ ಅಧಿಕಾರಿ ಸೂತ್ರಗ್ರಾಹಿ ; ಆಲಯದ ಅಂಗಗಳ ಪ್ರಮಾಣ, ಮಾನ ಉನ್ಮಾನಗಳನ್ನು ಸರಿಯಾಗಿ ವ್ಯವಸ್ಥೆ ಮಾಡುವವನು. ಶಿಲ್ಪದಲ್ಲಿ ಅವನಿಗೆ ಯಾವ, ಯಾರ ನಿರ್ಬಂಧವೂ ಇರದು ; ತನ್ನ ಮನೋವೃತ್ತಿಗೆ ಅನುಗುಣವಾಗಿ ಶಿಲ್ಪಕಾರ್ಯವನ್ನು ಮಾಡುವ ಸ್ವಾತಂತ್ರ್ಯ ಅವನಿಗುಂಟು. ಆದರೆ ಸ್ಥಪತಿಯು ಒದಗಿಸಿದ ಚೌಕಟ್ಟನ್ನು ಮೀರದಂತೆ ಈ ಸ್ವಾತಂತ್ರ್ಯ ಹರಿಯಬೇಕು. ಆಗಮ ಗ್ರಂಥಗಳಲ್ಲಿರುವ ಶಿಲ್ಪಪ್ರಮಾಣಗಳ ಪರಿಚಯ ಅವನಿಗೆ ಚೆನ್ನಾಗಿರಬೇಕು, ಶಿಲ್ಪಗಳ ವರ್ಣನೆಯ ಭಾಗವೂ ತಿಳಿದಿರಬೇಕು. ದೇವತಾಮೂರ್ತಿಗಳನ್ನು ಮಾಡುವಾಗ ಧ್ಯಾನಶ್ಲೋಕಗಳನ್ನು ದೃಢವಾಗಿ ಅವಲಂಬಿಸಬೇಕು. ಶಿಲ್ಪಿಯು ಕಡೆದ ಕಲ್ಲುಹಲಗೆಗಳನ್ನು ಜೋಡಿಸುವ ಕೆಲಸ ವರ್ಧಕಿ ಯದು. ದೇವಾಲಯವು ಮೇಲೆದ್ದು ನಿಲ್ಲುವಂತೆ, ಬೆಳೆಯುವಂತೆ ಮಾಡುವವನು ವರ್ಧಕಿ. ಅವನು ವೃತ್ತಿಯಲ್ಲಿ ಬಡಗಿಯೇ. ಮೊದಲಿನ ಗುಡಿಗಳೆಲ್ಲ ಮರದಿಂದಲೇ ಮಾಡಿದುವು ಎಂಬುದನ್ನು ನೆನಪಿನಲ್ಲಿರಿಸಿಕೊಳ್ಳಬೇಕು ; ಮೊದಲಿನ ದೇವಾಲಯನಿರ್ಮಾಣ ಬಡಗಿಯ ಕೈವಾಡವೇ. ಈ ನಾಲ್ಕೂ ಬಗೆಯ ಕುಶಲಕರ್ಮಿಗಳ ಕೆಲಸವನ್ನು ಸಾಮಾನ್ಯವಾಗಿ ನೋಡಿಕೊಳ್ಳಲು, ದೇವಾಲಯವು ಏರುಪೇರಿಲ್ಲದೆ ಸರಿಯಾಗಿ ಯೋಜನೆಯಂತೆ ಮೈದುಂಬಿ ಬರುವಂತೆ ಮಾಡಲು ಸ್ಥಾಪಕ ಅಥವಾ ಸ್ಥಾನಿಕ ಎಂಬ ಅಧಿಕಾರಿಯೂ ಇರುತ್ತಿದ್ದುದುಂಟು. ಇವನಿಗೆ ದೇವಾಲಯದ ಎಲ್ಲ ವಿವರಗಳನ್ನು ಕುರಿತೂ ಆಳವಾದ ಪಾಂಡಿತ್ಯ ಇರುತ್ತಿದ್ದುದಲ್ಲದೆ, ಇವನಿಗೆ

ಅರ್ಚನಾವಿಧಿಯೂ ತಿಳಿದಿರಬೇಕಾಗುತ್ತಿದ್ದಿತು. ಅರ್ಚಕರ ಮೇಲೂ ಇವನ ಅಧ್ಯಕ್ಷತೆ ಇರುತ್ತಿದ್ದಿತು.

ಮನೆಯಲ್ಲಿ ನಡೆಯುವ ಪೂಜೆಗಿಂತ ಗುಡಿಯ ಪೂಜೆಯಲ್ಲಿ ಕಲಾಪಗಳು ಹೆಚ್ಚು ; ಬರುಬರುತ್ತ ವಿವರಗಳು ಸೇರಿಕೊಂಡು ಬಂದುವು. ಹೀಗಾಗಿ ಅರ್ಚಕರ ನೆರವು ಅನಿವಾರ್ಯವಾಯಿತು. ಅರ್ಚಕರಿಗೆ ಪರಿಚಾರಕರೂ ಸಿದ್ಧವಾದರು. ಗುಡಿಯಲ್ಲಿ ನಿತ್ಯದ ಪೂಜೆಯಲ್ಲದೆ, ಕಾಲಕಾಲಕ್ಕೆ ಉತ್ಸವಗಳು, ಹಬ್ಬಗಳು ನಡೆಯತೊಡಗಿದುವು. ಈ ಸಂದರ್ಭಗಳಲ್ಲಿ ನೆರೆಯುವ ಜನರಿಗೆ ದೇವರ ನೈವೇದ್ಯವನ್ನು (ಉತ್ತರ ದೇಶದ 'ಭೋಗ'ವನ್ನು) ಸಲ್ಲಿಸುವ ವ್ಯವಸ್ಥೆ ಅಗತ್ಯವಾಯಿತು. ಬೇರೆ ಊರುಗಳಿಂದ ಬರುವ ಭಕ್ತರಿಗೆ ದೇವಾಲಯವೇ ಆಹಾರವನ್ನೂ ಒದಗಿಸಬೇಕಾಗಿದ್ದಿತು. ಹೆಚ್ಚು ಜನ ನೆರೆಯಲು ಹಲವಾರು ಉತ್ಸವಗಳು ನಡೆಯಲು ಅನುಕೂಲ ವಾಗುವಂತೆ ದೇವಾಲಯದ ವಿವರಗಳು ಹೆಚ್ಚಿದುವು.

ಈ ಬೆಳವಣಿಗೆಯಿಂದ ಆಲಯದ ಸಿಬ್ಬಂದಿ ಹೆಚ್ಚಿತಲ್ಲದೆ, ಆಲಯದ ಕಟ್ಟಡಗಳೂ ಹೆಚ್ಚಿದವು, ನಿರ್ವಹಣೆಯೂ ಜಟಿಲವಾಗ ತೊಡಗಿತು. ಹಲವು ಮಂಟಪಗಳೂ, ಕೋಣೆಗಳೂ ಕಾಣಿಸಿಕೊಂಡುವು. ನೇರವಾಗಿ ಆರಾಧನೆಗೆ ಸೇರಿದವಲ್ಲವಾದರೂ ಈ ಮಂಟಪಗಳ ಹಿರಿಮೆ ಬೆಳೆಯುತ್ತ ಹೋಯಿತು. ಜನರು ಸೇರಿ ನೆರೆಯುವ ರಂಗಮಂಟಪ, ದೇವಾಲಯದ ಹಣ, ಆಭರಣ ಮೊದಲಾದುವನ್ನು ಕಾಪಿಟ್ಟುಕೊಳ್ಳಲು ಶ್ರೀಭಂಡಾರ, ದಿನದಲ್ಲಿ ಮತ್ತು ವಿಶೇಷಸಂದರ್ಭಗಳಲ್ಲಿ ಯಾಗ-ಹೋಮ-ಹವನಗಳನ್ನು ನಡೆಯಲು ಯಾಗಶಾಲೆ, ದೇವರ ನೈವೇದ್ಯಕ್ಕೆ ಭಕ್ತರ ಉಪಚಾರಕ್ಕೆ ಪಾಕಶಾಲೆ, ಶೈವಸಂಪ್ರದಾಯದ ದೇವಾಲಯವಾದರೆ ಶಿವಕೂಟ,

ಶ್ರೀವೈಷ್ಣವ ಸಂಪ್ರದಾಯವಾದರೆ ರಾಮಾನುಜಕೂಟ, ಉತ್ತರ ದೇಶದ ಆಲಯಗಳಲ್ಲಿ ಭೋಗ ಮಂಟಪ, ಉತ್ಸವಗಳಲ್ಲಿ ಹೊರಬರುವ ವಾಹನಗಳನ್ನು ಉಳಿದಂತೆ ಇರಿಸಲು ವಾಹನಮಂಟಪ, ನೀರಿನ ನೆರವು ಇರುವಂತೆ ಕಲ್ಯಾಣಿ ಅಥವಾ ಪುಷ್ಕರಿಣಿ, ಉತ್ಸವಗಳಿಗೆ ತೆಪ್ಪಕೊಳ, ಇತ್ಯಾದಿ. ಆಲಯದ ಪ್ರಧಾನದೇವತೆ ಗರ್ಭಗುಡಿಯಲ್ಲಿದ್ದರೆ ಪರಿವಾರ ದೇವತೆಗಳಿಗೆ ಇತರ ಸನ್ನಿಧಿಗಳು ಬೇರೆ ಬೇರೆಯಾಗಿ ಸಿದ್ಧವಾದುವು. ಶಿವ-ವಿಷ್ಣು ದೇವಾಲಯಗಳಲ್ಲಿ ಅಮ್ಮನವರ ಸನ್ನಿಧಿ, ಗಣೇಶನ ಸನ್ನಿಧಿ, ಹೀಗೆ ಹಲವಾರು ಕೋಣೆಗಳು ಕಾಣಿಸಿಕೊಂಡುವು. ಅದರಲ್ಲಿಯೂ ಆಲಯಗಳಿಗೆ ಅರಸರ ನೆರವು ದೊರಕಿತೆಂದರೆ ಅವುಗಳ ಹರವು ಹೆಚ್ಚುವುದು ಸುಲಭ. ಹರವು ಹೆಚ್ಚಿದಂತೆ ನಿರ್ವಹಣೆಯ ವ್ಯವಸ್ಥೆಯೂ ಜಟಿಲವಾಗುವುದು ಸಹಜ. ಕಾಲಕಾಲಕ್ಕೆ ಹೊಸ ಭಾಗಗಳೂ ಹೊಸ ಅಧಿಕಾರಗಳೂ ಆಲಯದಲ್ಲಿ ತೋರಿಕೊಂಡುವು.

ಆದರೆ ದೇವಾಲಯದ ಮೂಲಭೂತವಾದ ಸ್ವಾರಸ್ಯ ಈ ವಿಸ್ತರಣೆಯಿಂದ ಹೆಚ್ಚಾಗುವುದೆಂದು ಜನ ಭಾವಿಸುವುದಿಲ್ಲ.





ದಿಟವಾಗಿ ಆಲಯವೆಂದರೆ ಗರ್ಭಗುಡಿ ಮತ್ತು ಅದರಲ್ಲಿರುವ ಬಿಂಬಕ್ಕೆ ಪೂಜೆ ಸಲ್ಲಿಸಲು ನೆರವಾಗುವ ಇತರ ಭಾಗಗಳು ಅಷ್ಟೆ. ಆಗಮಗ್ರಂಥಗಳಲ್ಲಿ ಗರ್ಭಗುಡಿಯನ್ನೇ ಆಲಯವೆಂದು ನಿರ್ದೇಶಿಸಿರುವುದು. ಶ್ರೀಪ್ರಶ್ನದಲ್ಲಿ ಗರ್ಭಗುಡಿಯೇ ದೇಹ, ಬಿಂಬವೇ ಅದರ ಜೀವ ಎಂದು ಸ್ಪಷ್ಟಪಡಿಸಿದೆ. ಸಾಮಾನ್ಯವಾಗಿ ಗರ್ಭಗುಡಿ ಕಲ್ಲುಕಟ್ಟಡ, ವಿನ್ಯಾಸದಲ್ಲಿ ಚಚ್ಚೌಕವಾಗಿರುತ್ತದೆ, ಸರಳವಾಗಿರುತ್ತದೆ. ಹೊರಗೋಡೆಗಳಲ್ಲಿ ಕೆಲವೊಮ್ಮೆ ಇತರ ಪರಿವಾರ ದೇವತೆಗಳಿಗೆ ಗೂಡುಗಳಿರಬಹುದು. ಗರ್ಭಗುಡಿಯಲ್ಲಿ ಕಂಬಗಳಾಗಲೀ ಕಿಟಕಿಗಳಾಗಲೀ ಇರುವುದಿಲ್ಲ, ಗಾಳಿ-ಬೆಳಕನ್ನು ಅಲ್ಲಿಂದ ಹೊರಗಿರಿಸಲು ಮುಖ್ಯ ಕಾರಣ, ಬಿಂಬವನ್ನು ಮೊದಲಿಗೆ ಮರದಲ್ಲಿ, ಮಣ್ಣಿನಲ್ಲಿ ಅಥವಾ ಗಾರೆಗಚ್ಚಿನಲ್ಲಿ ಮಾಡುತ್ತಿದ್ದುದೇ. ಇಂಥ ಬಿಂಬಗಳನ್ನು ಕಾಪಾಡಲು ಗರ್ಭಗುಡಿ ಗಾಳಿ-ಬೆಳಕುಗಳ ಹಾವಳಿಯಿಂದ ಸುರಕ್ಷಿತವಾಗಿರಬೇಕಷ್ಟೆ. ಮೇಲಾಗಿ, ಕತ್ತಲೆಯ ಕೋಣೆ ದೇವರ ರಹಸ್ಯವನ್ನು ಇನ್ನಷ್ಟು ಹಿಗ್ಗಿಸುವುದಲ್ಲವೆ ? ಗರ್ಭಗುಡಿಯೊಳಗೆ ಸಣ್ಣದೊಂದು ವೇದಿಯಷ್ಟನ್ನೇ ಇರಿಸುತ್ತಿದ್ದುದುಂಟು ; ಕೆಲವೊಮ್ಮೆ ಅದರ ಮೇಲೆ ಯಾವುದಾದರೊಂದು ಯಂತ್ರವನ್ನು ಮೂಡಿಸುತ್ತಿದ್ದರು. ಇಲ್ಲವೇ ತಾಮ್ರದ ಕಲಶವನ್ನು ಇಡುತ್ತಿದ್ದರು. ಯಜ್ಞಕುಂಡವನ್ನೂ ಅಲ್ಲಿ ಇರಿಸುತ್ತಿದ್ದ ಉಲ್ಲೇಖವಿದೆ. ಆದರೆ ಬಹುಮಟ್ಟಿಗೆ ಈ ಕಾಲಕ್ಕೆ ಬಿಂಬಗಳನ್ನು, ದೇವತಾಮೂರ್ತಿಗಳನ್ನು ಅಲ್ಲಿ ಕಾಣುತ್ತೇವೆ. ಗರ್ಭಗುಡಿಯು ಸಾಮಾನ್ಯವಾಗಿ ಕಲ್ಲು ಕಟ್ಟಡವೇ ಆದರೂ ಇಟ್ಟಿಗೆಯ ಕಟ್ಟಡ ಅಪರೂಪವೇನಲ್ಲ. ವಿಷ್ಣುತಿಲಕವೆಂಬ ಆಗಮಗ್ರಂಥದ ಪ್ರಕಾರ, ಶಿಲೆಯ ಗರ್ಭಗೃಹ ಉತ್ತಮವಾದುದು, ಇಟ್ಟಿಗೆಯದು ಮಧ್ಯಮ ; ಮರದ್ದು ಅಧಮ ; ಮಣ್ಣಿನದು ಅಧಮಾಧಮ.





ಗರ್ಭಗುಡಿಗೆ ಉತ್ತರದೇಶದಲ್ಲಿ 'ದೇವುಲ್' ಎಂಬ ಹೆಸರಿದೆ. ಕನ್ನಡದ 'ದೇವಳ್' ಎಂಬುದು ಇದಕ್ಕೆ ಸರಿಯಾದುದು. ಆಲಯ ನಿರ್ಮಾಣದಲ್ಲಿ ಈ ಭಾಗವನ್ನೇ ಮೊದಲು ಕಟ್ಟಬೇಕೆಂಬ ನಿಯಮವಿದೆ. ಅದನ್ನು ಕಟ್ಟುವ ಮೊದಲು 'ಗರ್ಭಾದಾನ' ಅಥವಾ 'ಗರ್ಭನ್ಯಾಸ' ಎಂಬ ವಿಧಿಯನ್ನು ನಡೆಸುವ ವಾಡಿಕೆಯಿದೆ. ತಾಮ್ರದ ಕಲಶವೊಂದನ್ನು ವಿಧ್ಯುಕ್ತವಾಗಿ ಸಂಸ್ಕರಿಸಿ ಅದರಲ್ಲಿ ನವರತ್ನಗಳನ್ನೂ, ಹಲವು ಧಾತುಗಳನ್ನೂ ಕೆಲವು ಔಷಧ ಮೂಲಿಕೆಗಳನ್ನೂ ಇರಿಸಿ ಅದನ್ನು ಗರ್ಭಗುಡಿಯ ಅಡಿಯಲ್ಲಿ ಭೂಮಿಯೊಳಗೆ ಹುದುಗಿಸುತ್ತಾರೆ. ಇದೇ 'ಗರ್ಭ' ; ದೇಗುಲದ ಅಭ್ಯುದಯಕ್ಕೆ ಕಾರಣವಾದುದು. ಹೀಗೆ 'ಗರ್ಭ'ವನ್ನು ಒಳಗೊಂಡಿರುವ ಆಲಯವೇ ಊರ್ಜಿತವಾಗುವುದು ಎಂದು ಆಗಮಗ್ರಂಥಗಳಲ್ಲಿ ಹೇಳಿದೆ. ಈ ವಿಧಿ ಮುಗಿದ ಮೇಲೆ ಕಲಶವನ್ನು ಹುದುಗಿಸಿದ ಸ್ಥಳದ ಮೇಲ್ಭಾಗದಲ್ಲಿ ಆಧಾರ ಶಿಲೆಯನ್ನು ಸ್ಥಾಪನೆ ಮಾಡುತ್ತಾರೆ. ಇದು ಶಿಲಾಪಟ್ಟಿಕೆ ; ಇದರ ಮೇಲೇ ಬಿಂಬವನ್ನು ಪ್ರತಿಷ್ಠೆ ಮಾಡುವುದು. ಕಲಶವು ಗರ್ಭವಾದರೆ ಬಿಂಬ ಜೀವ, ಅದಕ್ಕೆ ಕಟ್ಟಿದ ಗರ್ಭಗುಡಿ ಅದರ ದೇಹ. ಇದೇ ಗರ್ಭಗೃಹ ಎಂಬ ಮಾತಿನ ತಾತ್ಪರ್ಯ.



ಶಿಲ್ಪರತ್ನ ತಂತ್ರಸಮುಚ್ಚಯ, ಈಶಾನ ಶಿವಗುರು ಪದ್ಧತಿ ಮೊದಲಾದ ಗ್ರಂಥಗಳಲ್ಲಿ ಈ ವಿಧಿಯ ವಿಸ್ತೃತ ವಿವರಣೆಯಿದೆ.

ಗರ್ಭಗುಡಿಯನ್ನು ಚಪ್ಪಟೆಯಾದ ಕಲ್ಲು ಹಲಗೆಗಳಿಂದ ಮುಚ್ಚುತ್ತಾರೆ. ಕೆಲವೊಮ್ಮೆ ಮರದ ತೊಲೆಗಳ ಮೇಲೆ ಮರದ ಹಲಗೆಗಳನ್ನು ಹಾಕಿ ಮುಚ್ಚುವುದುಂಟು. ಮೇಲೆದ್ದು ನಿಲ್ಲುವ ವಿಮಾನಕ್ಕೆ ಇದು 'ಅಧಿಷ್ಠಾನ' ಅಥವಾ ಆಸರೆ. ಶಿಖರ ಅಥವಾ ವಿಮಾನವೆನ್ನುವುದು ದೇವಾಲಯದ ಮುಖ್ಯ ಅಂಗ, ತತ್ರಾಪಿ ಜನವಸತಿಯಲ್ಲಿ

ಏರ್ಪಡುವ ಆಲಯಗಳಿಗೆ ಇದ್ದೇ ಇರಬೇಕೆಂಬ ನಿಯಮವಿದೆ. 'ಅರ್ಚನಾ ನವನೀತ'ವೆಂಬ ಹಳೆಯ ಗ್ರಂಥದಲ್ಲಿ ದೇವಾಲಯಗಳನ್ನು ನಾಲ್ಕು ವಿಧಗಳೆಂದು ನಿರ್ದೇಶಿಸಿರುವುದು ಈ ಸಂದರ್ಭದಲ್ಲಿ ಗಮನಾರ್ಹವಾದುದು. ಮೊದಲನೆಯ ಬಗೆ ಸ್ವಯಂವ್ಯಕ್ತ ಮೂರ್ತಿಗಳಿಗಾಗಿ ಏರ್ಪಟ್ಟ ಆಲಯ. ಎರಡನೆಯದು ದೇವತೆಗಳಿಂದ ಪ್ರತಿಷ್ಠಿತವಾದ ಬಿಂಬಗಳನ್ನೊಳಗೊಂಡ ಆಲಯ ; ಇದಕ್ಕೆ ದೈವವೆಂದು ಹೆಸರು. ಮೂರನೆಯದು ಆರ್ಷ, ಎಂದರೆ ಋಷಿಗಳಿಂದ ವ್ಯವಸ್ಥಿತ ವಾದುದು ; ಮನುಷ್ಯ-ನಿರ್ಮಿತ. ಮೊದಲ ಮೂರೂ ಪ್ರಕಾರಗಳು ತೋರಿಕೊಳ್ಳುವಾಗಲೇ ಪರಿಶುದ್ಧವಾದುವು, ಪ್ರಭಾವಶಾಲಿಯಾದುವು. ನಾಲ್ಕನೆಯದು ಹಾಗಲ್ಲ, ಯಾವುದಾದರೊಂದು ಸಂವಿಧಾನವನ್ನು ಅನುಸರಿಸಿ ನಡೆಸುವ ಸಂಸ್ಕಾರಗಳಿಂದಲೇ ಪರಿಶುದ್ಧವಾಗುವುದು, ಪ್ರಭಾವಶಾಲಿಯಾಗುವುದು. ವಿಮಾನ ನಿರ್ಮಾಣ ಇಂಥ ಸಂಸ್ಕಾರಗಳ ಲ್ಲೊಂದು. ಸಾಮಾನ್ಯವಾದ ಕಟ್ಟಡದಲ್ಲಿ ಅಲೌಕಿಕವಾದ ಕಳೆಯನ್ನು ತುಂಬುವ ಯತ್ನ ಈ ಸಂಸ್ಕಾರ. ವಿಮಾನದ ನೆರಳು ಎಷ್ಟು ಪ್ರದೇಶದ ಮೇಲೆ ಬೀಳುವುದೋ ಅಷ್ಟು ಪ್ರದೇಶ ಪ್ರಭಾವಶಾಲಿ ಯೆಂಬ ಕಲ್ಪನೆಯಿದೆ.

ಮೊದಲ ಗುಡಿಗಳ ಚಾವಣಿ ಚಪ್ಪಟೆಯಾಗಿದ್ದುವು. ಉತ್ತರಭಾರತದಲ್ಲಿ ತುಂಬ ಹಳೆಯವೆನಿಸಿಕೊಂಡ ಗುಪ್ತಯುಗದ (ಎಂದರೆ ಕ್ರಿಸ್ತಾಬ್ಧ ಐದನೆಯ ಶತಮಾನದ) ಗುಡಿಗಳು ಹೀಗೆಯೇ ಇದ್ದುವು. ಐಹೊಳೆಯಲ್ಲಿರುವ ಲಾಡ್-ಖಾನ್ ದೇಗುಲ (ಕ್ರಿಸ್ತಾಬ್ಧ 500ರ ಸುಮಾರು) ಇಂಥ ಚಾವಣಿಯನ್ನೇ ಹೊಂದಿದ್ದು ಅದರ ಮೇಲೆ ಮತ್ತೊಂದು ಸಣ್ಣ ಗುಡಿ, ಚಪ್ಪಟೆ ಚಾವಣಿಯದೇ, ಎದ್ದು ಕೊಂಡಿದೆ. ಕೆಲವೊಮ್ಮೆ ಗುಡಿಯ ಸೂರು ಗುಡಿಸಿಲುಗಳ ಸೂರಿನಂತೆ ಇರುತ್ತಿದ್ದುದೂ ಉಂಟು ; ಮಾಮಲ್ಲಪುರದಲ್ಲಿರುವ 'ದ್ರೌಪದೀ ರಥ'



ಈ ಬಗೆಯದೇ. ಆದರೆ ಗುಡಿಯ ಮೇಲ್ಭಾಗವನ್ನು ಗುಮ್ಮಟದಂತೆ ಮಾಡುವ ಬಗೆ ಬೆಳೆಯುತ್ತ ಬಂದಿತು. ಪ್ರಾಚೀನ ಸ್ತೂಪಗಳ ಹೊರ ಆಕಾರವನ್ನು ಹೀಗೆ ಉಳಿಸಿಕೊಳ್ಳುವ ಕಾತರವಿದ್ದಿತೋ ಏನೋ. ಹಳ್ಳಿಗಳಲ್ಲಿ ಕಾಣ ಬರುವ ಸಣ್ಣ ಸಣ್ಣ ಗುಡಿಗಳ ಮೇಲೆ ಈಗಲೂ ಕಲ್ಲು ಮಣ್ಣನ್ನು ಗುಮ್ಮಟದಂತೆ ಪೇರಿಸುವುದು ಅಪರೂಪವೇನಲ್ಲ ; ಹಳೆಯ ಕಾಲದ ಸಮಾಧಿಗಳೂ ಹೀಗೆಯೇ ಇರುತ್ತಿದ್ದುವಷ್ಟೆ. ಬರು ಬರುತ್ತ ಈ ಗುಮ್ಮಟಾಕಾರದ ಪ್ರವೃತ್ತಿ ಪಿರಮಿಡ್ಡುಗಳನ್ನು ಹೋಲುವ ಶಿಖರಗಳಂತೆ ತೋರಿಕೊಂಡಿತು, ನೇರವಾಗಿ ಮುಗಿಲುದ್ದಕ್ಕೆ ಎದ್ದು ನಿಲ್ಲುವ ಶಿಖರಗಳಂತೆಯೂ ಕಾಣಿಸಿಕೊಂಡಿತು. ಗುಡಿಗೊಂದು ಗಾಂಭೀರ್ಯವನ್ನೂ ಔನ್ನತ್ಯವನ್ನೂ ಒದಗಿಸಿಕೊಡುವ ವಿವರ ಇದೆಂದು ಸಿದ್ಧವಾಯಿತು.

ಉತ್ತರದೇಶದ ಗುಡಿಗಳು, ಅದರಲ್ಲೂ ಒಡಿಸ್ಸಾದ ಗುಡಿಗಳು, ಈ ಪ್ರವೃತ್ತಿಯನ್ನೇ ಮುಖ್ಯವಾಗಿ ಎಣಿಸಿದುವು. ಬಹುಶಃ ಐಹೊಳೆಯ ಲಾಡ್-ಖಾನ್ ಗುಡಿಯಲ್ಲಿ ಕಾಣುವಂತೆ ಮೇಲ್ಭಾಗದ ಗುಡಿಯಿದ್ದು ಅದನ್ನು ಈ ಶಿಖರದಲ್ಲಿ ಹೊಂದಿಸಿದರೆಂದು ತೋರುತ್ತದೆ. ಹಲವಾರು ಉಪ್ಪರಿಗೆಗಳಿದ್ದು ಅವನ್ನೆಲ್ಲ ಶಿಖರದಲ್ಲೇ ಅಳವಡಿಸಿದಾಗ ಶಿಖರ ನೀಳವಾಗಿ, ಉತ್ತುಂಗವಾಗಿ ನಿಲ್ಲುವುದು ಸಹಜವೇ, ಅದನ್ನೇ ಒಂದು ಅಲಂಕರಣ ಸಂವಿಧಾನವಾಗಿ ಬಳಸಿಕೊಂಡರು. ಎಂಟನೆಯ ಶತಮಾನದ ಸುಮಾರಿಗೆ ಗುಡಿಯ ಶಿಖರ ಗುಡ್ಡದಂತೆ ಕಾಣಿಸಿಕೊಳ್ಳತೊಡಗಿತು. ಸುಮೇರು ಪರ್ವತದ ಕಲ್ಪನೆಯನ್ನು ಪುರಾಣಗಳು ಸಿದ್ಧಪಡಿಸಿ ಈ ಆಕಾರಕ್ಕೊಂದು ದೈವಸಾಮ್ಯವನ್ನು ಒದಗಿಸಿದುವು. ಸುಮೇರುವಿನಂತೆ ಗುಡಿಯ ಶಿಖರಗಳೂ ಗಗನವನ್ನು ಮುಟ್ಟುವ ಹಂಬಲವನ್ನು ಹೂಡಿದುವು. ದಿಟವಾಗಿ, ಒಡಿಸ್ಸಾದ ಅಥವಾ ಖಜುರಾಹೋವಿನ ಕೆಲವು ಗುಡಿಯ ಬೀಡುಗಳು ಗುಡ್ಡಸಾಲನ್ನೇ ನೆನಪಿಗೆ ತರುತ್ತವೆ. ಭುವನೇಶ್ವರದ ಲಿಂಗರಾಜ ದೇವಾಲಯದ ಶಿಖರ ನೂರಿಪ್ಪತ್ತೈದು ಅಡಿ ಎತ್ತರವಾಗಿದೆ ; ಪುರಿ ಜಗನ್ನಾಥ ದೇವಾಲಯದ ಶಿಖರ ಇನ್ನೂರು ಅಡಿಗಳಷ್ಟು ಎತ್ತರವಿದ್ದು ಆರು ಮೈಲಿ ದೂರದಲ್ಲೇ ಕಾಣಿಸುತ್ತದೆ.

ಉತ್ತರಭಾರತದ ಗುಡಿಗಳಲ್ಲಿ ಪ್ರಮುಖ ಭಾಗವಾಗಿ ಗರ್ಭಗೃಹ (ದೇವುಲ್) ಮತ್ತು ಅದರ ಮೇಲೆದ್ದು ನಿಲ್ಲುವ ಭಾಗ ಎರಡನ್ನೂ ಕೂಡಿಸಿ ವಿಮಾನ (ಅಥವಾ ಶಿಖರ) ಎಂದು ಕರೆಯುವ ವಾಡಿಕೆ. ದಕ್ಷಿಣದಲ್ಲಿಯೂ ಮೊದಲಿಗೆ ಇದೇ ವಾಡಿಕೆಯಲ್ಲಿದ್ದ ನಿರ್ದೇಶನ. ಈಚೆಗೆ ಗರ್ಭಗೃಹದ ಮೇಲ್ಭಾಗದ ಭಾಗವಷ್ಟನ್ನೇ ವಿಮಾನ (ಶಿಖರ)ವೆಂದು ಕರೆಯುತ್ತಾರೆ.



ಉತ್ತರದೇಶದ ಗುಡಿಗಳ ವಿಮಾನದ ಮೇಲ್ಭಾಗದಲ್ಲಿ ದೊಡ್ಡದಾದ, ಚಕ್ರಾಕಾರದಲ್ಲಿರುವ ಕಲ್ಲಿನ ಹಲಗೆಯನ್ನು ಇರಿಸುತ್ತಾರೆ. ಇದಕ್ಕೆ 'ಆಮಲಕ'ವೆಂದು ಹೆಸರು. ಸಂಸ್ಕೃತದಲ್ಲಿ ಆಮಲಕವೆಂದರೆ ನೆಲ್ಲಿಕಾಯಿ. ಇದು ದೊಡ್ಡ ನೆಲ್ಲಿಕಾಯಿಯ ಆಕಾರದಲ್ಲೇ ಇರುತ್ತದೆ.

ದಕ್ಷಿಣದಲ್ಲಿ ವಿಮಾನ ಶೃಂಗದಲ್ಲಿಯೋ ಸ್ತೂಪಿಯಲ್ಲಿಯೋ ಮುಗಿಯುತ್ತದೆ. ಬಂಡಿಯ ಕಮಾನಿನಂತೆ ಕಾಣುವ ಖಕರವೆಂಬ ಭಾಗವೂ ಉಂಟು. ದಕ್ಷಿಣದ ಗುಡಿಗಳ ವಿಮಾನದ ಒಡಲು

ಉಬ್ಬಿರುತ್ತದೆ, ವಿಮಾನ ಕುಳ್ಳಾಗಿರುತ್ತದೆ ; ಚಚ್ಚೌಕದ ತಳವಿನ್ಯಾಸದ ಮೇಲೆ ಬಹುಕೋಣಗಳಿಂದ ಕೂಡಿದ ರಚನೆ ಈ ವಿಮಾನ. ಉತ್ತರದ ವಿಮಾನಗಳಾದರೋ ಪೀಠದ ಮೇಲೆ ನಿಂತು ಗೋಡೆಗಳ (ಬಡ) ಮೇಲೆ ಹಾದು, ಗಂಡಿಯೆನಿಸಿಕೊಳ್ಳುವ ಮುಖ್ಯ ಭಾಗದ ಮೂಲಕ ಮಸ್ತಕ (ಎಂದರೆ ತಲೆ)ಯನ್ನು ಮುಟ್ಟಿರುತ್ತವೆ. ಅಲ್ಲಿ ಆಮಲಕ, ತಲೆಯೋಡೆಯಂತೆ ಕಾಣುವ 'ಖಪೂರಿ', ಅದರ ಮೇಲೆ ಕಲಸ. ಕಲಶದ ಮೇಲೆ ದೇವರ ಚಿಹ್ನೆಯಾಗಿ, ಆಯುಧವಾಗಿ ಚಕ್ರವೋ, ಶೂಲವೋ, ತ್ರಿಶೂಲವೋ ಇರುತ್ತದೆ. ವಿಷ್ಣುವಾದರೆ ಚಕ್ರ, ಶಕ್ತಿಯಾದರೆ ಶೂಲ, ಶಿವನಾದರೆ ತ್ರಿಶೂಲ.

ದಕ್ಷಿಣ ದೇಶದಲ್ಲಿ ಮೊದಲಿಗೆ ವಿಮಾನ ಗುಡಿಯ ಮುಖ್ಯ ಭಾಗವಾಗಿದ್ದಿತು ; ಎಂದರೆ ವಾಸ್ತುಶಿಲ್ಪಿಗಳು ಅದಕ್ಕೇ ಹೆಚ್ಚು ಗಮನ



ವನ್ನು ಕೊಡುತ್ತಿದ್ದರು. ನಿದರ್ಶನಕ್ಕೆ ತಮಿಳುನಾಡಿನಲ್ಲಿ ತಂಜಾವೂರಿನ ರಾಜರಾಜೇಶ್ವರ ದೇವಾಲಯವನ್ನು ನೋಡಬಹುದು. ಈ ದೇವಾಲಯವನ್ನು ಚೋಳರಾಜನಾದ ಮೊದಲನೆಯ ರಾಜರಾಜ ಕ್ರಿಸ್ತಾಬ್ಧ 1009ರಲ್ಲಿ ಕಟ್ಟಿಸಿದ. ಈಗ ಇದನ್ನು ಬೃಹದೀಶ್ವರ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯದಲ್ಲಿರುವ ವಿಮಾನ ಐವತ್ತೆಂಟು ಮೀಟರುಗಳಷ್ಟು ಎತ್ತರವಾಗಿದೆ. ಗುಡಿಯಲ್ಲಿ ಅದೇ ಮುಖ್ಯವಾದ ಭಾಗ. ಬರುಬರುತ್ತ ವಿಮಾನಗಳ ಎತ್ತರ ಕಡಿಮೆಯಾಯಿತು. ಕ್ರಿಸ್ತಾಬ್ಧ 1025ರಲ್ಲಿ ರಾಜೇಂದ್ರಚೋಳನು ಗಂಗೈಕೊಂಡ - ಚೋಳಪುರದಲ್ಲಿ ಕಟ್ಟಿಸಿದ ಗುಡಿಯ ವಿಮಾನದ ಎತ್ತರ ನಲವತ್ತಾರು ಮೀಟರುಗಳಷ್ಟೇ. ಮುಂದಿನ ವಿಮಾನಗಳ ಎತ್ತರ ಇನ್ನೂ ಕಡಿಮೆ. ದ್ವಾರ ಗೋಪುರಗಳ ಹಿರಿಮೆ ಬೆಳೆಯಿತು. ವಿಮಾನ ಸಣ್ಣದಾದರೂ ಅದರ ಪ್ರಾಧಾನ್ಯವೇನೂ ಕುಗ್ಗಲಿಲ್ಲ. ದ್ವಾರಗೋಪುರದಲ್ಲಿ ಲೌಕಿಕ ಮತ್ತು ಕಾಮಪ್ರವೃತ್ತಿಯ ಶಿಲ್ಪಗಳನ್ನು ಮೂಡಿಸಬಹುದು. ಆದರೆ ವಿಮಾನದಲ್ಲಿ ಈ ಬಗೆಯ ಶಿಲ್ಪಗಳಿಗೆ ಎಡೆಯಿರದು. ಗರ್ಭಗುಡಿಯಲ್ಲಿರುವ ಮೂರ್ತಿಯನ್ನು ಅನುಸರಿಸಿ ವಿಮಾನದ ಮೇಲೆ ಪರಿವಾರ ದೇವತೆಗಳನ್ನೇ ಅಳವಡಿಸಬೇಕೆಂಬ ನಿಯಮವಿದೆ. ಈಗಲೂ, ಮೂಲ ಮೂರ್ತಿಯ ಹೊರ ಆಕಾರವೆಂದು, ಪ್ರತೀಕವೆಂದು, ವಿಮಾನಕ್ಕೇ ನಮಸ್ಕರಿಸುವ ಪದ್ಧತಿ ಸಾಮಾನ್ಯವಾಗಿ ಕಾಣಬರುತ್ತದೆ. ದ್ವಾರಗೋಪುರಕ್ಕೆ ಈ ಗೌರವವಿಲ್ಲ, ಈ ಪಾವಿತ್ರ್ಯವಿಲ್ಲ. ದಾನಿಯ ಔದಾರ್ಯವನ್ನೂ ಐಶ್ವರ್ಯವನ್ನೂ ರಸಿಕತೆಯನ್ನೂ ಜನರೆದುರು ತೋರಿಸುವುದಷ್ಟೇ ದ್ವಾರಗೋಪುರದ ಭವ್ಯತೆಯ ತಾತ್ಪರ್ಯ ; ಕಲೆಗಾರನು ತನ್ನ ಕೈ ಚಳಕವನ್ನೂ ಕಲ್ಪನಾ ಚಾತುರ್ಯವನ್ನೂ ಇಲ್ಲಿ ಪ್ರದರ್ಶಿಸಬಹುದು.

ವಿಮಾನದ ತಳವಿನ್ಯಾಸ ಗುಂಡಾಗಿರಬಹುದು, ಚಚೌಕ್ಕವಾಗಿರಬಹುದು. ಆರು ಮುಖಗಳಿದ್ದಿರಬಹುದು, ಎಂಟು ಮುಖಗಳೂ ಇರಬಹುದು. ಅಡಿಯಿಂದ ಮುಡಿಯವರೆಗೆ ಒಂದೇ ವಿನ್ಯಾಸದಲ್ಲಿರಬಹುದು, ಅಥವಾ ಹಂತ ಹಂತಗಳಲ್ಲಿ ಬೇರೆ ಬೇರೆ ವಿನ್ಯಾಸಗಳನ್ನು ಅಳವಡಿಸಿಕೊಂಡಿರಬಹುದು. ಮೊದಲಿಗೆ, ವಿಮಾನದ ಭಾಗಗಳು ಬಿಡಿಬಿಡಿಯಾಗಿ ಕಾಣಿಸಿದ ಉಪ್ಪರಿಗೆಗಳಂತೆಯೇ ಇರುತ್ತಿದ್ದುವು. ಕೆಲವೊಮ್ಮೆ ಹದಿನಾರು ಉಪ್ಪರಿಗೆಗಳನ್ನು ಒಂದರಮೇಲೊಂದರಂತೆ ನಿಲ್ಲಿಸುತ್ತಿದ್ದುದೂ ಉಂಟು. ಆದರೆ ಮುಂದೆ ಮೈದಳೆದ ವಿಮಾನಗಳಲ್ಲಿ ಹೀಗೆ ಸ್ಪಷ್ಟವಾದ ಉಪ್ಪರಿಗೆಗಳಾಗಲೀ ಹಂತಗಳಾಗಲೀ ಕಾಣಿಸುವುದಿಲ್ಲ, ವಿಮಾನ ಗರ್ಭಗುಡಿಯ ಮೇಲೆ, ನೇರವಾಗಿ ಎದ್ದು ನಿಲ್ಲುತ್ತದೆ. ಗರ್ಭಗುಡಿಯನ್ನು ಮುಚ್ಚಿರುವ ಚಪ್ಪಟೆ ಕಲ್ಲುಚಪ್ಪಡಿಯೇ (ಭೂಮಿಕಾ ಅಥವಾ ಕಪೋತ) ವಿಮಾನಕ್ಕೆ ತಳಗಲ್ಲು (ಅಧಿಷ್ಠಾನ). ಕೆಲವು ವಿಮಾನಗಳು ಗರ್ಭಗುಡಿಯನ್ನು ಮಾತ್ರವಲ್ಲದೆ, ಅದರ ಸುತ್ತ ಇರುವ ಪ್ರದಕ್ಷಿಣಾಪಥವನ್ನೂ, ಎದುರಿಗಿರುವ ಮುಖಮಂಡಪವನ್ನೂ ಅಡಗಿಸಿಕೊಂಡು ನಿಂತಿರುವುದನ್ನು ಕಾಣಬಹುದು. ವಿಮಾನದ ಮೈ ಅಧಿಷ್ಠಾನ ಅಥವಾ ಪೀಠದ ಮೇಲೆ ನಿಂತು ಹಲವಾರು ನೆಲೆಗಳಲ್ಲಿ ಗವಾಕ್ಷವಿನ್ಯಾಸಗಳನ್ನು ಅಳವಡಿಸಿಕೊಂಡು ಮೇಲೆದ್ದು ಶಿಖರದಲ್ಲಿ ಮುಗಿಯುತ್ತದೆ.

ಗರ್ಭಗುಡಿಯ ಸುತ್ತ ಭಕ್ತರು ಪ್ರದಕ್ಷಿಣೆ ಹೋಗಿ ಬರುವ ಸಲುವಾಗಿ ಪ್ರದಕ್ಷಿಣಾಪಥ (ಅಥವಾ ಭ್ರಮ)ವಿರುತ್ತದೆ. ಅದನ್ನು ಕಟ್ಟಡದಲ್ಲಿ ಅಡಗಿಸಿದ್ದರೆ ಇಕ್ಕಟ್ಟಾದ ದಾರಿ. ಮೊದಲಿಗೆ ಗುಡಿಯ ಹೊರಗೆ ತೆರೆದ ಭಾಗವಾಗಿದ್ದುದು ಬರುಬರುತ್ತ ಕಟ್ಟಡದೊಳಗೇ ಸೇರಿಬಂದ ಭಾಗ ಇದು. ಗರ್ಭ ಗುಡಿಯೆದುರು ಮುಖಮಂಡಪ



ಅಥವಾ ಮುಖಶಾಲೆ ಕಂಬಗಳಿಂದ ಸಜ್ಜಾದ ಹಜಾರದಂತೆ ಇರುತ್ತದೆ ; ಭಕ್ತರು ಇಲ್ಲಿ ನಿಂತು ಗರ್ಭಗುಡಿಯೊಳಗೆ ನಡೆಯುವ ಪೂಜೆಯನ್ನು ನೋಡಬಹುದು. ಗುಡಿಯ ಪ್ರಸಿದ್ಧಿ ಹರಡಿ, ಭಕ್ತರ ಸಂಖ್ಯೆ ಹೆಚ್ಚಿದಾಗ ಈ ಮುಖಮಂಡಪ ಸಾಲದೆ, ಅದಕ್ಕೆ ಸೇರಿದಂತೆ ಮಹಾ ಮಂಡಪ ಅಥವಾ ನವರಂಗವನ್ನು ಸಿದ್ಧಪಡಿಸುತ್ತಿದ್ದರು. ಇದು ವಿಶಾಲವಾಗಿದ್ದು, ನೂರಾರು ಮಂದಿ ಭಕ್ತರು ನಿಲ್ಲುವಂತೆ ಇರುತ್ತಿದ್ದಿತು. ಹೀಗಾದಾಗ, ಮುಖಮಂಡಪ ಬರಿಯ ಒಂದು ನಡುವಣ ಕೋಣೆಯಾಗಿ ಅಂತರಾಳವೆನಿಸಿಕೊಂಡಿತು. ಗರ್ಭಗುಡಿಯನ್ನೂ ಮಹಾ ಮಂಡಪವನ್ನೂ ಸೇರಿಸುವ ಒಂದು ಅಂಕಣ ಅಷ್ಟೆ ಅಂತರಾಳ. ಹಲವು ಪ್ರಾಚೀನ ಗುಡಿಗಳಲ್ಲಿ ಗರ್ಭಗುಡಿಗೂ ಮಹಾಮಂಡಪಕ್ಕೂ ನಡುವೆ



ಅಂತರಾಳ ತೆರೆದೇ ಇರುವುದನ್ನು ಕಾಣಬಹುದು ; ಇದಕ್ಕೆ ಗೋಡೆಗಳಾಗಲೀ ಚಾವಣಿಯಾಗಲೀ ಇರುವುದಿಲ್ಲ. ಆದರೆ ಕಾಲಕ್ರಮದಲ್ಲಿ ಅಂತರಾಳ ವನ್ನು ಗುಡಿಯ ಕಟ್ಟಡದಲ್ಲೇ ಅಡಗಿಸುವುದು ವಾಡಿಕೆಗೆ ಬಂದಿತು.

ಗುಡಿಯ ಗರ್ಭಗೃಹ, ಮಂಡಪಗಳು, ಕೊಳ ಎಲ್ಲವನ್ನೂ ಒಳಗೊಂಡಂತೆ ಪ್ರಾಕಾರವನ್ನು ಕಾಣಬಹುದು. ಕೋಟೆಯ ಹೊರಗೋಡೆಗಳಂತೆ ಗುಡಿಯ ಪ್ರಾಕಾರ. ಆದರೆ ಪ್ರಾಕಾರದ ಕಲ್ಪನೆ ಅಷ್ಟು ಪ್ರಾಚೀನವಾದುದಲ್ಲ ; ಅದೂ ದಕ್ಷಿಣ ದೇಶದ ಗುಡಿಗಳಲ್ಲೇ ವಿಶೇಷವಾಗಿ ಕಾಣಬರುವ ವಿವರ. ಮುಂದಿನ ಯುಗದಲ್ಲಿ ಸಿದ್ಧವಾದ ಶಾಸ್ತ್ರಗ್ರಂಥಗಳಲ್ಲಿ ಹಲವಾರು ಪ್ರಾಕಾರಗಳನ್ನು ವಿಧಿಸುವುದುಂಟು. ಒಂದರ ಒಳಗೊಂದು, ಹೀಗೆ ಮೂವತ್ತೆರಡು ಪ್ರಾಕಾರಗಳನ್ನೂ ಹೇಳಿದ್ದಾರೆ. ಆದರೆ ಐದು ಅಥವಾ ಏಳು ಪ್ರಾಕಾರಗಳಿದ್ದರೆ ಸಾಕು ಎನ್ನುವ ಸೂಚನೆಯೂ ಇದೆ. ಒಂದಕ್ಕಿಂತ ಹೆಚ್ಚು ಪ್ರಾಕಾರಗಳ ಅಗತ್ಯವೇನೂ ಕಂಡುಬರುವುದಿಲ್ಲ. ತಮಿಳುನಾಡಿನ ಶ್ರೀರಂಗ ದಲ್ಲಿರುವ ರಂಗನಾಥಸ್ವಾಮಿ ಗುಡಿಯಲ್ಲಿ ಏಳು ಪ್ರಾಕಾರಗಳಿದ್ದು ಇವು ಇಡೀ ಊರನ್ನೇ ಒಳಗೊಳ್ಳುತ್ತವೆ ! ಹೀಗೆ ಹಲವು ಪ್ರಾಕಾರ ಗಳಿದ್ದಾಗ ಗರ್ಭಗುಡಿಗೆ ಹತ್ತಿರವಾಗಿರುವುದನ್ನು 'ಅಂತರ್ಮಂಡಪ' ವೆಂದೂ, ತೀರ ಹೊರಗಿರುವುದನ್ನು 'ಮರ್ಯಾದಾಹರ' (ಎಂದರೆ ಎಲ್ಲೆಕಟ್ಟು) ಎಂದೂ ವ್ಯವಹರಿಸುತ್ತಾರೆ.

ದಕ್ಷಿಣದೇಶದ ಗುಡಿಗಳಲ್ಲಿರುವ ಪ್ರಾಕಾರಗಳು ಬರಿಯ ಎಲ್ಲೆ ಕಟ್ಟುಗಳಲ್ಲ. ಅವುಗಳಲ್ಲಿ ಸಾಲುಮಂಡಪಗಳನ್ನೂ ಅಳವಡಿಸಿರುತ್ತಾರೆ. ಹಲವಾರು ದೇವತೆಗಳಿಗೆ ಸನ್ನಿಧಿಗಳು, ಸಾಮಾನು-ಸರಂಜಾಮುಗಳನ್ನು ಇರಿಸುವ ಕೋಣೆಗಳು, ಅಡುಗೆಶಾಲೆ, ಯಾತ್ರಿಕರಿಗೆ ಬೀಡುನೆಲೆ, ವಾಹನಗಳನ್ನು ಇರಿಸುವ ಮಂಡಪಗಳು ಮೊದಲಾಗಿ ಹತ್ತಾರು

ಪ್ರಯೋಜನಗಳಿಗೆ ಪ್ರಾಕಾರ ನೆರವಾಗುತ್ತದೆ. ಪ್ರಾಕಾರಗಳ ಮುಖ್ಯೋದ್ದೇಶ ಗುಡಿಯನ್ನೂ ಗುಡಿಯ ಸ್ಥಿರ-ಚರ ಸ್ವತ್ತನ್ನೂ ಕಾಪಿಟ್ಟುಕೊಳ್ಳುವುದಾದರೂ, ಅವನ್ನು ಕಲಾತ್ಮಕವಾಗಿ ಭವ್ಯವಾಗಿ ನಿರ್ಮಿಸುವ ವಾಡಿಕೆಯಿದೆ.

ಪ್ರತಿಯೊಂದು ಪ್ರಾಕಾರಕ್ಕೂ ನಾಲ್ಕೂ ಕಡೆಗಳಲ್ಲಿ ಬಾಗಿಲುಗಳಿರಬೇಕೆಂಬ ಕಟ್ಟಳೆಯಿದ್ದರೂ, ಪ್ರತಿ ಬಾಗಿಲ ಮೇಲೂ ಗೋಪುರವಿರಬೇಕೆಂಬ ವಿಧಿಯಿದ್ದರೂ ಗರ್ಭಗುಡಿಯ ಎದುರಿಗಿರುವ ಪ್ರಾಕಾರಕ್ಕೇ ಬಾಗಿಲಿರುವುದು ವಾಡಿಕೆ. ಕೆಲವು ದೊಡ್ಡ ದೊಡ್ಡ ಗುಡಿಗಳಲ್ಲೇನೋ ನಾಲ್ಕೂ ಕಡೆ ಬಾಗಿಲುಗಳಿರುತ್ತವೆಯೆನ್ನಿ, ಗರ್ಭಗುಡಿಯ ಮುಂದಿರುವ ಬಾಗಿಲು ಮಹಾದ್ವಾರವೆನಿಸಿಕೊಳ್ಳುತ್ತದೆ ; ಎಂದರೆ ಹೆಬ್ಬಾಗಿಲು, ಪ್ರಧಾನವಾದ ಬಾಗಿಲು. ಅದು ದೊಡ್ಡದಾಗಿಯೂ ಇರುತ್ತದೆ. ಕೆಲವೊಮ್ಮೆ ಗುಡಿಯ ಆನೆ, ಗುಡಿಯ ತೇರು ಹಾದುಹೋಗುವಷ್ಟು ಎತ್ತರವಾಗಿರುವುದೂ ಉಂಟು. ಹತ್ತನೆಯ ಶತಮಾನವಾದ ಮೇಲೆ ತಲೆಬಾಗಿಲ ಮೇಲೆ ಗೋಪುರವನ್ನು ಕಟ್ಟುವ ಪದ್ಧತಿ ಬಳಕೆಗೆ ಬಂದಿತು. ಈ ಗೋಪುರಕ್ಕೆ ದ್ವಾರಗೋಪುರ ಎಂದು ಹೆಸರು. ವೈಖಾನಸಾಗಮ, ಮಯಮತ, ಈಶಾನಶಿವಗುರು ಪದ್ಧತಿ ಮೊದಲಾದ ಪ್ರಾಚೀನ ಶಾಸ್ತ್ರಗ್ರಂಥಗಳಲ್ಲಿ ಗೋಪುರಗಳ ಉಲ್ಲೇಖವಿದೆ, ಆದರೆ ಅವು ಮುಖ್ಯವೆಂಬ ಸೂಚನೆ ಬರುವುದಿಲ್ಲ. ಬರುಬರುತ್ತಾ ಗೋಪುರದ ಹಿರಿಮೆ ಬೆಳೆಯಿತು. ತುಂಬ ಹಳೆಯ ದ್ವಾರಗೋಪುರಗಳಲ್ಲಿ ತಮಿಳುನಾಡಿನಲ್ಲಿ ತಿರುಚ್ಚಿಯ ಬಳಿ ಕಿಲೈಯೂರಿನ ಅವನಿ-ಕಂದರ್ಪೇಶ್ವರ ದೇವಾಲಯದ್ದು ಸೊಗಸಾದ ನಿದರ್ಶನ. ಹದಿನೈದು-ಹದಿನೇಳು ಶತಮಾನಗಳ ನಡುವೆ ಅರ್ವಾಚೀನ ಚೋಳರೂ, ಪಾಂಡ್ಯರೂ ಕಟ್ಟಿಸಿದ ಗೋಪುರಗಳು

ದೊಡ್ಡವು, ಸುಂದರವಾದುವು, ಭವ್ಯವಾದುವು. ಮಧುರೆ, ತಿರುನೆಲ್ವೇಲಿ, ಚಿದಂಬರಂ, ಕುಂಭಕೋಣಂ, ತಿರುವನ್ನೈಕ್ಕಾವಲ್ (ಶ್ರೀರಂಗದ ಬಳಿ) ಇಲ್ಲೆಲ್ಲ ಇರುವ ಗೋಪುರಗಳು ಈ ಕಾಲದವೇ.

ಹಲವಾರು ನೆಲೆಗಳಿದ್ದು, ಮೇಲೆ ಹೋಗುತ್ತ ಹೋಗುತ್ತ



ಸಣ್ಣದಾಗಿ ತೋರಿಕೊಳ್ಳುವ ಈ ದ್ವಾರಗೋಪುರಗಳ ಮೇಲ್ಭಾಗದಲ್ಲಿ ಕೀರ್ತಿಮುಖಗಳುಳ್ಳ 'ನಾಸಿ' ಎಂಬ ವಿವರ ಸ್ವಾರಸ್ಯವಾದುದು. ಎರಡೂ ಕಡೆ ಎತ್ತಿನ ಕೋಡುಗಳಂತೆ ಇರುವ ಈ ನಾಸಿಗಳ ನಡುವೆ



ಬೆಸ ಸಂಖ್ಯೆಯಲ್ಲಿ ಕಳಶಗಳಿರುತ್ತವೆ. ಇವನ್ನು ಗೋಪುರ-ಶಿಖರ ಎನ್ನುತ್ತಾರೆ. ತೀರ ದೊಡ್ಡ ಗೋಪುರವೆಂದರೆ ಸುಮಾರು ಇನ್ನೂರು ಅಡಿಗಳಷ್ಟು ಎತ್ತರವೂ ಇರಬಹುದು. ಗೋಪುರವನ್ನು ಇಟ್ಟಿಗೆ-ಗಾರೆ ಗಳಿಂದಲೇ ಕಟ್ಟಿ ಮೇಲೆ ಸುಣ್ಣಕಲ್ಲಿನಲ್ಲೋ ಗಾರೆಗಚ್ಚಿನಲ್ಲೋ





ಅಲಂಕರಣ ವಿನ್ಯಾಸಗಳನ್ನೂ ಪೌರಾಣಿಕ ಮೂರ್ತಿಗಳನ್ನೂ ಮೂಡಿಸುತ್ತಾರೆ. ಹಲವು ಗೋಪುರಗಳು ತುಂಬ ಕಲಾತ್ಮಕವಾದುವು.

ಗೋಪುರಗಳ ಭವ್ಯತೆ, ಔನ್ನತ್ಯಗಳು ಪ್ರಸಿದ್ಧವಾಗಿದ್ದರೂ, ಗುಡಿಗೆ ಅನಿವಾರ್ಯವಾದ ವಿವರ ಗೋಪುರ ಎನ್ನಲಾಗದು. ಮೇಲಾಗಿ ಈ ಗೋಪುರಗಳ ಹೆಚ್ಚಳ ದಕ್ಷಿಣ ದೇಶದಲ್ಲಿಯೇ. ಉತ್ತರದ ಗುಡಿಗಳಲ್ಲಿ ಪ್ರಾಕಾರವಾಗಲೀ ಗೋಪುರವಾಗಲೀ ಅಷ್ಟು ಪ್ರಧಾನವಾದುವಲ್ಲ. ಅವಿಲ್ಲದಿರುವ ನಿದರ್ಶನಗಳೇ ಹೆಚ್ಚು.





ಆಲಯದ ಕಟ್ಟಡ





ಗುಡಿಯ ಅತಿಮುಖ್ಯ ಭಾಗವಾದ ಗರ್ಭಗುಡಿಗೂ ಬಲಿಪೀಠಕ್ಕೂ ನಿಕಟವಾದ ನೆಂಟಿದೆ. ಗರ್ಭಗುಡಿಯಲ್ಲಿರುವ ದೇವರಿಗೆ ಎದುರಾಗಿ ಬಲಿಪೀಠವನ್ನು ನಿಲ್ಲಿಸುತ್ತಾರೆ. ಬಲಿಪೀಠದ ರಚನೆ ಕುಳ್ಳಾದ ಕಲ್ಲುಗಂಬ ; ಹಳೆಯ ಬಲಿಪೀಠಗಳು ಬರಿಯ ಒರಟು ಕಲ್ಲುಗಂಬಗಳು. ಅನಂತರ ಸಿದ್ಧವಾದುವು ಕಮಲದ ವಿನ್ಯಾಸವನ್ನು ತಳೆದಿರುತ್ತವೆ. ಈಚಿನ ಬಲಿಪೀಠಗಳಲ್ಲಿ ಪೀಠ, ಕುಡ್ಯ, ಕಮಲಶಿಲೆ ಮೊದಲಾದ ಭಾಗಗಳನ್ನು ಕಾಣಬಹುದು. ಗುಡಿಯಲ್ಲಿ ಬಲಿಪೀಠಗಳನ್ನು ನಿರ್ದಿಷ್ಟ ಸ್ಥಳಗಳಲ್ಲಿ ಇರಿಸುತ್ತಾರೆ. ಗರ್ಭಗುಡಿಯ





ಹೊರಗೆ ಪ್ರಾಕಾರದ ಒಳಗೆ ಬಲಿಪೀಠಗಳಿರುವುವು. ಗರ್ಭಗುಡಿಯ ಎದುರಿಗಿರುವ ಬಲಿಪೀಠವೇ ಮುಖ್ಯವಾದುದು, ಅದನ್ನು ಪ್ರಧಾನ ಬಲಿಪೀಠವೆನ್ನುತ್ತಾರೆ. ಇದರ ರಚನೆ ಕಲಾತ್ಮಕವಾಗಿ, ಭವ್ಯವಾಗ ಇರುವುದುಂಟು. ಬಲಿಪೀಠದ ಪ್ರಯೋಜನ ಗುಡಿಯಲ್ಲಿ ನೈವೇದ್ಯವಾದಮೇಲೆ ಪರಿವಾರ ದೇವತೆಗಳಿಗೂ ಭೂತಗಳಿಗೂ ಎಡೆಯಿಡುವುದು. ಶಾಸ್ತ್ರಗಳ ಪ್ರಕಾರ, ಗುಡಿಯೆಂದರೆ ಗರ್ಭಗೃಹ, ಅದರ ಮೇಲಿರುವ ವಿಮಾನ ಮತ್ತು ಎದುರಿಗಿರುವ ಬಲಿಪೀಠ. ಇವಷ್ಟೇ ಗುಡಿಯ ಮುಖ್ಯ ವಿವರಗಳು. ಕೆಲವು ಗ್ರಂಥಗಳಂತೂ ದಿಟವಾಗಿ ಗುಡಿಯ ಹರವು ಬಲಿಪೀಠಕ್ಕೆ ಮುಗಿಯುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತವೆ.

*

ನಾಲ್ಕು

ಸಂಕೇತದ ಬಲೆ

ಉಪನಿಷತ್ತುಗಳಲ್ಲಿ 'ಬುಡಮೇಲಾದ ಮರ'ದ ಪ್ರಸ್ತಾಪ ಬರುತ್ತದೆ. ಬೇರುಗಳೆಲ್ಲ ಮೇಲಿದ್ದು ರೆಂಬೆಕೊಂಬೆಗಳು ಕೆಳಗಿರುವ ಅಶ್ವತ್ಥವೃಕ್ಷವನ್ನು ಕಠೋಪನಿಷತ್ತು ಉಲ್ಲೇಖಿಸುತ್ತದೆ. ಇಲ್ಲಿ ಮತ್ತು ಮೇಲಿನ ಬದುಕಿಗೆ ಮರ ಒಂದು ಪ್ರಾಚೀನ ಸಂಕೇತ. ಋಗ್ವೇದದಲ್ಲೇ ಅದರ ಬಳಕೆಯನ್ನು ಕಾಣುತ್ತೇವೆ ; ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ಈ ಸಂಕೇತ ಚಿತ್ರಿತವಾಗಿದೆ. ಜಾನಪದ ನೆಲೆಯಲ್ಲಿ ವೃಕ್ಷಪೂಜೆ ಹರಿದು ಬಂದು ಹಿರಿದಾಗಿ ಹಬ್ಬಿ ನಿಂತಿದೆ. ಮರಗಳು ಪೂರ್ವಜರ ಪ್ರತೀಕಗಳೆಂದೋ, ದೇವತಾ ಮೂರ್ತಿಗಳೆಂದೋ, ಜೀವಸಾನ್ನಿಧ್ಯವೆಂದೋ ಜಾನಪದ ಕಲ್ಪನೆ. ಸಾಮಾನ್ಯವಾಗಿ ಮೇಲೆದ್ದು ಬೆಳೆಯುವ ಮರ ಮತ್ತು ಆಧ್ಯಾತ್ಮಿಕವಾಗಿ ಕೆಳಮುಖವಾಗಿ ಇಳಿಯುವ ಮರ—ಇವೆರಡೂ ಬದುಕಿನ ಎರಡು ಪ್ರವೃತ್ತಿಗಳನ್ನು ಪ್ರತಿನಿಧಿಸುತ್ತವೆ. ಭಾರತೀಯ ದೇವಾಲಯಗಳಿಗೂ ಮರಗಳಿಗೂ ನೆಂಟು ತುಂಬ ಹಳೆಯದು, ಹರಡಿರುವಂಥದು. ದೇವಾಲಯವೇ ಜೀವನವೃಕ್ಷದ ಪ್ರತೀಕ ಎಂದರೂ ಸಲ್ಲುತ್ತದೆ. ಗರ್ಭಗೃಹ ಬೇರುಗಳು ಭೂಮಿಯೊಳ ಗಡಗಿದ್ದು ರೆಂಬೆಕೊಂಬೆಗಳು ಮೇಲೆ ಕಾಣುವ ಸಾಮಾನ್ಯವಾದ ಮರವಾದರೆ, ಗರ್ಭಗೃಹದ ಮೇಲಿರುವ ವಿಮಾನ ಬುಡಮೇಲಾದ ಮರದ ಸಂಕೇತ.

ಗರ್ಭಗೃಹವನ್ನು ಕಟ್ಟುವಾಗ ಗರ್ಭನ್ಯಾಸವೆಂಬ ವಿಧಿ ನಡೆಯುತ್ತದೆ ಎಂಬುದನ್ನು ಈಗಾಗಲೇ ಕಂಡಿದ್ದೇವಷ್ಟೆ. ತಾಮ್ರದ ಕಲಶದಲ್ಲಿ ಗರ್ಭವೆಂದು ತುಂಬುವ ದ್ರವ್ಯಗಳು ಬೆಳವಣಿಗೆಯನ್ನೂ, ಪ್ರಗತಿಯನ್ನೂ, ಸಂಪತ್ತನ್ನೂ ಸೂಚಿಸುವಂಥವು. ಗುಡಿಯೆಂಬ ಮರದ ಬೇರುಗಳು ಅವು. ಮೇಲೆ ಕಾಣಿಸಿಕೊಳ್ಳುವ ಗರ್ಭಗೃಹ ಮೂರು ಹಂತಗಳಲ್ಲಿರುತ್ತದೆ. ತೀರ ಕೆಳಗಿನದು (ಅಡಿಪ್ಪಡೈ) ಪ್ರಕೃತಿಯನ್ನೇ ಸಂಕೇತಿಸುತ್ತದೆ. ಅದರ ಮೇಲೆ 'ತಳ' ; ಅದ ಮೇಲೆ ಪೀಠ. ಬೆಳವಣಿಗೆಯ ಈ ಮೂರು ನೆಲೆಗಳನ್ನೂ 'ಬಂಧ'ವೆಂಬ ವಿಧಿಯಲ್ಲಿ ಒಂದುಗೂಡಿಸುತ್ತಾರೆ. ಇದರ ಮೇಲೆ ಗರ್ಭಗೃಹದ ಅಧಿಷ್ಠಾನ (ಅಡಿಪಾಯ) ನಿಂತಿರುತ್ತದೆ ; ಇದೇ ಗರ್ಭಗೃಹದ ನೆಲವಾಗಿ ಕಾಣಿಸಿಕೊಳ್ಳುತ್ತದೆ.

ಈ ಅಧಿಷ್ಠಾನದ ನಾಲ್ಕೂ ಕಡೆಗಳಿಂದ ಗೋಡೆಗಳು ಎದ್ದುಕೊಳ್ಳುತ್ತವೆ. ಕೆಲವು ಪ್ರಾಚೀನ ದೇವಾಲಯಗಳಲ್ಲಿ ಗರ್ಭಗೃಹ ವೃತ್ತಾಕಾರವಾಗಿರುವುದೂ, ಅಂಡಾಕಾರವಾಗಿರುವುದೂ ಉಂಟು. ವೃತ್ತವೆಂದರೆ ವಿಶ್ವದ ಸಂಕೇತ ; ಗರ್ಭಗೃಹವಾದರೂ ವಿಶ್ವದ ಪ್ರತೀಕವೇ ಅಲ್ಲವೆ ? ಪ್ರಾಚೀನ ಗುಡಿಸಿಲುಗಳೂ ವೃತ್ತಾಕಾರವಾಗಿರುತ್ತಿದ್ದುವು. ವಿಶ್ವದ ಸಂಕೇತಕ್ಕೆ ಆ ಆಕಾರ ಹತ್ತಿರವಾಗಿರುವಷ್ಟು ಈಚೆಗೆ ಸಿದ್ಧವಾಗಿರುವ ಕಟ್ಟಡಗಳ ಆಕಾರ ಇಲ್ಲವೆಂಬುದನ್ನು ಗಮನಿಸಬೇಕು. ಆಗಮಗ್ರಂಥಗಳ ಪ್ರಕಾರ ಬ್ರಹ್ಮಾಂಡದ ನಾಲ್ಕು ಕಡೆಗಳಲ್ಲಿಯೂ ನಾಲ್ಕು ಪ್ರಾಕಾರಗಳಿರುವುದರಿಂದ ಗರ್ಭಗೃಹದ ಆಕಾರವೂ ಚಚ್ಚೌಕವಾಗಿರಬೇಕೆಂಬ ವಿಧಿ ಬಳಕೆಗೆ ಬಂದಿತು ; ಮಹಾದ್ವಾರವು ಪೂರ್ವದಿಕ್ಕಿಗಿರಬೇಕೆಂದೂ ಕೆಲವು ಗ್ರಂಥಗಳು ವಿಧಿಸಿದುವು. 'ಗರ್ಭ'ವನ್ನು ಹುದುಗಿಸಿಟ್ಟ ಸ್ಥಳದಲ್ಲಿಯೇ ಅರ್ಚಾಮೂರ್ತಿಯನ್ನು

ಸ್ಥಾಪನೆ ಮಾಡುವುದು. ದೇವಾಲಯವೆಂಬ ವೃಕ್ಷಕ್ಕೆ ಸಾರವಾದುದು 'ಬೇರ' (ಅರ್ಚಾಮೂರ್ತಿ) ; ಅದರಡಿಯಲ್ಲಿ ತಾನೆ 'ಗರ್ಭ'ವಿರುವುದು ? ಗರ್ಭಗೃಹದ ನಾಲ್ಕು ಗೋಡೆಗಳು ಮೇಲೆದ್ದು ಹರಡುವ ರೆಂಬೆ-ಕೊಂಬೆಗಳು. ಗೋಡೆಗಳ ಮೇಲೆ ನಿಲ್ಲಿಸಿರುವ ಕಲ್ಲು ಚಾವಣಿ 'ಕಪೋತಪಾಳಿ' ಎನಿಸಿಕೊಳ್ಳುತ್ತದೆ. ಮರದ ಮೇಲೆ ಪಾರಿವಾಳಗಳು ಸಾಲಾಗಿ ಕೂಡುವ ಸಂದರ್ಭವನ್ನು ಇಲ್ಲಿ ಸಂಕೇತಿಸಲಾಗಿದೆ. 'ಕಪೋತಪಾಳಿ' ಎಂದರೆ ಪಾರಿವಾಳಗಳ ಸಾಲು ಎಂದರ್ಥ. ಹೀಗೆ ಗರ್ಭ ಗುಡಿಯೆನ್ನುವುದು ಬೆಳೆಯುವ ಮರದ ಪ್ರತೀಕ.

ಮೊದಲು ಗರ್ಭಗೃಹದ ಸೂರು ಚಪ್ಪಟೆಯಾಗಿರುತ್ತಿದ್ದಿತು, ಆದರೆ ಅದರ ಮೇಲ್ಭಾಗದಲ್ಲಿ ಏನನ್ನಾದರೂ ಕಟ್ಟಬೇಕೆಂಬ ಬಯಕೆಯಿದ್ದುದು ಕಾಣಬರುತ್ತದೆ. ಈ ಕಟ್ಟಡವೇ ವಿಮಾನವೆಂದೆವಲ್ಲ. ವಿಮಾನವೆಂಬ ಮಾತಿಗೆ ಎರಡು ಅರ್ಥಗಳು — ಉಪಮೆಯಿಲ್ಲದುದು (ವಿ–ಮಾನ), ಪ್ರಯೋಜನಗಳನ್ನು ತರುವಂಥದು (ವಿಮಿಾಯತೇ). ಎರಡನೆಯ ಅರ್ಥವು. ಸಾಯಣಭಾಷ್ಯದ ಪ್ರಕಾರ, ಅಗ್ನಿಗೆ ಸಂಬಂಧಿಸಿದ್ದು ; ಯಜ್ಞ ಮಾಡುವವರಿಗೆ ಎಲ್ಲ ಪ್ರಯೋಜನಗಳನ್ನೂ ಒದಗಿಸುವ ದೇವತೆ ಅಗ್ನಿ. ಗರ್ಭಗುಡಿಯ ಮೇಲ್ಭಾಗದ ವಿಮಾನವು ಅಗ್ನಿಯ ಭೌತಿಕರೂಪ. ಗುಡಿಯ ಬುನಾದಿ ಪೃಥ್ವೀತತ್ತ್ವವನ್ನು ಸಂಕೇತಿಸಿದರೆ, ಗರ್ಭಗುಡಿಯ ಗೋಡೆಗಳು ಆಪತತ್ತ್ವವನ್ನೂ, ವಿಮಾನವು ಅಗ್ನಿತತ್ತ್ವವನ್ನೂ, ಮೇಲಿರುವ ಕಲಶವು ವಾಯುತತ್ತ್ವವನ್ನೂ ಪ್ರತಿನಿಧಿಸುತ್ತವೆ ; ಕಲಶದ ಮೇಲಿರುವುದೇ ಆಕಾಶತತ್ತ್ವ, ಅದಕ್ಕೆ ಮೂರ್ತರೂಪವಿಲ್ಲ. ಹೀಗೆ ಪಾಂಚಭೌತಿಕವಾದ ಇಡೀ ವಿಶ್ವದ ಪ್ರತೀಕವೇ ಗರ್ಭಗುಡಿ. ಇತರ ಮಹಾಭೂತಗಳನ್ನು ಒಂದೆಡೆ ಕೂಡಿಸಲು ನೆರವಾಗುವ



ಅಗ್ನಿತತ್ತ್ವವೇ ಮುಖ್ಯವಾಗಿ, ವಿಮಾನವು ಅದನು ಪ್ರತಿನಿಧಿಸುವುದು ಸರಿಯೇ. ಗುಡಿಯ ವ್ಯವಸ್ಥೆಯಲ್ಲಿ ವಿಮಾನ ಮುಖ್ಯವಾದ ಭಾಗವಾಗಿರುವುದು ಹೀಗೆ.

ಗರ್ಭಗುಡಿಯ ಮೇಲಿರುವ 'ಕಪೋತಪಾಳಿ'ಯ ಮೇಲೇ ವಿಮಾನ ನಿಲ್ಲುವುದಷ್ಟೆ ವಿಮಾನಕ್ಕೆ ಆಧಾರವಾಗಿ ಚಚ್ಚೌಕವಾದ ಒಂದೇ ಶಿಲಾ ಫಲಕವನ್ನು ಇರಿಸುತ್ತಾರೆ ; ಇದಕ್ಕೆ 'ಬ್ರಹ್ಮರಂಧ್ರಶಿಲೆ' ಯೆಂದು ಹೆಸರು. ಬ್ರಹ್ಮರಂಧ್ರವೆನ್ನುವುದು ನಮ್ಮ ತಲೆಯ ಮೇಲ್ಭಾಗದಲ್ಲಿ



ಪ್ರಾಣವಾಯು ಪರಬ್ರಹ್ಮನೆಡೆಗೆ ಹೋಗಲು ಸಿದ್ಧವಾಗಿರುವ ದಾರಿ ; ನೆತ್ತಿಯ ಬಾಗಿಲು. ಗರ್ಭಗೃಹವನ್ನು ಗುಡಿಯ ತಲೆಯೆಂದು ವ್ಯವಹರಿಸುತ್ತಾರೆ. ಇದರ ಮೇಲೆ ಗರ್ಭಗುಡಿಯ ಜೀವ ಮೇಲಿನ ಸ್ತರಗಳಿಗೆ, ಎಂದರೆ ವಿಮಾನಕ್ಕೆ, ಏರಲು ಈ ಬ್ರಹ್ಮರಂಧ್ರಶಿಲೆ ದಾರಿ. ಈ ಶಿಲೆಯ ನಾಲ್ಕೂ ಮೂಲೆಗಳಲ್ಲಿ ಗರ್ಭಗುಡಿಯಲ್ಲಿರುವ ದೇವರ ವಾಹನವನ್ನೋ ಚಿಹ್ನೆಯನ್ನೋ ಮೂಡಿಸುವ ವಾಡಿಕೆಯಿದೆ. ಮೂಲಬೇರವು ಶಿವನಾದರೆ ಬ್ರಹ್ಮರಂಧ್ರ ಶಿಲೆಯ ಮೂಲೆಗಳಲ್ಲಿ ಕಾಣಿಸಿಕೊಳ್ಳುವುದು ನಂದಿಯ ಪ್ರತಿಮೆಗಳು ; ಶಕ್ತಿಯಾದರೆ ಸಿಂಹಗಳು ; ವಿಷ್ಣುವಾದರೆ ಗರುಡ ಮೂರ್ತಿಗಳು ; ಸುಬ್ರಹ್ಮಣ್ಯ ನಾದರೆ ನವಿಲುಗಳು.

ಸಾಮಾನ್ಯವಾಗಿ ದೇವರ ಕೆಳಗೆ ವಾಹನಗಳಿರುವುವು. ಹೀಗೆ ದೇವರ ಮೇಲೆ ವಾಹನಗಳನ್ನು ಇರಿಸುವುದರ ಅರ್ಥವೇನು ? ಗರ್ಭಗೃಹದಲ್ಲಿರುವ ದೇವರಿಗೆ ದ್ವಾರಪಾಲಕರಂತೆ ಈ ವಾಹನಗಳು



ನಿಲ್ಲುತ್ತವೆ. ಆದರೆ ದ್ವಾರಗಳೆಲ್ಲಿವೆ ? ವಿಮಾನದ ಸ್ವಾರಸ್ಯ ಇರುವುದು ಇಲ್ಲಿಯೇ. ಈ ವಾಹನಗಳು ದ್ವಾರದೇವತೆಗಳಂತೆ ನಿಲ್ಲುವಾಗ ಗರ್ಭಗೃಹಕ್ಕೂ ವಿಮಾನಕ್ಕೂ ನಡುವಣ ನೆಲೆಯಲ್ಲಿ ಇರುತ್ತವೆ. ವಿಮಾನದಿಂದ ಕೆಳಗೆ ಹರಿದು ಬರುವ ಶಕ್ತಿಗಳನ್ನು ಗರ್ಭಗೃಹದೊಳಗೆ ಸಲ್ಲಿಸುವುದು ಇದರ ತಾತ್ಪರ್ಯ. ವಿಮಾನವು ಬುಡ ಮೇಲಾದ ಮರವಲ್ಲವೆ ? ವಿಮಾನದ ಮೈ ಹರಡಿರುವ ರೆಂಬೆಕೊಂಬೆಗಳು ; ಕಳಶ ಬೇರುಗಳು.

ಮೇಲೆ ಹೇಳಿದ ಬ್ರಹ್ಮರಂಧ್ರಶಿಲೆಯ ಮೇಲೆ 'ಗ್ರೀವ' ಎಂದರೆ ಕತ್ತನ್ನು ಅಳವಡಿಸುತ್ತಾರೆ. ಅದರ ಮೇಲೆ ವಿಮಾನದ ಮೈ ಉಬ್ಬಿಕೊಳ್ಳುತ್ತದೆ. 'ಉಪಾನ'ವೆನಿಸಿಕೊಳ್ಳುವ ಕೆಳಗಿನ ಕಲ್ಲು ಹಲಗೆ ಮತ್ತು ತುತ್ತತುದಿಯಲ್ಲಿ ಮೊನಚಾಗಿರುವ 'ಸ್ತೂಪಿ' ಇವೆರಡರ ನಡುವಣ ಭಾಗವನ್ನೇ 'ವಿಮಾನ'ವೆಂದು ಕರೆಯುವುದು. ಮೊದಲಿನ ವಿಮಾನಗಳು ಗರ್ಭಗೃಹದ ವೃತ್ತಾಕಾರವನ್ನನುಸರಿಸಿ ಗುಂಡಾಗಿಯೇ ಇರುತ್ತಿದ್ದುವು. ಒಂದರ ಮೇಲೊಂದರಂತೆ ಹಲವಾರು (ಒಂದರಿಂದ ಹನ್ನೆರಡು) 'ತಳ'ಗಳಲ್ಲಿ ಮೇಲೆದ್ದು ಸಣ್ಣದಾಗುತ್ತ ಸ್ತೂಪಿಯಲ್ಲಿ ಮುಗಿಯುತ್ತಿದ್ದುವು. ಕಾಲಕ್ರಮದಲ್ಲಿ ವಿಮಾನದ ರೂಪ ಬಹುಭುಜಾಕೃತಿಯನ್ನು ತಳೆಯಿತು. ನಾಲ್ಕು ಭುಜಗಳುಳ್ಳವು ಸಾಮಾನ್ಯವಾಗಿ ಕಾಣಸಿಗುತ್ತವೆ. ಆರು ಭುಜಗಳದ್ದು, ಎಂಟು ಭುಜಗಳದ್ದು ಅಪರೂಪವೇನಲ್ಲ. ಹದಿನಾರು ಭುಜಗಳುಳ್ಳ ವಿಮಾನಗಳೂ ಕೆಲವೆಡೆ ಇವೆ. ಮಧುರೆಯ ಕಳ್ಳಲಂಗರ್ ಗುಡಿಯ ವಿಮಾನಕ್ಕೆ ಅರವತ್ತನಾಲ್ಕು ಭುಜಗಳು ! ಈ ಎಲ್ಲ ವಿಮಾನಗಳೂ ಪಿರಮಿಡ್ಡಿನ ಆಕಾರದವು. ಆದರೆ ಮೊದಲಿನ ವೃತ್ತಾಕಾರದ ವಿಮಾನಗಳು ಮೊದಲಿನ ಹುಲ್ಲು ಗುಡಿಸಿಲನ್ನು ಹೋಲುವುವು. ಇಂಥ ಹುಲ್ಲು ಗುಡಿಸಿಲಲ್ಲಿ ನಡುವೆ

ದೊಡ್ಡದೊಂದು ಬಿದಿರುಬೊಂಬನ್ನು ನೆಟ್ಟು ಅದರ ಸುತ್ತ ವೃತ್ತಾಕಾರದಲ್ಲಿ ಇಳಿ ಗೋಪುರವಾಗಿ ಹುಲ್ಲಿನ ಚಾವಣಿಯನ್ನು ಹೆಣೆದಿರುತ್ತಾರೆ. ಮೊದಲ ವಿಮಾನಗಳು ಇದರ ಅನುಕರಣೆಯೇ ಎಂದು ತೋರುತ್ತದೆ. ಮುಂದೆ ವಿಮಾನವು ಯಾವುದೇ ಆಕಾರವನ್ನು ತಲೆದರೂ, ಎಷ್ಟೇ ಭುಜಗಳು ಮೂಡಿಕೊಂಡರೂ ಪಿರಮಿಡ್ಡಿನ ಈ ಆಕೃತಿಯ ಸ್ಥೂಲಛಾಯೆ ಮರೆಯಾಗಲಿಲ್ಲ. ಹಿನ್ನೆಲೆಯಲ್ಲಿರುವ ಪ್ರತಿಮೆ ಬುಡಮೇಲಾದ ಮರದ್ದೇ.

ವಿಮಾನದ ಮೇಲ್ಭಾಗದಲ್ಲಿರುವ 'ಕಳಶ' ಬುಡಮೇಲಾದ ಮರದ ಬೇರಿನಂತೆ. ಶಾಸ್ತ್ರಗ್ರಂಥಗಳ ಪ್ರಕಾರ, ಸಮುದ್ರಮಂಥನ ಕಾಲದಲ್ಲಿ ಸಮುದ್ರದಿಂದ ಮೇಲೆದ್ದು ಬಂದ ಹದಿನಾಲ್ಕು ಅನರ್ಘ್ಯ ರತ್ನಗಳಲ್ಲಿ ಕಲಶವೂ ಒಂದು. ಕಲಶವೆಂದರೆ ಅನುಗ್ರಹದ ಸಂಕೇತವೆಂದು ಪ್ರಸಾದಮಂಡನ ಮೊದಲಾದ ಗ್ರಂಥಗಳಲ್ಲಿ ಬಂದಿರುವ ಒಕ್ಕಣೆ. ಇದಕ್ಕೆ ಮೊದಲಿದ್ದ ಹೆಸರು 'ಕಾಮಕುಂಭ' (ಎಂದರೆ 'ಬಯಕೆಯ ಮಡಕೆ') ಭಾರತೀಯ ದೇಗುಲದ ವಾಸ್ತುಶಿಲ್ಪ ಬೆಳವಣಿಗೆಯಲ್ಲಿ ಈ ವಿವರ ಸುಮಾರು ಇತ್ತೀಚಿನದೇ. ಪ್ರಾಚೀನ ಶಾಸ್ತ್ರಗ್ರಂಥಗಳು ಮೈದಳೆದ ನಂತರವೇ ಬಂದಿತೇನೋ ಎಂಬ ಸಂಶಯವೂ ಸಹಜವೇ. ಪ್ರಾಚೀನ ಕಳಶಗಳ ಬಹುಶಃ ಅಖಂಡಶಿಲಾಮಯವಾಗಿದ್ದುವು. ಉತ್ತರ ಭಾರತದ ಗುಡಿಗಳ ಶಿಖರದ ಮೇಲೆ ಈಗಲೂ 'ಆಮಲಕಸಾರ' ಮೊದಲಾದುವು ಅಖಂಡಶಿಲೆಗಳೇ. ಶಿಖರದ ಮೈಯನ್ನು ದೃಢವಾಗಿ ನಿಲ್ಲಿಸಲು ಇದೊಂದು ವಾಸ್ತುಸಾಧನವಾಗಿ ಬಳಕೆಗೆ ಬಂದಿರಬಹುದು. ತತ್ರಾಪಿ, ನೀಳವಾಗಿ ಎತ್ತರವಾಗಿ ನಿಂತ ಶಿಖರಗಳಿಂದ ಇಂಥದೊಂದು ಸುಭದ್ರವಾದ ಮೇಲ್ಭಾಗ ಅಗತ್ಯವಾಗಿದ್ದಿರಬೇಕು. ಕಳಶಗಳಿಗಾಗಿ ತಾಮ್ರದ ಕೊಡಗಳನ್ನು ಬಳಸುವುದು ಅನಂತರ ಕಾಣಿಸಿಕೊಂಡ

ಪದ್ಧತಿ. ಕೆಲವೊಮ್ಮೆ ಹಿತ್ತಾಳೆಯನ್ನೂ ಕಳಶಕ್ಕಾಗಿ ಬಳಸುವುದುಂಟು. ದೇವಾಲಯವನ್ನು ಕಟ್ಟಿಸಿದವನು ಶ್ರೀಮಂತನಾಗಿದ್ದು ತನ್ನ ಔದಾರ್ಯವನ್ನು ಜಗತ್ತಿಗೆ ತೋರಿಸಬೇಕೆಂದು ಬಯಸಿದಾಗ ಕಳಶಕ್ಕೆ ಬಂಗಾರದ ಮೆರುಗನ್ನು ಹಾಕಿಸುತ್ತಿದ್ದುದೂ ಉಂಟು. ಆದರೆ ಆಗಮ ಗ್ರಂಥಗಳು ತಾಮ್ರದ ಕಳಶಗಳನ್ನೇ ಪ್ರಶಸ್ತವೆಂದು ಸೂಚಿಸುತ್ತವೆ. ವಿಮಾನದ ಮೇಲಿರುವ ಕಳಶವೂ, ಗರ್ಭಗುಡಿಯಲ್ಲಿ ಹುದುಗಿಸಿಟ್ಟಿರುವ 'ಗರ್ಭ'ದ ಕಳಶದಂತೆ, ಕೊಡ ; ಅದರಲ್ಲಿಯೂ ಬೆಳವಣಿಗೆಯನ್ನೂ ಚೈತನ್ಯವನ್ನೂ ಪ್ರತಿನಿಧಿಸುವ ಧಾನ್ಯಗಳನ್ನೂ ನವರತ್ನಗಳನ್ನು ತುಂಬಿರುತ್ತಾರೆ.

ಕಳಶವೆನಿಸಿಕೊಳ್ಳುವ ವಿವರದಲ್ಲಿ ಹಲವಾರು ಭಾಗಗಳು ನಿರ್ದಿಷ್ಟವಾಗಿವೆ. ವಿಮಾನದ ಗಾರೆಗಚ್ಚು ಕಟ್ಟಡದೊಳಗೆ ನಿಲ್ಲಿಸಿದ



मुकुलाग्र
मुकुल
वेदिका
नाल
कुम्भ
कण्ठ
दल



ಕಾಲಾಸರೆ (ಪದಗ್ರಾಹಿ), ದುಂಡಾಗಿರುವ ಮೈಭಾಗ (ಅಂಡ), ಕತ್ತು (ಗ್ರೀವ), ಕಮಲದ ವಿನ್ಯಾಸ (ಪದ್ಮಪಟ್ಟಿಕಾ), ಬಾಯಂಚು (ಕರ್ಣಿಕಾ) ಮತ್ತು ಮೊಗ್ಗು (ಬೀಜಪೂರ) ಇವು ಮುಖ್ಯವಾದುವು. ಕಳಶದ ಆಕಾರವು ಹೂವಿನ ಮೊಗ್ಗಿನಂತೆ ಇರಬಹುದು, ದೀಪದಂತೆ ಇರಬಹುದು, ತೆಂಗಿನಕಾಯಂತೆ ಅಥವಾ ಕೊಡದಂತೆ ಇರಬಹುದು. ಈ ಮೂಲಾಕೃತಿಗಳ ತಾತ್ಪರ್ಯ ಬದುಕಿನ ಸಂಪನ್ಮೂಲ.

ಗಾರೆಗಚ್ಚಿನ ವಿಮಾನದ ಮೇಲೆ ತಾಮ್ರದ ಕಳಶವನ್ನು ಮೂಡಿಸುವ ವಿಧಿ ಸ್ವಾರಸ್ಯವಾದುದು. ಹೀಗೆ ಮೂಡಿಸುವಾಗ ಗಾರೆಗಚ್ಚನ್ನೋ ವಜ್ರಲೇಪವನ್ನೋ ಸಿಮೆಂಟನ್ನೋ ಬಳಸುವುದಿಲ್ಲ. ವಿಮಾನದ ನಟ್ಟನಡುವೆ ಟೊಳ್ಳಾದ ಕೊಳವೆಯೊಂದು ಮೇಲೆದ್ದು ನಿಂತು, ಅದರಲ್ಲಿ ಕಳಶವನ್ನು ತೂರಿಸುತ್ತಾರೆ. ಕಳಶದುದ್ದಕ್ಕೂ ಈ ಕೊಳವೆ ಸಾಗಿ ಹೋಗುತ್ತದೆ. ಧಾನ್ಯಗಳನ್ನೂ ನವರತ್ನಗಳನ್ನೂ ಈ ಕೊಳವೆಯೊಳಗೇ ಇರಿಸಬೇಕು. ಕಳಶದ ಮೈಯೊಳಗೆ ಈ ಕೊಳವೆಯ ಬಾಯನ್ನು ಭದ್ರಪಡಿಸಿ ಅದರ ಮೇಲೆ ಮೊಗ್ಗನ್ನು (ಬೀಜಪೂರವನ್ನು) ಅಳವಡಿಸುವರು.

ಮೊಗ್ಗಿನಲ್ಲಿ ಐದು ವಿವರಗಳು — ತಾವರೆ ಹೂವಿನ ದಳಗಳು ಪೂರಾ ಹೊರಮುಖವಾಗಿ ಚಾಚಿರುವಂತೆ 'ಪೀಠ', ಅದರ ಮೇಲೆ 'ಕಂಠ', ಅದರ ಮೇಲೆ 'ಕುಂಭ', ಅದರ ಮೇಲೆ ಮೇಲ್ಮುಖವಾದ ಹೂವು, ಕಡೆಯಲ್ಲಿ ಚೂಪಾಗಿ ಮುಗಿಯುವ 'ಹೂಮೊಗ್ಗು'. ಮೊಗ್ಗು ಎನ್ನುವುದು ದಿಟವಾಗಿ ಹೂವಿನ ನಡುವಣ ಭಾಗ, ಹೂವಿನ ದಳಗಳು ಬೇರೆಬೇರೆಯಾಗಿ ಸುತ್ತಲೂ ಹರಡಿಕೊಂಡು ಹೊರಚಾಚಿರುತ್ತವೆ. ಮೊಗ್ಗಿನ ಸಂಕೇತ ಹೊಸ ಚೇತನ, ಬೆಳವಣಿಗೆ.



ಕಳಶದೊಳಗೆ ಅಡಗಿರುವ ಅತಿಮುಖ್ಯವಾದ ಸಾಮಗ್ರಿಯೆಂದರೆ 'ಸುವರ್ಣಪುರುಷ' (ಬಂಗಾರದಿಂದ ಮಾಡಿದ ಮನುಷ್ಯನ ಗೊಂಬೆ). ಇದು ಗುಡಿಯ ಜೀವವೆಂದು ನಂಬಿಕೆ. ಕಳಶದ 'ಹೊಟ್ಟೆ'ಯೊಳಗೆ ಸಣ್ಣದೊಂದು ಬೆಳ್ಳಿಯ ಅಥವಾ ತಾಮ್ರದ ಮಂಚವನ್ನು ಇರಿಸಿ ಅದರ ಮೇಲೆ ಅದಕ್ಕೆ ಸರಿಯಾದ ರೇಷ್ಮೆಯ ಸುಪ್ಪತ್ತಿಗೆಯನ್ನು ಹಾಕಿ, ಅದರ ಮೇಲೆ ಈ 'ಸುವರ್ಣಪುರುಷ'ನನ್ನು ಮಲಗಿಸಬೇಕೆಂದು ಶಾಸ್ತ್ರದಲ್ಲಿರುವ ವಿಧಿ. ಈ 'ಸುವರ್ಣಪುರುಷ'ನು ಒಂದು ಕೈಯಲ್ಲಿ ಮೂರು ಧ್ವಜಗಳನ್ನೂ ಮತ್ತೊಂದು ಕೈಯಲ್ಲಿ ತಾವರೆ ಹೂವನ್ನು ಹಿಡಿದು ಅದನ್ನು ಎದೆಗೆ ಆನಿಸಿಕೊಂಡಿರುವಂತೆ ಮಾಡಿರಬೇಕು. ಮಂಚದ ನಾಲ್ಕೂ ಕಡೆಗಳಲ್ಲಿ ನಾಲ್ಕು ಸಣ್ಣ ಬಂಗಾರದ ಅಥವಾ ಬೆಳ್ಳಿಯ ಅಥವಾ ತಾಮ್ರದ ಕಳಶಗಳನ್ನು ಇರಿಸಬೇಕು. ಮಂಚದ ಮೇಲೆ ಮಲಗಿರುವ 'ಸುವರ್ಣಪುರುಷ'ನ ಬಳಿ ತುಪ್ಪ ತುಂಬಿದ ಸಣ್ಣ ಬಂಗಾರದ ಪಾತ್ರೆಯನ್ನು ಇರಿಸಬೇಕು. ಕಳಶದೊಳಗೆ 'ಸುವರ್ಣಪುರುಷ'ನನ್ನು ಸೇರಿಸುವ ವಿಧಿಯನ್ನು 'ಹೃದಯವರ್ಣಕವಿಧಿ'ಯೆಂದು ಕರೆಯುತ್ತಾರೆ. ಅಪರಾಜಿತಪರಿಪೃಚ್ಛಾ ಮತ್ತು ದೀಪಾರ್ಣವ ಎಂಬ ಶಾಸ್ತ್ರಗ್ರಂಥಗಳಲ್ಲಿ ಈ ವಿಧಿಯ ವಿವರಗಳು ದೊರೆಯುತ್ತವೆ.

ಕಳಶದ ರಚನೆಯಲ್ಲಿಯೂ 'ಬುಡಮೇಲಾದ ಮರ'ದ ಸಂಕೇತವನ್ನು ಕಾಣಬಹುದು. ಗರ್ಭಗೃಹದ ಅಡಿಯಲ್ಲಿರುವ 'ಗರ್ಭ'ಕ್ಕೂ ಇದಕ್ಕೂ ಸಾದೃಶ್ಯವಿದೆ. ಎರಡೂ ಸಾಂಕೇತಿಕವಾಗಿ 'ಬೇರು'ಗಳೇ, ಮರವನ್ನು ಬೆಳೆಯಿಸುವ ಭಾಗಗಳು. ಕಳಶದ ಬೇರು ಮೇಲಿದ್ದು ಶಿಖರವೆಂಬ ರೆಂಬೆಕೊಂಬೆಗಳನ್ನು ಕೆಳಗೆ ಹರಡುತ್ತದೆ ; ಗರ್ಭಗೃಹದ 'ಗರ್ಭ' ಸಾಧಾರಣವಾದ ಮರದ ಬೇರಿನಂತೆ ಭೂಮಿಯೊಳಗೆ ಅಡಗಿದ್ದು ರೆಂಬೆಕೊಂಬೆಗಳನ್ನು (ಗರ್ಭಗೃಹದ ಗೋಡೆಗಳನ್ನು)

ಮೇಲೆ ಕಾಣಿಸುತ್ತದೆ 'ಗರ್ಭ', ಮೂಲಬೇರು (ಎಂದರೆ ಗರ್ಭಗುಡಿಯಲ್ಲಿ ಪ್ರಧಾನವಾಗಿರುವ ದೇವರ ವಿಗ್ರಹ), ಕಳಶ ಇವು ಮೂರೂ ಒಂದೇರೇಖೆಯ ಮೇಲಿರಬೇಕು ; ಈ ರೇಖೆಯನ್ನು ದೈವೀ ಚೈತನ್ಯವೆಂದು ನಿರ್ದೇಶಿಸುತ್ತಾರೆ. ಈ ದೈವೀಚೈತನ್ಯವು ಮೇಲೆದ್ದು ಹರಿಯುವಾಗ ಮೂಲಬೇರವಾಗಿ ಮಾರ್ಪಡುತ್ತದೆ, ಗರ್ಭಗೃಹದ ಆಕಾರವಾಗಿ ಹೊರಹೊಮ್ಮುತ್ತದೆ. ಅದು ಕೆಳಗೆ ಹರಿಯುವಾಗ ಕಳಶದ ಮೂಲಕ ಇಳಿದು ವಿಮಾನದ ಮೈಯಲ್ಲಿ ಹೊರಹೊಮ್ಮಿ ಹರಡುತ್ತದೆ. ಗರ್ಭಗೃಹದಡಿಯಲ್ಲಿ ಹುದುಗಿದ್ದಾಗ ಅದರದ್ದು ಗರ್ಭಾವಸ್ಥೆ, ಸುಪ್ತಾವಸ್ಥೆ. ಗರ್ಭಗೃಹದಲ್ಲಿ ಅದು ವ್ಯಕ್ತವಾಗುತ್ತದೆ, ಕಾರ್ಯೋನ್ಮುಖವಾಗುತ್ತದೆ. ಶಿಖರದಲ್ಲಿ ಅದೇ ಚೈತನ್ಯ ಭೌತಿಕನೆಲೆಯನ್ನು ಮೀರಿ ಮೇಲೆದ್ದು ನಿಲ್ಲುತ್ತದೆ ; ಕಳಶದ ತುದಿಯಲ್ಲಿ ಈ ಚೈತನ್ಯ ವಿಶ್ವಚೈತನ್ಯದೊಂದಿಗೆ ಬೆರೆಯುತ್ತದೆ.

ಮನುಷ್ಯನು ದೈವೀಚೈತನ್ಯದೊಂದಿಗೆ ಸಂಬಂಧವನ್ನು ಪಡೆದುಕೊಳ್ಳುವುದು ಭೌತಿಕನೆಲೆಯಿಂದ ಚೈತನ್ಯದ ನೆಲೆಗೆ ಏರುವುದರಿಂದ. ಅದು ಸಾರ್ಥಕವಾಗುವುದು, ಸಫಲವಾಗುವುದು ಅದಕ್ಕೆ ಸರಿಯಾದ ಅವತರಣದಿಂದ — ಚೈತನ್ಯವು ಅವ್ಯಕ್ತವಾಗಿದ್ದುದು ವ್ಯಕ್ತವಾಗಿ ಕೆಳಗಿಳಿಯುವುದರಿಂದ ವಿಮಾನದ ಶಿಖರಾಗ್ರ ದೈವೀಚೈತನ್ಯವನ್ನು ಮೇಲಿರುವ ಅವ್ಯಕ್ತಾಕಾರದಿಂದ ಸಂಗ್ರಹಿಸಿ ವಿಮಾನದ ಭೌತಿಕರೂಪದಲ್ಲಿ ಹರಿಯಬಿಡುತ್ತದೆ. ಇಲ್ಲಿ ವ್ಯಕ್ತವಾದ ಚೈತನ್ಯದ ಆಕಾರವು ಗರ್ಭಗೃಹದಲ್ಲಿ ಇಳಿದು, ಮೂಲಬೇರದಲ್ಲಿ ಕೇಂದ್ರೀಕೃತವಾಗುತ್ತದೆ. ಗರ್ಭಗೃಹವು ಮನುಷ್ಯನ ತಲೆಯಿದ್ದಂತೆ. ಗರ್ಭಗೃಹದ ಮೇಲ್ಭಾಗದಲ್ಲಿರುವ 'ಬ್ರಹ್ಮರಂಧ್ರಶಿಲೆ' ಈ ತಲೆಯ ನೆತ್ತಿಯಿದ್ದಂತೆ, ಚೈತನ್ಯವು 'ಆಜ್ಞಾ'ಚಕ್ರದಿಂದ 'ಸಹಸ್ರಾರ'ಕ್ಕೆ ಹಾದುಹೋಗುವ ದಾರಿಯೇ 'ಬ್ರಹ್ಮರಂಧ್ರ'. ಕಳಶದೊಳಗೆ



ಅಡಗಿಸಿರುವ ಟೊಳ್ಳು ಕೊಳವೆ ಸುಷುಮ್ನಾನಾಡಿಯನ್ನು ಪ್ರತಿನಿಧಿಸುತ್ತದೆ. 'ಗರ್ಭ', ಮೂಲಬೇರ ಮತ್ತು ಕಲಶಗಳನ್ನು ಅಳವಡಿಸಿರುವ ರೇಖೆಯಲ್ಲಿಯೇ ಮನುಷ್ಯಚೈತನ್ಯದ ಉತ್ಥಿತಿ ಮತ್ತು ದೈವೀಚೈತನ್ಯದ ಅವತರಣ ಎರಡನ್ನೂ ಸಾಧಿಸಬಹುದು.

ದೇವಾಲಯವು ಹೀಗೆ ಮಾನುಷೀ ಮತ್ತು ದೈವೀ ಪ್ರವೃತ್ತಿಗಳ ವ್ಯೂಹವನ್ನ ನಿರ್ದೇಶಿಸುತ್ತದೆ. ಮಾನುಷೀಪ್ರವೃತ್ತಿಯು ಊರ್ಧ್ವಗಾಮಿ ಯಾಗುತ್ತದೆ, ದೈವೀಪ್ರವೃತ್ತಿಯು ಅಧೋಗಾಮಿಯಾಗುತ್ತದೆ. ಈ ವ್ಯವಹಾರದಲ್ಲಿ ದೇವರೆದುರು ನಿಂತ ಭಕ್ತ ಪಾಲ್ಗೊಳ್ಳಬೇಕು. ಮೂಲಬೇರದಿಂದ ಹೊರಹೊಮ್ಮುವ ಶಕ್ತಿಕಿರಣಗಳನ್ನು ಭಕ್ತನು ತನ್ನ ಹೃದಯದಲ್ಲಿರುವ ಶ್ರದ್ಧೆಯಿಂದ ಪಡೆದುಕೊಳ್ಳಬಲ್ಲ. ಭಕ್ತಿಯೇ ಈ ಮಾರ್ಪಾಡನ್ನು ಸಾಧಿಸುವುದು. ದೇಗುಲದಲ್ಲಿ ನಡೆಯುವ ಪೂಜೆಯ ವಿವರಗಳು ಈ ಕಲ್ಪನೆಯನ್ನು ಒಳಗೊಳ್ಳುತ್ತದೆ. ಮತ್ತು ಮೂಲಬೇರ ಮತ್ತು ಭಕ್ತ ಇವರ ನಡುವೆ ನಡೆಯುವ ವ್ಯವಹಾರ ವನ್ನು ಸಿದ್ಧಪಡಿಸಲು ನೆರವಾಗುತ್ತವೆ. ಭಕ್ತನಲ್ಲಿ ಉದ್ಬುದ್ಧವಾದ ಕ್ರಿಯೋನ್ಮುಖವಾದ ಚೈತನ್ಯ ; ಮೂಲಬೇರದಲ್ಲಿ ಸುಪ್ತವಾದ ತಟಸ್ಥವಾದ ಚೈತನ್ಯ, ಆರಾಧನೆಯಲ್ಲಿ ಇವೆರಡೂ ಬೆರೆಯುತ್ತವೆ.

ಬುಡಮೇಲಾದ ಮರದ ರೂಪಕವನ್ನು ಉಪನಿಷತ್ತುಗಳು ಬಳಸಿಕೊಂಡಾಗ ಅದರ ತಾತ್ಪರ್ಯವೇನೆಂದರೆ ಜಡ-ಚೇತನಗಳ ಈ ಪ್ರಪಂಚದ ಬೇರುಗಳು ಬ್ರಹ್ಮವಸ್ತುವಿನ ಅವ್ಯಕ್ತ ನೆಲೆಯಲ್ಲಿ ಇವೆಯೆಂಬುದು. ಇಲ್ಲಿ ಪ್ರಕೃತನಾದವನು ಮನುಷ್ಯ ; ಅಜ್ಞಾನ, ಮೋಹ, ಆಸೆ, ಕರ್ಮಗಳ ಜಾಲದಲ್ಲಿ ಸಿಕ್ಕಿಕೊಂಡವನು. ಅವನ ಬೇರುಗಳು ಭೌತಿಕಶರೀರದಾಚೆ ನೆತ್ತಿಯ ಮೇಲ್ಭಾಗದಲ್ಲಿರುವ ಸಹಸ್ರಾರ ಚಕ್ರದಲ್ಲಿ ಅಡಗಿವೆ. ಅವನು ಈ ಬುನಾದಿಯಿಂದ ದೂರ ಸರಿದು ಪ್ರಪಂಚದಲ್ಲೆಲ್ಲ ತನ್ನ ವ್ಯವಹಾರವನ್ನು ರೆಂಬೆಕೊಂಬೆಗಳಂತೆ ಹರಡಿಕೊಳ್ಳುತ್ತಾನೆ. ಅವನ ಕರ್ತವ್ಯವು ತನ್ನ ಬೇರುಗಳನ್ನು ತಾನು ಅರಿತುಕೊಳ್ಳುವುದು ; ತನ್ನ ಇರವಿಗೆ ಅದನ್ನೇ ಆಸರೆಯಾಗಿ ಇರಿಸಿಕೊಳ್ಳುವುದು. ಈ ಪುರುಷಾರ್ಥದ ಸಾಧನೆಯೆಂದರೆ

ಮೇಲೆದ್ದು ಹಾಯುವುದು. ಉತ್ಥಿತಿ. ಇದಕ್ಕನುಗುಣವಾಗಿ ಸಹಸ್ರಾರ ಚಕ್ರದಿಂದ ಶಕ್ತಿಯ ಅವತರಣವಾಗುತ್ತದೆ. ಯೋಗ ಗ್ರಂಥಗಳಲ್ಲಿ ದೇಹಸ್ಥವಾದ ಹಲವಾರು ಚಕ್ರಗಳ ನಿರೂಪಣೆ ಬರುತ್ತದೆ. ಒಂದೊಂದು ಚಕ್ರವನ್ನೂ ಕೆಳಮುಖವಾದ ದಳಗಳುಳ್ಳ ಕಮಲದಂತೆ ಚಿತ್ರಿಸಿಕೊಂಡಿದ್ದಾರೆ. ಇದು ಇರವಿನ ಸಾಮಾನ್ಯ ಸ್ಥಿತಿಯಲ್ಲಿ. ಸಾಧಕನಾದವನು ತನ್ನ ಪ್ರಾಣಶಕ್ತಿಗಳನ್ನು ಸರಿಯಾಗಿ ವ್ಯವಸ್ಥೆ ಮಾಡಿಕೊಂಡು, ದೇಹದಲ್ಲಿ ಚೈತನ್ಯದ ಸಂಚಾರವನ್ನು ಸರಿಪಡಿಸಿಕೊಂಡು ಚಕ್ರಭೇದಕ್ಕೆ ಸಿದ್ಧನಾದಾಗ ಕಮಲದ ದಳಗಳು ಮೇಲುಮುಖವಾಗುತ್ತವೆ. ವಿಮಾನದ ಮೇಲಿರುವ ಕಳಶದಲ್ಲಿ ಕುಂಭದ ಕೆಳಗೆ ಕೆಳಮುಖವಾಗಿ ಹರಡಿಕೊಂಡ ದಳಗಳ ಕಮಲ, ಮೇಲೆ ಮೊಗ್ಗಿನ ಬಳಿ ಮೇಲುಮುಖನಾದ ದಳಗಳು. ದೇವಾಲಯ ವಾಸ್ತುವಿನ್ಯಾಸದ ಹಲವಾರು ವಿವರಗಳಲ್ಲಿ ಈ ದಳಗಳ ಕೆಳಮುಖ, ಮೇಲುಮುಖ ಚಿತ್ರಣ ಕಾಣಸಿಗುತ್ತದೆ. ದಳಗಳು ಮೇಲುಮುಖ ವಾಗಿದ್ದರೆ ಶಿಲ್ಪಿಗಳು ಅದನ್ನು 'ಪದ್ಮವರಿ' ಎಂದೂ, ಕೆಳಮುಖವಾಗಿದ್ದರೆ 'ಕುಮುದವರಿ' ಎಂದೂ ಕರಯುವುದುಂಟು. ಸೂರ್ಯನ ಬೆಳಕಿಗೆ ಕಮಲದ ದಳಗಳು ಮೇಲುಮುಖವಾಗುತ್ತವೆ ; ಚಂದ್ರನು ಕಾಣಿಸಿ ಕೊಂಡಾಗ ಕುಮುದವು ಬೆಳಗುತ್ತದೆ. ದೈವೀ ಅನುಗ್ರಹವು ಸೂರ್ಯ ; ಪುರುಷಪ್ರಯತ್ನವು ಚಂದ್ರ. ಎರಡೂ ಸೇರಿ ಕೆಲಸ ಮಾಡುವುದೇ ಈ ಚಿತ್ರಣದ ತಾತ್ಪರ್ಯ.

ಮನುಷ್ಯನ ದೇಹರಚನೆ ಮತ್ತು ದೇವಾಲಯದ ವಾಸ್ತು ವಿನ್ಯಾಸ ಇವೆರಡರ ನಡುವೆ ಇರುವ ಸಾದೃಶ್ಯ ಶ್ರೀಪ್ರಶ್ನ, ವಿಷ್ಣುತಂತ್ರ, ಶಿಲ್ಪತಂತ್ರ, ವಾತುಲಾಗಮ, ಅಪರಾಜಿತಶಿಲ್ಪ ಮೊದಲಾದ ಗ್ರಂಥಗಳಲ್ಲಿ ಬರುತ್ತದೆ. ಭಕ್ತನು ದೇವಾಲಯಕ್ಕೆ ಹೋಗುವಾಗ ದೇವಾಲಯವು ದೇವರ ದೇಹವೆಂದೇ ಬಗೆಯಬೇಕೆಂದು ಈ ಗ್ರಂಥಗಳು ವಿಧಿಸುತ್ತವೆ.

ಸಾದೃಶ್ಯದ ವಿವರಗಳನ್ನೂ ಎತ್ತಿ ತೋರಿಸುತ್ತವೆ. ಗರ್ಭಗೃಹವು ತಲೆ, ಶಿಖರವು ಶಿಖೆ, ಮಂಡಪಗಳು ದೇಹದ ನಡುವಣ ಭಾಗಗಳು ; ಪ್ರಾಕಾರವು ತೋಳುಗಳು ; ಮಹಾದ್ವಾರವೇ ಕಾಲುಗಳು. ಗರ್ಭಗೃಹ ದೊಳಗಿರುವ ಮೂಲಬೇರವು ಮಂತ್ರಮೂರ್ತಿ ; ಮಂತ್ರಗಳೇ ಮೈದಳೆದು ನಿಂತ ರೂಪ. ಹೀಗೆ ದೇವಾಲಯವು ಭಕ್ತನಿಗೆ ಆರಾಧನಾ ಸಾಧನ, ಪೂಜೆಯ ಒಂದು ವಿಧಾನ. ತಾಲ್ಮೂಡ್ ಗ್ರಂಥದಲ್ಲಿ ''ಅವ್ಯಕ್ತವಾದುದನ್ನು ನೋಡಬಯಸುವೆಯಾದರೆ ವ್ಯಕ್ತವಾದುದನ್ನು ನೋಡು'' ಎಂಬ ವಾಕ್ಯವಿರುವುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳ ಬೇಕು. ಶಾಸ್ತ್ರಗ್ರಂಥಗಳ ತಾತ್ಪರ್ಯವೂ ಇದೇ. ಪರಮೇಶ್ವರಸಂಹಿತವೇ ಮೊದಲಾದ ಕೆಲವು ಗ್ರಂಥಗಳು ದೇಗುಲವನ್ನು ಹೀಗೆ ಬಣ್ಣಿಸುತ್ತವೆ — ಗುಡಿಯ ನೆಲೆಗಟ್ಟು ಪೃಥಿವೀ ; ಗರ್ಭಗುಡಿ ಅಂತರಿಕ್ಷ ; ವಿಮಾನ ಮೇಲುಲೋಕ(ದ್ಯೌಃ) ಸಪ್ತಲೋಕಗಳ ಪ್ರಕ್ರಿಯೆಯಲ್ಲಿ ವಿಮಾನವು ಮೂರು ಲೋಕಗಳನ್ನು ಒಳಗೊಳ್ಳುತ್ತದೆ — ಅಧಿಷ್ಠಾನವು ಜನಲೋಕ, ಕುಂಭವು ತಪೋಲೋಕ, ಸ್ತೂಪಿಯು ಸತ್ಯಲೋಕ.

ದೇವಾಲಯದ ವಾಸ್ತುವಿನ್ಯಾಸವನ್ನು ಮನುಷ್ಯನ ದೇಹರಚನೆ ಯಲ್ಲಿ ಕಾಣಿಸುವ ಕಲ್ಪನೆ ಇನ್ನೂ ಸ್ವಾರಸ್ಯವಾದುದು. ''ದೇಹವೇ ದೇಗುಲ, ದೇಹದೊಳಗಿರುವ ಜೀವವೇ ದೇಗುಲದೊಳಗಿರುವ ದೇವರು'' (ದೇಹೋ ದೇವಾಲಯಃ ಪ್ರೋಕ್ತಃ, ಜೀವೋ ದೇವಃ ಸನಾತನಃ) ಎನ್ನುವ ಮಾತು ಹಲವಾರು ಶಿಲ್ಪ ಶಾಸ್ತ್ರಗ್ರಂಥಗಳಲ್ಲಿ ಬರುತ್ತದೆ. ಶಿಲ್ಪಶಾಸ್ತ್ರದಲ್ಲಿ ದೇವಾಲಯದ ಬೇರೆ ಬೇರೆ ಭಾಗಗಳನ್ನು ನಿರ್ದೇಶಿಸಲು ಬಳಸುವ ಪಾರಿಭಾಷಿಕ ಪದಗಳು ಮನುಷ್ಯನ ದೇಹದ ವಿವಿಧ ಅಂಗಗಳ ಹೆಸರುಗಳೇ ; ಪಾದ, ಜಾನು, ಜಂಘ, ಕುಕ್ಷಿ, ಗ್ರೀವ, ಕಂಧರ, ನಾಸಿಕಾ, ಮುಖ, ಶೀರ್ಷ ಇತ್ಯಾದಿ. ದೇವಾಲಯದ



ನಕ್ಷೆಯನ್ನು ಮಲಗಿರುವ ಮನುಷ್ಯನಂತೆ ಕಲ್ಪಿಸಿಕೊಂಡು, ಅವನ ಕಾಲುಗಳಿರುವೆಡೆ ದ್ವಾರಗೋಪುರ, ಅವನ ಜನನೇಂದ್ರಿಯವಿರುವೆಡೆ ಧ್ವಜಸ್ತಂಭ, ಅವನ ಹೊಟ್ಟೆ ರಂಗಮಂಡಪ, ಹೃದಯ ಅಂತರಾಳ, ಅಥವಾ ಸುಖನಾಸಿ, ತಲೆ ಗರ್ಭಗೃಹ, ಭ್ರೂಮಧ್ಯ (ಹುಬ್ಬುಗಳ ನಡುವೆ ಕೂಡುವೆಡೆ) ಮೂಲಬೇರದ ಪೀಠವೆಂದು ನಿರ್ದೇಶಿಸುತ್ತಾರೆ. ಇನ್ನೊಂದು ನಿರೂಪಣೆಯಲ್ಲಿ ಕತ್ತು ಗರ್ಭಗೃಹ, ತಲೆ ವಿಮಾನ, ಹಣೆ ಮುಖಮಂಡಪ. ಅಲ್ಲಿಂದಲೇ ದೇವರನ್ನು ಕಾಣುವುದು.

ಮನುಷ್ಯನ ಹಣೆಯನ್ನು ಗರ್ಭಗೃಹವೆಂದು ಭಾವಿಸಿ ತಲೆಯ ಮೇಲ್ಭಾಗವನ್ನು ವಿಮಾನವೆಂದು ಕಾಣಿಸುವುದೂ ಉಂಟು. ಹುಬ್ಬುಗಳ

ನಡುವಣ ಸ್ಥಳ ಮೂಲಬೇರದ ಪೀಠ ; ಇದು ಆಜ್ಞಾಚಕ್ರ. ವಿಮಾನದ ಮೇಲಿರುವ ಕಳಶ ನೆತ್ತಿಯ ಮೇಲಿರುವ ಸಹಸ್ರಾರ ಚಕ್ರ. ಮೂಲ ಬೇರದ ಬುಡದಲ್ಲಿರುವ 'ಗರ್ಭ' ಮೂಗಿನ ತುದಿ (ನಾಸಿಕಾಗ್ರ).

ಈ ಸಂದರ್ಭದಲ್ಲಿ ಬಲಿಪೀಠವೆಂಬ ಭಾಗದ ತಾತ್ಪರ್ಯವನ್ನು ಹೇಳಬೇಕು. ಬಲಿಪೀಠವಿಲ್ಲದೆ ಗರ್ಭಗೃಹವಿರದು. ಆಗಲೇ ವಿವರಿಸಿದಂತೆ, ಬಲಿಪೀಠವೆನ್ನುವುದು ಗರ್ಭಗೃಹದ ಎದುರಿಗೆ ಹತ್ತಿರದಲ್ಲೇ ಇರುವ ಸಣ್ಣಕಲ್ಲಿನ ಕಂಬ ; ಅದರ ಮೇಲೇ ಎಡೆಯಿಡುವುದು.



ವಿಷ್ಣುತಿಲಕ, ಮಾನಸಾರ ಮೊದಲಾದ ಗ್ರಂಥಗಳು ಬಲಿಪೀಠವು ಗೋಪುರದ ಹೊರಗೆ ಅಥವಾ ಮೊದಲ ಪ್ರಾಕಾರದ ಹೊರಗೆ ಇರಬೇಕೆನ್ನುತ್ತವೆ. ಸಾಮಾನ್ಯವಾಗಿ ಎಂಟು ಬಲಪೀಠಗಳನ್ನು ಗುಡಿಯ ಸುತ್ತಲೂ ನಿರ್ದಿಷ್ಟಸ್ಥಾನಗಳಲ್ಲಿ ಇರಿಸಬೇಕೆಂಬ ವಿಧಿಯೂ ಇದೆ ; ಪ್ರಧಾನವಾದುದು ಗರ್ಭಗುಡಿಯ ಎದುರು ಇರುತ್ತದೆ. ಇದನ್ನು ಕಲ್ಲಿನಲ್ಲಿ ಕಡೆದಿಡುವುದೇ ವಾಡಿಕೆ ; ಗಾರೆಗಚ್ಚಿನಲ್ಲಿ ಮಾಡುವುದೂ ಉಂಟು. ಮರದ ಬಲಿಪೀಠವಾದರೆ ಅದಕ್ಕೆ ಲೋಹದ ಕವಚವನ್ನು ತೊಡಿಸಬೇಕೆಂದು ಕಾರಣಾಗಮ ಮೊದಲಾದ ಗ್ರಂಥಗಳು ಹೇಳುತ್ತವೆ. ಒಂದು ಕಾಲಕ್ಕೆ ಮಣ್ಣಿನಿಂದ ಮಾಡಿದ ಬಲಿಪೀಠಗಳೇ ವಾಡಿಕೆಯಲ್ಲಿದ್ದುವೆಂದು ಶಿಲ್ಪರತ್ನದಿಂದ ತಿಳಿದು ಬರುತ್ತದೆ.

ಗರ್ಭಗೃಹದ ಪ್ರಮಾಣಕ್ಕೆ $^1/_8$, $^1/_7$ ಅಥವಾ $^1/_5$ ರಷ್ಟು ಬಲಿಪೀಠದ ಪ್ರಮಾಣವಿರಬೇಕೆನ್ನುವ ವಿಧಿ ಕಾಣಬರುತ್ತದೆ. ಬಲಿಪೀಠಗಳ ಗಾತ್ರ, ವಿನ್ಯಾಸಗಳನ್ನನುಸರಿಸಿ ಶ್ರೀಬಂಧ, ಪದ್ಮಬಂಧ, ಶ್ರೀಭದ್ರ, ಸರ್ವತೋಭದ್ರ ಮೊದಲಾದ ವಿಭಾಗಗಳನ್ನು ಸೂಚಿಸುತ್ತಾರೆ. ಬಲಿಪೀಠಕ್ಕೆ ಸಂಬಂಧಿಸಿದ ವಿಧಿಗಳನ್ನು ಕುರಿತು ಮುಂದೆ ಪ್ರಸ್ತಾಪ ಬರುತ್ತದೆ.

ಬಲಿಪೀಠವು ಭಾರತೀಯ ವಾಸ್ತುಶಿಲ್ಪದ ಚೌಕಟ್ಟಿನಲ್ಲಿ ಸೇರಿಕೊಂಡು ಬಂದ ಬಗೆಯನ್ನು ನಿರ್ಧರಿಸುವುದು ಕಷ್ಟ. ಬಹುಶಃ ಇದು ಪ್ರಾಚೀನ ವೈದಿಕಯಜ್ಞದ ಯೂಪದ ಅವಶೇಷ. ಹಲವಾರು ಹಳೆಯ ದೇವಾಲಯಗಳಲ್ಲಿ ಬಲಿಪೀಠ ಇಂದಿಗೂ ಒರಟು ಕಲ್ಲುಗಂಬವಾಗಿಯೇ ಉಳಿದಿದೆ. ಕೆಲವು ವೇಳೆ ಬರಿಯ ಮರದ ಕೊಂಟುಗಳು. ಕೆಲವು ಪ್ರಸಿದ್ಧ ದೇವಾಲಯಗಳಲ್ಲಿ ಎರಡು ಬಲಿಪೀಠಗಳನ್ನು ಒಟ್ಟಿಗೆ ಇರಿಸಿರುವುದನ್ನು ಕಾಣಬಹುದು ; ಅವುಗಳಲ್ಲಿ ಒಂದು ಸರಳವಾಗಿ ಒರಟಾಗಿರುತ್ತದೆ, ಇನ್ನೊಂದು ಕಲಾತ್ಮಕವಾದ ವಿನ್ಯಾಸದಿಂದ ಕೂಡಿ ಭವ್ಯವಾಗಿರುತ್ತದೆ. ಒಂದು ಹಳೆಯದು, ಇನ್ನೊಂದು ಆಮೇಲೆ ಮೂಡಿಕೊಂಡುದು ಎನ್ನಬಹುದು. ಮೊದಲಿಗೆ ಬಲಿಪೀಠವು ಪಶುವಧೆಗೆ ಅಳವಡುವ ಭಾಗವಾಗಿದ್ದಿತೆಂದು ತೋರುತ್ತದೆ. ಹಲವು ಶಾಸ್ತ್ರಗ್ರಂಥಗಳಲ್ಲಿ ಮಾಂಸ, ಅರಿಶಿನಗಳನ್ನು ಕಲೆಸಿ ಬಲಿಪೀಠದ ಮೇಲಿರಿಸಬೇಕೆನ್ನುವ ವಿಧಿಯಿದೆ. ಬಲಿಪೀಠದ ಉಗಮ ಏನೇ ಇರಲಿ, ಅದರ ಅಗತ್ಯ ನಿರ್ವಿವಾದವಾದುದು. ಬಲಿಪೀಠದವರೆಗಿನ ಭಾಗವೇ ದಿಟವಾಗಿ ದೇವಾಲಯದ ಹರವು. ಅದಕ್ಕೆ ಆಚಿನದು ಗೌಣ ; ದೇವಾಲಯವನ್ನು ಕಟ್ಟಿಸಿದ ದಾನಿಯ ಅಪೇಕ್ಷೆಗೆ ಅನುಸಾರವಾಗಿ, ಅವನ ಶ್ರೀಮಂತಿಕೆಗೆ ಅನುಗುಣವಾಗಿ ಮೂಡಿಬರುವುದಷ್ಟೆ, ಶಾಸ್ತ್ರ ವಿಧಿಯ ಅಗತ್ಯವೇನಿಲ್ಲ. ಒಂದು ಶಿಲ್ಪಶಾಸ್ತ್ರಗ್ರಂಥವಂತೂ ಸ್ಪಷ್ಟವಾಗಿ ದೇವಾಲಯದ ಭಾಗಗಳು ಗರ್ಭಗೃಹ, ಮೂಲಬೇರ, ವಿಮಾನ ಮತ್ತು ಬಲಿಪೀಠ ಈ ನಾಲ್ಕೇ ಎಂದು ಹೇಳುತ್ತದೆ. ಮತ್ತೊಂದು ಗ್ರಂಥದಲ್ಲಿ ಬಲಿಪೀಠವು ವಿಮಾನದ ಪ್ರತಿಕೃತಿಯೆಂಬ ವರ್ಣನೆಯಿದೆ.

ಗರ್ಭಗೃಹದ ಮೇಲಿರುವ ವಿಮಾನವೂ ಗರ್ಭಗೃಹದ ಎದುರಿಗಿರುವ ಬಲಿಪೀಠವೂ ವಾಸ್ತವವಾಗಿ ಒಂದೇ ಎಂಬ ಸೂಚನೆ ನಾರಾಯಣಸಂಹಿತೆಯಲ್ಲಿ ಬರುತ್ತದೆ ; ಎರಡರಲ್ಲೂ ದೇವತೆಗಳು

ಕಲೆಯುವರೆಂದು ಇಲ್ಲಿ ಕೊಟ್ಟಿರುವ ಕಾರಣ. ಎರಡರ ಸ್ಥೂಲಾಕಾರವು ಸಮಾನವಾಗಿರುವುದನ್ನು ಗಮನಿಸಬಹುದು. ಆದರೆ ಬಲಿಪೀಠದ ಮೇಲ್ಭಾಗ ತೆರೆದ ಕಮಲದ ವಿನ್ಯಾಸದಲ್ಲಿ ಚಪ್ಪಟೆಯಾಗಿರುತ್ತದೆ, ವಿಮಾನದ ಮೇಲ್ಭಾಗವಾದರೋ ಶಿಖರದ ಸ್ತೂಪಿಯಲ್ಲಿ ಮುಗಿಯುತ್ತದೆ. ವಿಮಾನದಂತೆಯೇ ಬಲಿಪೀಠವೂ ವೃತ್ತಾಕಾರವಾಗಿರುವದುಂಟು, ಚಚೌಕ್ಕವಾಗಿರುವುದುಂಟು, ಬಹುಭುಜಾಕೃತಿಯಲ್ಲಿರುವುದೂ ಉಂಟು.

ಬಲಿಪೀಠದ ಸಂಕೇತವೂ ವಿಮನದ ಸಂಕೇತಕ್ಕಿಂತ ತುಂಬ ಬೇರೆಯಾದುದೇನಲ್ಲ. ವಿಮಾನವು ಮೂಲಬೇರದ ಮೇಲು ನೆಲೆಯಲ್ಲಿದ್ದರೆ, ಬಲಿಪೀಠವು ಎದುರು ನೆಲೆಯಲ್ಲಿರುತ್ತದೆ ; ಚೈತನ್ಯ ಪ್ರವಾಹ ಮೇಲೆ ಹಾಯುವುದು ವಿಮಾನ, ಅಡ್ಡಲಾಗಿ ಹಾಯುವುದು ಬಲಿಪೀಠ. ಭಕ್ತನ ಕಾರ್ಯೋನ್ಮುಖ ಮಾನುಷಚೈತನ್ಯ ಮತ್ತು ಮೂಲ ಬೇರದ ಸುಪ್ತ ದೈವೀ ಚೈತನ್ಯ ಎರಡೂ ಕಲೆಯುವುದು ಬಲಿಪೀಠದಲ್ಲಿ. ದೇವಾಲಯವು ಮನುಷ್ಯ ದೇಹದ ರಚನೆಯನ್ನನು ಸರಿಸಿದೆಯೆಂಬ ಕಲ್ಪನೆಯ ಪ್ರಕಾರ ಬಲಿಪೀಠದ ಸ್ಥಾನ ಹೊಕ್ಕುಳಲ್ಲಿ. ಹೊಕ್ಕುಳು (ನಾಭಿ) ಮನುಷ್ಯನ ಭೌತಿಕ ಇರವಿನ ಕೇಂದ್ರಸ್ಥಾನ. ಹಾಗೆಯೇ ಬಲಿಪೀಠವೂ ದೇವಾಲಯದ ಭೌತಿಕಸ್ವರೂಪದ ಕೇಂದ್ರಸ್ಥಾನ. ಭಕ್ತನು ದೇವಾಲಯದ ಮುಖಮಂಡಪವನ್ನು ಮುಟ್ಟುವ ಮೊದಲು ಬಲಿಪೀಠಕ್ಕೆ ಪ್ರದಕ್ಷಿಣೆ ಮಾಡಬೇಕೆಂಬ ವಿಧಿಯಿದೆ. ಪ್ರದಕ್ಷಿಣೆ ಬರುವುದೆಂದರೆ ಭಕ್ತನು ತನ್ನನ್ನು ಸಮರ್ಪಕವಾಗಿ ಕೇಂದ್ರೀಕರಿಸಿಕೊಂಡು, ಆರಾಧನೆಗೆ ಅಧಿಕಾರವನ್ನು ಪಡೆದುಕೊಳ್ಳುವುದು. ಮೂಲಬೇರದಿಂದ ಹೊರಹೊಮ್ಮುವ ಚೈತನ್ಯಧಾರೆ ಇವನಲ್ಲಿ ಇಳಿಯಬೇಕೆಂದರೆ ಅದಕ್ಕೆ ತಕ್ಕ ಅಧಿಕಾರ ಇರಬೇಕು.

ಬಲಿಪೀಠಕ್ಕೆ ಹೊಂದಿಕೊಂಡಂತೆ ಆದರ ಬಳಿಯೇ ಧ್ವಜಸ್ತಂಭವಿರುತ್ತದೆ. ಎರಡೂ ಒಟ್ಟಿಗೆ ಇರುವುದೇ ವಾಡಿಕೆ. ಗರ್ಭಗೃಹಕ್ಕೂ ಧ್ವಜಸ್ತಂಭಕ್ಕೂ ನಡುವೆ ಬಲಪೀಠವಿರಬೇಕೆಂದು ಕೆಲವು ಶಾಸ್ತ್ರಗ್ರಂಥಗಳು ನಿರ್ದೇಶಿಸುತ್ತವೆ. ಆದರೆ ಸಾಮಾನ್ಯವಾಗಿ ಧ್ವಜಸ್ತಂಭವೇ ಬಲಿಪೀಠಕ್ಕೂ ಗರ್ಭಗೃಹಕ್ಕೂ ನಡುವೆ ಇರುವುದು. ಧ್ವಜಸ್ತಂಭ ನೀಳವಾಗಿ ತೆಳುವಾಗಿ ಸುಮಾರು ಐವತ್ತು ಅಡಿ (ಕೆಲವೊಮ್ಮೆ ಎಂಬತ್ತು ಅಡಿ)ಗಳಷ್ಟು ಎತ್ತರವಾಗಿರುತ್ತದೆ. ಇದನ್ನು ಗುಡಿಯೆದುರು ನೆಡುವ ಪದ್ಧತಿ ಈಚಿನದು ; ತುಂಬ ಪ್ರಾಚೀನ ವಾದುದಲ್ಲ. ಅದು ಬಳಕೆಗೆ ಬಂದ ಕಾಲಕ್ಕೆ ಅದರ ಪ್ರಯೋಜನ ಗರ್ಭಗುಡಿಯಿರುವ ಸ್ಥಳವನ್ನು ನಿರ್ದೇಶಿಸುವುದಷ್ಟೆ. ಈಗಲೂ ಬೀದಿಯ ಮಗ್ಗುಲಲ್ಲಿ ಅಥವಾ ಊರ ನಡುವೆ ಸಣ್ಣದೊಂದು ಗುಡಿಯಿರುವುದು ಇಂಥ ಧ್ವಜಸ್ತಂಭವಿರದಿದ್ದರೆ ಅಥವಾ ಬಾವುಟವಿರದಿದ್ದರೆ ನಮ್ಮ ಗಮನಕ್ಕೆ ಬರುವುದೇ ಇಲ್ಲ. ಅವು ಪವಿತ್ರವಾದ, ಪೂಜೆಗೆ ತಕ್ಕ ಸ್ಥಳಗಳೆಂದು ಜನರಿಗೆ ತಿಳಿಯಪಡಿಸು ವುದೇ ಧ್ವಜಗಳ, ಧ್ವಜಸ್ತಂಭಗಳ ಉದ್ದೇಶ. ಉತ್ತರ ಭಾರತದ ಗುಡಿಗಳಲ್ಲಿ ಶಿಖರದಿಂದಲೇ ಉದ್ದನೆಯ ಮತ್ತು ಹಾರಾಡುವ ಬಾವುಟಗಳನ್ನು ಹಾರಿಸುತ್ತಾರೆ. ಶಾಸ್ತ್ರಗ್ರಂಥಗಳಲ್ಲಿ ಧ್ವಜಸ್ತಂಭವನ್ನು ಮರದಿಂದ ಮಾಡ ಬೇಕೆಂದು ಅಥವಾ ಬಿದಿರ ಬೊಂಬುಗಳಿಂದ ಸಿದ್ಧಪಡಿಸಬೇಕೆಂದು ವಿಧಿಯಿದೆ. ಇಂಥ ಧ್ವಜಸ್ತಂಭಕ್ಕೆ ಬೆಸಸಂಖ್ಯೆ ಯಲ್ಲಿ ಗೆಣ್ಣುಗಳು (ಪರ್ವಗಳು) ಇರುವುದು ವಾಡಿಕೆ ; ಎಪ್ಪತ್ತೈದರವರೆಗೂ ಇರಬಹುದು. ಮರದ ಕಂಬಗಳ ಮೇಲೆ ಲೋಹದ ಕವಚವನ್ನು ತೊಡಿಸುವುದು ದಾನಿಗಳ ಔದಾರ್ಯಕ್ಕೆ ಬಿಟ್ಟದ್ದು ; ಶಾಸ್ತ್ರವಿಧಿಯೇನಲ್ಲ. ಮೊದಲಿಗೆ ಧ್ವಜಸ್ತಂಭವು ಎಂದೂ ಇರಬೇಕಾದ ವ್ಯವಸ್ಥೆಯಾಗಿರಲಿಲ್ಲ ; ದೇವಾಲಯದಲ್ಲಿ ಉತ್ಸವ



ನಡೆಯುವಾಗ ಮಾತ್ರ ಧ್ವಜವನ್ನೇರಿಸಲೆಂದು ಕಂಬವನ್ನು ನಿಲ್ಲಿಸುತ್ತಿದ್ದರು.

ಆದರೆ ಕಾಲಾನುಕ್ರಮದಲ್ಲಿ ದೇವಾಲಯದ ರಚನೆಯಲ್ಲಿ ಧ್ವಜಸ್ತಂಭ ಅನಿವಾರ್ಯವಾದ, ಸ್ಥಿರವಾದ ಭಾಗವಾಗಿ ಮಾರ್ಪಟ್ಟಿತು. ಎತ್ತರವಾದ ಕಲ್ಲುಕಟ್ಟೆಯ ಮೇಲೆ ಮರದ ಕಂಭವನ್ನು ಹಿತ್ತಾಳೆಯ ಅಥವಾ ತಾಮ್ರದ (ಕೆಲವೊಮ್ಮೆ ಬಂಗಾರದ ಮುಲಾಮಿನ) ಕವಚದಿಂದ ಮುಚ್ಚಿ ಗರ್ಭಗೃಹಕ್ಕೆ ಎದುರಾಗಿ ನಿಲ್ಲಿಸಿರುತ್ತಾರೆ. ಇದರ ತುದಿಯಲ್ಲಿ ಗರ್ಭಗೃಹದ ಕಡೆ ಮುಖ ಮಾಡಿದ ಮೂರು ಅಡ್ಡಕಡ್ಡಿಗಳನ್ನೂ ಅಳವಡಿಸಿರುತ್ತಾರೆ. ಮೂರು



ಕಡ್ಡಿಗಳು ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಶಿವರನ್ನು ಸಂಕೇತಿಸುವುದೆಂದು ವಿವರಣೆಯಿದೆ ; ಧರ್ಮ, ಕೀರ್ತಿ, ಸಮಯಗಳನ್ನು ಸೂಚಿಸುವುದೆಂದು ಇನ್ನೊಂದು ವಿವರಣೆ. ಚೋಳ ಮತ್ತು ಪಾಂಡ್ಯರಾಜರ ಕಾಲದಲ್ಲಿ ಧ್ವಜ ಸ್ತಂಭಗಳು ಕಲಾತ್ಮಕವಾದುವು, ಪ್ರಧಾನವಾದುವು, ಧ್ವಜಸ್ತಂಭವು ರಾಜ ಗೌರವವಷ್ಟೆ? ರಾಜರು ತಮ್ಮ ಗೌರವ ಚಿಹ್ನೆಗಳನ್ನು ರಾಜರಿಗೆ ರಾಜನಾದ ದೇವರಿಗೂ ಅಳವಡಿಸಿದುದು ಸಹಜವೇ.

ಧ್ವಜಸ್ತಂಭವು ದೇವಾಲಯದ ಸ್ಥಾಯಿ ವಿವರವೆಂದು ಸಿದ್ಧವಾದಾಗ, ಉತ್ಸವಗಳು ಆರಂಭವಾಗುವಾಗ ಈ ಸ್ತಂಭದ ಮೇಲ್ಭಾಗದಲ್ಲಿ ಬಾವುಟವನ್ನು ಹಾರಿಸುವ ವಾಡಿಕೆ ಶುರುವಾಯಿತು.

ಬಾವುಟ ಅಥವಾ ಧ್ವಜಕ್ಕೆ 'ಮಸೂರಕ' ಎಂದು ಹೆಸರು. ಸಾಮಾನ್ಯವಾಗಿ ಧ್ವಜಸ್ತಂಭಕ್ಕೆ ಬಾವುಟ ಕಟ್ಟಿರುವುದಿಲ್ಲ ; ಬರಿಯ ಕಂಬ (ನಿಷ್ಪತಾಕ). ಅದರ ಪ್ರಯೋಜನ ಗುಡಿಯ ಹರವನ್ನು ಸೂಚಿಸುವುದಷ್ಟೆ. ಉತ್ಸವ ಸಂದರ್ಭದಲ್ಲಿ ಅದು ಸಪತಾಕವಾಗುತ್ತದೆ, ಎಂದರೆ ಅದ ಮೇಲೆ ಬಾವುಟ ಹಾರುತ್ತದೆ. ಪಾಂಚರಾತ್ರ ಸಂಪ್ರದಾಯದ ಹಯಶೀರ್ಷ ಸಂಹಿತೆಯ ಪ್ರಕಾರ, ಧ್ವಜವಿರದ ಪ್ರಾಸಾದ ವ್ಯರ್ಥವಾದುದು. ಈ ಗ್ರಂಥದಲ್ಲಿ ಧ್ವಜವನ್ನು ಕುರಿತು, ಧ್ವಜ ಸ್ತಂಭವನ್ನು ಕುರಿತು ಹಲವಾರು ವಿವರಗಳು ದೊರೆಯುತ್ತವೆ. ಧ್ವಜ ಸ್ತಂಭವು 'ಸರ್ವಕಾಮದ'ವೆಂದು ಅಲ್ಲಿ ಬರುವ ವಿವರಣೆ. ಶಿವಸರ್ವಸ್ವವೆಂಬ ಇನ್ನೊಂದು ಗ್ರಂಥದ ಪ್ರಕಾರ, ಧ್ವಜವು ದೇವರ ಚಿಹ್ನೆ ಅಥವಾ ಧ್ವಜದ ಮೇಲೆ ಗುಡಿಯ ದೇವರ ವಾಹನವಿರಬೇಕು.

ಗ್ರಂಥಗಳಲ್ಲಿ ಧ್ವಜಸ್ತಂಭದ ತಾತ್ಪರ್ಯ, ಸಂಕೇತ ಅಷ್ಟಾಗಿ ಸ್ಪಷ್ಟವಾಗುವುದಿಲ್ಲ, ಅದು ಕಾಲಕ್ರಮದಲ್ಲಿ ತೋರಿಕೊಂಡ ವಿವರ ವೆಂದು ಕಾಣುತ್ತದೆ. ಗುಡಿಗಳೊಂದಿಗೆ ಅರಸರ ಸಂಬಂಧ ಬೆಳೆದಾಗ ವಿಜಯ ಮತ್ತು ಸಂಪತ್ತುಗಳನ್ನು ಸೂಚಿಸುವ ಧ್ವಜವು ಗುಡಿಗೂ ಒದಗಿತೆಂದು ತೋರುತ್ತದೆ. ರಾಜರ ಆಶ್ರಯವನ್ನೂ ಔದಾರ್ಯದ ಕೊಡುಗೆಯನ್ನೂ ಪಡೆದ ಗುಡಿಯ ಮುಂದೆ ಭವ್ಯವಾದ ಧ್ವಜಸ್ತಂಭ ವಿರುತ್ತದೆ ; ಗುಡಿಯ ಹಿರಿಮೆಯನ್ನು ತೋರಿಸುವುದೇ ತಾತ್ಪರ್ಯ. ಗುಡಿಯೂ ಅರಮನೆಯೆಂದೇ ಕಲ್ಪನೆಯಷ್ಟೆ; ರಾಜರಾಜನ ನಿವಾಸ ಸ್ಥಾನವಲ್ಲವೆ ಅದು ?

ಪ್ರಾಸಾದಮಂಡನವೆಂಬ ಗ್ರಂಥವೊಂದು, ಗುಡಿಯೆದುರು ಧ್ವಜಸ್ತಂಭವಿದ್ದರೆ ಅದರಿಂದ ದೇವತೆಗಳಿಗೂ ಪಿತೃಗಳಿಗೂ ತೃಪ್ತಿಯೆಂದೂ ಅವರು ಅಲ್ಲಿ ಸಂತೋಷದಿಂದ ಕಲೆಯುವರೆಂದೂ

ಹೇಳುತ್ತದೆ. ಧ್ವಜವಿರದಿದ್ದರೆ ಅಸುರರೂ, ದೈವಗಳೂ, ಪಿಶಾಚಗಳೂ ಗುಡಿಯೊಳಗೆ ನುಗ್ಗುವುವಂತೆ ! ಧ್ವಜಸ್ತಂಭಗಳಿಗೂ ದೀಪಸ್ತಂಭಗಳಿಗೂ ನಡುವೆ ಇರುವ ನೆಂಟು ಪ್ರಸಿದ್ಧವಾದುದು. ಕೆಲವು ಸಂದರ್ಭಗಳಲ್ಲಿ, ತೀರಿಕೊಂಡ ಪಿತೃಗಳಿಗೆ ದಾರಿ ತೋರಿಸಲು ಎತ್ತರದ ಯಮದೀಪಗಳನ್ನಿರಿಸುವ ಪದ್ಧತಿ ದೇಶದಲ್ಲಿ ಹಲವೆಡೆ ಇದೆ. ಇಂಥದೇ ಸಂಕೇತ ಧ್ವಜಸ್ತಂಭಕ್ಕೂ ಇದ್ದೀತು. ಧ್ವಜಸ್ತಂಭದ ಕೆಳಭಾಗದಲ್ಲಿ ಶಿವನೂ, ನಡುವೆ ಬ್ರಹ್ಮನೂ ಮೇಲ್ಭಾಗದಲ್ಲಿ ವಿಷ್ಣುವೂ ಇರುವರೆಂದು ಪ್ರತೀತಿಯಿದೆ.



ದಕ್ಷಿಣದೇಶದಲ್ಲಿ ಸಂದರ್ಭ ಬಿದ್ದಾಗ ಗುಡಿಯ ಧ್ವಜಸ್ತಂಭಕ್ಕೆ ಧ್ವಜವನ್ನು ಕಟ್ಟುವುದು ವಾಡಿಕೆಯಾದರೆ, ಉತ್ತರದೇಶದ ಗುಡಿಗಳಲ್ಲಿ ಧ್ವಜವು ಸಾಮಾನ್ಯವಾಗಿ ಇದ್ದೇ ಇರುತ್ತದೆ. ಧ್ವಜಸ್ತಂಭವು ಎಷ್ಟುದ್ದ ಇದೆಯೋ ಅಷ್ಟೂ ಉದ್ದ ಬಾವುಟ ಇರಬೇಕೆಂಬ ನಿಯಮ ಅಲ್ಲಿದೆ. ಶಿಖರದ ಮೇಲ್ಭಾಗದಲ್ಲೇ ಧ್ವಜಸ್ತಂಭವನ್ನು ಅಳವಡಿಸುವುದನ್ನು ಅಲ್ಲಿ ವಿಶೇಷವಾಗಿ ಕಾಣಬಹುದು. ಆದರೆ ದಕ್ಷಿಣದೇಶದ ವಿಮಾನಗಳಲ್ಲಿ ಧ್ವಜಸ್ತಂಭವನ್ನು ಅಳವಡಿಸುವ ವ್ಯವಸ್ಥೆಯಿರುವುದಿಲ್ಲ. ಧ್ವಜಸ್ತಂಭವು ಬೇರೆಯಾಗಿ ಗರ್ಭ ಗುಡಿಯಾಚೆ ಇರುವುದೇ ಇಲ್ಲಿ ಪದ್ಧತಿ.

ಸಂಪ್ರದಾಯದಲ್ಲಿ, 'ಧ್ವಜ' ಎನ್ನುವ ಮಾತಿಗೆ ಸಂಕಲ್ಪವೆಂದರ್ಥ. ಬಾವುಟವನ್ನು ಹಾರಿಸುವುದೆಂದರೆ ಯಾವುದಾದರೊಂದು ಕೆಲಸವನ್ನು ಕೈಗೊಂಡು ಮುಗಿಸುವ ನಿರ್ಧಾರ ಮಾಡುವುದು. ಬಾವುಟವನ್ನು ಹಾರಿಸುವುದು ಸೇನೆ ವಿಜಯಕ್ಕಾಗಿ ಹೊರಟಾಗ ಅಲ್ಲವೆ ? ಭಕ್ತನು ಗುಡಿಯೊಳಗೆ ಬರುವಾಗ ತನ್ನ ಆಸುರೀಶಕ್ತಿಗಳೊಂದಿಗೆ ಕಾದಾಡಲು ಸಿದ್ಧನಾಗಿ ಬರುತ್ತಾನೆ ; ಆ ಸಂಕಲ್ಪವನ್ನು ಸ್ಪಷ್ಟಪಡಿಸುವುದು, ನಿರ್ಧಾರವನ್ನು ಅವನ ನೆನಪಿಗೆ ತರುವುದು ಧ್ವಜ. ಸಂಸ್ಕೃತದಲ್ಲಿ 'ಧ್ವಜ'ವೆಂಬ ಪದ ಎದ್ದು ನಿಂತಿರುವುದನ್ನು ಸೂಚಿಸುತ್ತದೆ ; ಎಂದರೆ ಮನುಷ್ಯನ ಆಶೆ, ಆಕಾಂಕ್ಷೆಗಳ ಸೂಚನೆ. ಸಂಸ್ಕೃತ ಕಾವ್ಯಗ್ರಂಥಗಳಲ್ಲಿ ಕಾಮದ ಬಯಕೆಯನ್ನು ವ್ಯಕ್ತಪಡಿಸಲು ಧ್ವಜದ ಪ್ರಯೋಗವಿದೆ ; ಉದ್ಧಟತನ, ಅಹಂಕಾರಗಳೆಂಬ ಅರ್ಥಗಳೂ ಇವೆ. ಮನುಷ್ಯನನ್ನು ಅವನ ಸಾಧಾರಣ ನೆಲೆಯಿಂದ ಮೇಲಿನ ಯಾವುದಾದರೊಂದು ನೆಲೆಗೆ ಎತ್ತುವ ಎಲ್ಲವೂ ಧ್ವಜವೇ. ಮಹಾಭಾರತವು ಧ್ವಜದ ತಾತ್ಪರ್ಯವನ್ನು ಹೇಳುತ್ತ, ದೇವರು ನಮ್ಮೆಲ್ಲರ ಮೇಲಿದ್ದಾನೆಂದೂ ಕೆಳಗಿನ ಗೊಂದಲದಿಂದ ಮೇಲಿದ್ದಾನೆಂದೂ ಸೂಚಿಸುವುದೇ ಧ್ವಜ



ಎನ್ನುತ್ತದೆ. ಭಕ್ತನು ಗುಡಿಯ ಧ್ವಜವನ್ನು ಕಂಡೊಡನೆ ಅದಕ್ಕೆ ತಲೆಬಾಗಿ ತನ್ನ ಸಂಕಲ್ಪವನ್ನು ದೃಢಪಡಿಸಿಕೊಳ್ಳಬೇಕು, ಇದೇ ಧ್ವಜದ ಅರ್ಥ.

ಹೀಗೆ ಭಾರತೀಯ ದೇವಾಲಯವೆಂಬುದು ಸಂಕೇತಗಳ ಜಾಲ. ಮನುಷ್ಯನ ಆಶೋತ್ತರಗಳ ಚೌಕಟ್ಟಿನಲ್ಲಿ ಇದು ಅರ್ಥ ಪೂರ್ಣವಾಗುತ್ತದೆ. ಆದುದರಿಂದಲೇ ಮನುಷ್ಯನ ಭಾವನೆಗಳಲ್ಲಿಯೂ ವ್ಯವಹಾರಗಳಲ್ಲಿಯೂ ಅಚ್ಚಳಿಯದೆ ನಿಂತಿದೆ. ಗುಡಿಯ ಎತ್ತರ-ಅಳತೆಗಳನ್ನೆಲ್ಲ ಹೇಳುವ, ಅಲ್ಲಿ ನಡೆಯಬೇಕಾದ ಪ್ರತಿಷ್ಠೆ , ಉತ್ಸವ ಮೊದಲಾದ ವಿಧಿಗಳನ್ನೆಲ್ಲ ವಿವರಿಸುವ ಶಿಲ್ಪಶಾಸ್ತ್ರಗ್ರಂಥಗಳೇ ಗುಡಿಯ ದಿಟವಾದ ತಾತ್ಪರ್ಯವನ್ನೂ ಸ್ಪಷ್ಟಪಡಿಸಿವೆ —

> ''ಕಲ್ಪಗಳಿಗೆ ಒಲಿದವರು ದೇವರನ್ನು ಅಗ್ನಿಯಲ್ಲಿ ಕಾಣುತ್ತಾರೆ, ಆದರೆ ವಿವೇಕಿಗಳಾದವರು ದೇವರನ್ನು ತಮ್ಮ ಹೃದಯದಲ್ಲೇ ಕಂಡುಕೊಳ್ಳುತ್ತಾರೆ. ಮಂದಬುದ್ಧಿಯವರಿಗೆ ದೇವರು ಪ್ರತಿಮೆಯಲ್ಲಿದ್ದಾನೆ, ತಿಳಿದವರಿಗೆ ಎಲ್ಲೆಲ್ಲೂ ಇದ್ದಾನೆ.''

*

ಐದು

ಸಾಂಪ್ರದಾಯಿಕವಾದ ಚೌಕಟ್ಟು

ದೇವಾಲಯವು ಕಲಾಕೃತಿ. ಅದರಲ್ಲಿ ಮಾನುಷೀ ವಿವರಗಳೂ ಇವೆ. ಅದಕ್ಕೊಂದು ಮೂರ್ತರೂಪವಿದೆ. ದೇಶಕಾಲಗಳ ನಡುವೆ ನಿಂತಿರುವ ರೂಪ ಅದು. ಅದಕ್ಕೊಂದು ಸಂದರ್ಭಶುದ್ಧಿಯೂ ಇದೆ ; ಸಂದರ್ಭದ ಅಗತ್ಯವನ್ನು ಪೂರೈಸುವ ಸಾಧನೆ ಅದು. ಅದೊಂದು ಕಟ್ಟಡವೂ ಹೌದು. ಕಲ್ಪನೆಯೂ ಹೌದು, ಕುಶಲಕಲಾವಿದರೂ, ಸ್ಥಪತಿಗಳೂ ಕಲೆತು, ತಮ್ಮ ಚಾತುರ್ಯವನ್ನು ಅದರಲ್ಲಿ ಸುರಿದು ಸಿದ್ಧಮಾಡುವ ಕಟ್ಟಡ ಇದು. ಅದಕ್ಕೆ ಗಣಿತದ ಅನ್ವಯ ಹೆಚ್ಚು ; ಹಳೆಯ ಶಿಲ್ಪಿಗಳಿಗೆ ತಾಳಮಾನದ ನಚ್ಚು ಅತಿ. ಆದರೆ ಗುಡಿಯ ಕಟ್ಟಡಕ್ಕೆ ಸ್ಫೂರ್ತಿ ಒದಗುವುದು ಧಾರ್ಮಿಕ ಕಲ್ಪನೆಗಳ ಮೂಲದಿಂದ. ಆದುದರಿಂದ ಗುಡಿಗೆ ಆಧ್ಯಾತ್ಮಿಕವಾದ, ಸಾಂಕೇತಿಕವಾದ ಇರವೂ ಇದೆ. ಗುಡಿಯಲ್ಲಿ ಕಾಣಬರುವ ಕಲೆ 'ಪವಿತ್ರಕಲೆ' ; ಮನುಷ್ಯನನ್ನೂ ದೈವೀಶಕ್ತಿಗಳನ್ನೂ ಒಟ್ಟಿಗೆ ಸೇರಿಸುವ ಹದ ಅದರಲ್ಲಿದೆ. ಮನುಷ್ಯನು ಪರದೈವದ ಅಸ್ತಿತ್ವವನ್ನು ತನ್ನಲ್ಲಿಯೇ ಕಂಡುಕೊಳ್ಳುವ, ಅನುಭವಿಸುವ ಸಾಧನಗಳಲ್ಲಿ ದೇವಾಲಯವೊಂದು.

ಭಗವತ್‌ಸಾನ್ನಿಧ್ಯವನ್ನು ಅನುಭವಿಸಲೆಂದೇ ಅಲ್ಲವೆ ಭಕ್ತನು ಗುಡಿಗೆ ಬರುವುದು ? ಅಲ್ಲಿ ಪ್ರಾರ್ಥನೆ ಸಲ್ಲಿಸುವುದು ಗೌಣವಾದ ವಿವರ ; ಪ್ರಾರ್ಥನೆಯನ್ನು ಎಲ್ಲಿಯಾದರೂ ಸಲ್ಲಿಸಬಹುದು.

ಮೇಲಾಗಿ, ಈಗಿನ ಹೆಸರಾಂತ ದೇವಾಲಯಗಳಲ್ಲಿ ನೆಮ್ಮದಿಯಿಂದ ಪ್ರಾರ್ಥನೆ ಮಾಡುವುದು ಅಸಾಧ್ಯವೆಂದು ಅನುಭವವಿರುವ ಎಲ್ಲರೂ ಬಲ್ಲರು. ಆಡಂಬರದಲ್ಲಿ ಕೂಟದಲ್ಲಿ ಪ್ರಾರ್ಥನೆಗೆ ಅನುಕೂಲವಾದ ಮನೋಧರ್ಮ ಮೂಡುವುದು ಕಷ್ಟ. ಭಕ್ತನಿಗೆ ದೈವದ ಇರವನ್ನು ಅನುಭವಿಸುವ ಆಸಕ್ತಿಯಿರದಿದ್ದರೆ, ಗುಡಿಯ ಭೌತಿಕ ವಿವರಗಳನ್ನು ಮೀರಿ ಅವನು ಹೋಗಲಾರ ; ಕಣ್ಣಿಗೆ ಕಾಣುವುದನ್ನು ದಾಟಿ ಹಾಯಲಾರ. ದೇವರನ್ನು ನಂಬಿದಮಾತ್ರಕ್ಕೆ, ಪ್ರಾರ್ಥನೆಯ ಅಗತ್ಯವನ್ನು ಮನಗಂಡಮಾತ್ರಕ್ಕೆ ಏನೂ ಸಿದ್ಧಿಯಾಗುವುದಿಲ್ಲ. ದೈವದ ಇರವನ್ನು ಗುಡಿಯಲ್ಲಿ ನೇರವಾಗಿ ಅನುಭವಿಸುವ ಸಾಮರ್ಥ್ಯವಿದ್ದರೆ ಗುಡಿ ಪವಿತ್ರವಾದ ಸನ್ನಿವೇಶವಾಗುತ್ತದೆ. ಇಲ್ಲವಾದರೆ ಗುಡಿಗೆ ಅರ್ಥವಾಗಲೀ, ಗುಡಿಯಿಂದ ಪ್ರಯೋಜನವಾಗಲೀ ಇರದು.

ದೈವದ ಇರವನ್ನು ಅನುಭವಿಸುವ ಸಾಮರ್ಥ್ಯವು ಪ್ರಯೋಜನಗಳನ್ನು ಪಡೆಯಬೇಕೆಂಬ ಕಾತರದಿಂದ ಮೇಲೇಳುವುದಿಲ್ಲ. ನಮ್ಮ ದೇಶದ ಗುಡಿಗಳಲ್ಲಿ ಹಲವಾರು ಮುಖಗಳಿರುತ್ತವೆ. ಒಂದೊಂದು ಮುಖವೂ ಪ್ರಯೋಜನಗಳ ಬಲೆಯನ್ನು ಕಟ್ಟಿಕೊಂಡಿರುತ್ತದೆ — ಗುಡಿಯು ಕಲೆಗಳ ತೌರ್ಮನೆ, ಆರ್ಥಿಕ ಸಂಸ್ಥೆ, ರಾಜಕಾರಣ ಕ್ಷೇತ್ರ, ಸಾಮಾಜಿಕ ವ್ಯವಸ್ಥೆ, ಔದ್ಯಮಿಕ ಸಂಘ, ಭಂಡಾರ, ಭೋಜನಮಂದಿರ ಇತ್ಯಾದಿ. ಇವೆಲ್ಲವೂ ಗುಡಿಯ ಆಧ್ಯಾತ್ಮಿಕತೆಯನ್ನು ಕುಲಗೆಡಿಸಿವೆ ಅಷ್ಟೆ. ಗುಡಿಯ ವಾತಾವರಣ ಈಗ ಸರಳವೂ ಅಲ್ಲ, ಗಂಭೀರವೂ ಅಲ್ಲ. ಅದರಲ್ಲಿ ಅಲೌಕಿಕಕಳೆಯನ್ನು ಕಾಣುವುದು ಕಷ್ಟ. ಯಾಂತ್ರಿಕ ಜಗತ್ತು ಗುಡಿಯೊಳಗೆ ನುಗ್ಗಿದೆ. ಬಿರುಸಾದ, ಬಿಡುವಿಲ್ಲದ ಬದುಕು ಮತ್ತು ಪ್ರಯೋಜನದ ಗೀಳು ಈ ಎರಡು ಪೆಡಂಭೂತಗಳು ಗುಡಿಯನ್ನು ತಮ್ಮ ಬಾಯೊಳಗೆ ತುರುಕಿಕೊಂಡಿವೆ. ಗುಡಿಯಲ್ಲಿ

ಮೊದಲು ಇರುತ್ತಿದ್ದ ಶಾಂತಿ ಮತ್ತು ಸ್ಥಿರತೆಗಳನ್ನು ಈಗ ಕಾಣಲಾರೆವು. ಮನುಷ್ಯನ ದೃಷ್ಟಿಕೋನವೇ ಮಾರ್ಪಟ್ಟಿದೆ ; ಗುಡಿಯೆಂದರೆ ಈಗ ಬರಿಯ ಕಟ್ಟಡ, ಇನ್ನೂ ಹೀನಾಯವೆಂದರೆ ಅದು ಒಂದು ಕಚೇರಿಯಾಗಿಬಿಟ್ಟಿದೆ.

ಗುಡಿಯ ಪಾವಿತ್ರ್ಯವಿರುವುದು ಅದರ ಕಲೆಗಾರಿಕೆಯಲ್ಲಲ್ಲ, ಅದರಿಂದ ಒದಗುವ ಪ್ರಯೋಜನದಿಂದಲೂ ಅಲ್ಲ ; ಅದರ ಆಧ್ಯಾತ್ಮಿಕತೆಯಲ್ಲಿ. ಭಾರತೀಯ ದೇವಾಲಯಗಳನ್ನು ಕುರಿತ ಶಾಸ್ತ್ರ ಗ್ರಂಥಗಳಲ್ಲಿ ಗುಡಿಯ ಕಟ್ಟಡದ, ಕಟ್ಟೋಣದ ವಿವರಗಳು



ಹಲವಾರು ಬರುತ್ತವೆ, ದಿಟ. ಆದರೆ ಈ ವಿವರಗಳ ಹೊರೆಯಲ್ಲಿ ಗುಡಿಯೆಂಬುದು ಸಾಕ್ಷಾತ್ಕಾರದ ಸಾಧನೆ ಎನ್ನುವ ಮುಖ್ಯ ತತ್ತ್ವ ಮರೆಯಾಗುವುದಿಲ್ಲ. ಭಕ್ತನು ಗುಡಿಗೆ ಹೋಗುವುದು ಹೃದಯದಲ್ಲಿ ಶ್ರದ್ಧೆಯನ್ನು ತುಂಬಿಕೊಂಡು, ಗುಡಿಯಲ್ಲಿ ಭಗವತ್ ಕಾರುಣ್ಯವನ್ನು ಕಾಣುವ ಕಾತರದಿಂದ. ಹೃದಯದಲ್ಲಿ ಶ್ರದ್ಧೆಯಿದ್ದರೆ, ಕಾರುಣ್ಯವನ್ನು ಪಡೆಯುವ ಅಧಿಕಾರ ಒದಗುವುದು. ಈ ಶ್ರದ್ಧೆಗೂ ಗುಡಿಯ ಕಟ್ಟಡದ ಸಂಕೇತಕ್ಕೂ ನೇರವಾದ ನೆಂಟೇನಿಲ್ಲ ; ಅದನ್ನು ಅರಿತುಕೊಂಡರೇ ಶ್ರದ್ಧೆಮೂಡುವುದು ಅಥವಾ ಬಲಿಯುವುದು ಎನ್ನುವ ನಿಯಮವಿಲ್ಲ. ಶ್ರದ್ಧೆಯು ಕೆಲಸ ಮಾಡುವಾಗ ಬೌದ್ಧಿಕ ವ್ಯಾಪಾರವೂ ಇರಬೇಕಾಗಿಲ್ಲ. ಅದಕ್ಕೊಂದು ಅನುಕೂಲವಾದ ಮನೋಧರ್ಮ ಇರಬೇಕಷ್ಟೆ ಪವಿತ್ರವಾದ, ಅಲೌಕಿಕವಾದ ಇರವನ್ನು ಅನುಭವಿಸುವ ಮನೋಧರ್ಮ ಒದಗಲು, ಬೇರೂರಲು, ಸ್ಥಳಶುದ್ಧಿ, ದೇಹಶುದ್ಧಿ, ವಿನಯದ ಭಾವಭಂಗಿಗಳು, ನೈವೇದ್ಯ ಸಮರ್ಪಣೆ ಮುಂತಾದ ವಿವರಗಳನ್ನು ಸಂಪ್ರದಾಯ ವಿಧಿಸುತ್ತದೆ.

ಇವೆಲ್ಲ ಇದ್ದಾಗ, ಭಕ್ತನಿಗೆ ಗುಡಿಯ ಸಂಕೇತ ತಾನಾಗಿ, ನೇರವಾಗಿ, ಅರಿವಿಗೆ ಬರುತ್ತದೆ. ಅದನ್ನು ಮಾತಿನಲ್ಲಿ ಮೂಡಿಸ ಬೇಕಾದ ಅಗತ್ಯವಿಲ್ಲ; ಮಾತಿನಲ್ಲಿ ಮೂಡಿಸುವ ಜಾಣತನ ಇರದಿದ್ದಾಗಲೂ ಅರಿವಿನ ಹಿರಿಮೆಗೇನು ಊನವಿಲ್ಲ. ಕಲ್ಲುಗೊಂಬೆಯೇ ದೇವರೆಂಬ ಭ್ರಮೆ ಅವನನ್ನು ಕಾಡುವುದಿಲ್ಲ. ಗುಡಿಯು ಬರಿಯದೊಂದು ಕಟ್ಟಡವೆಂದೂ ಅವನು ಭಾವಿಸುವುದಿಲ್ಲ. ಗುಡಿಯಲ್ಲಿರುವ ಕಲೆ ಅವನ ಮನಸ್ಸನ್ನು ಚೆಲ್ಲಾಡುವುದಿಲ್ಲ ; ಕುಶಲಕರ್ಮಿ ಅಲ್ಲಿ ನಡೆಸಿರುವ ಸಾಧನೆ, ಗಳಿಸಿರುವ ಸಿದ್ಧಿ ಅವನಿಗೆ ಮುಖ್ಯವೆನಿಸುವುದಿಲ್ಲ. ಈ ಎಡರು ತೊಡರುಗಳನ್ನು ದಾಟಿ ಅವನ ದೃಷ್ಟಿ ಗರ್ಭಗುಡಿಯತ್ತ ಸಾಗುತ್ತದೆ, ಅಲ್ಲಿರುವ ಕಾರುಣ್ಯದ ಸೆಲೆಯನ್ನು ಪಡೆದುಕೊಳ್ಳುವ ಕಾತರ ಅವನಿಗಿರುತ್ತದೆ.

ಆದರೆ ಸಾಂಪ್ರದಾಯದ ಹಿಡಿತ ಸಡಿಲವಾದಾಗ, ಸಂಕೇತದ ಬೌದ್ಧಿಕ ಅರಿವು ಅಗತ್ಯವಾಗುತ್ತದೆ ; ಪ್ರಜ್ಞೆ ಶ್ರದ್ಧೆಯನ್ನು ಬೇರೂರಿಸ ಬೇಕಾಗುತ್ತದೆ. ಪ್ರಾಚೀನ ಪ್ರತಿಮೆಗಳನ್ನು ನಮ್ಮ ಈಗನ ದೃಷ್ಟಿಕೋನ ಗಳಿಂದ ಅರಿತುಕೊಳ್ಳುವ ಹಂಬಲದಿಂದೇನೋ ತೊಂದರೆಯುಂಟು. ನಾವು ವಸ್ತುಗಳಲ್ಲಿ ಬೆರೆತುಕೊಳ್ಳದೆ ಅವನ್ನು ಅರಿತುಕೊಳ್ಳಬೇಕೆನ್ನು ವುದು ತಪ್ಪು, ಹೀಗೆ ಮಾಡುವವರೇ ಹೆಚ್ಚು ಮಂದಿ ! ಹಲವಾರು ಬಗೆಯ ಬೀಗದ ಕೈಗಳನ್ನು ಸಂಗ್ರಹಿಸಿದ ಮಾತ್ರಕ್ಕೇ ಯಾವ ಬಾಗಿಲ ಬೀಗ ತೆರೆಯುತ್ತದೆ ? ಸರಿಯಾದ ಬೀಗದ ಕೈಯನ್ನು ಆರಿಸಿ, ಅದನ್ನು ಬಳಸಿದ ಮೇಲೇ ಅಲ್ಲವೆ ಬಾಗಿಲು ತೆರೆಯಲಾಗುವುದು ? ಅರಿತುಕೊಳ್ಳುವ ಮನೋವೃತ್ತಿ ಸರಿಯಾದುದಾಗಿರಬೇಕು, ಅಧಿಕಾರ ವುಳ್ಳದ್ದಾಗಿರಬೇಕು ; ಒದಗುವ ವಿವರಗಳನ್ನು ತೆರೆದ ಮನಸ್ಸಿನಿಂದ ಪಡೆದುಕೊಳ್ಳುವಂತಿರಬೇಕು. ಆಧುನಿಕಯುಗದಲ್ಲಿ ಮೈದಳೆದ ಮನೋವೃತ್ತಿಯ ಪೂರ್ವಗ್ರಹಗಳೂ ಆಡಂಬರಗಳೂ ನಮ್ಮನ್ನು ಅಡ್ಡದಾರಿಗೆ ಎಳೆಯುವು. ನಮ್ಮಲ್ಲಿ ಸಹಜವಾಗಿ ಮೂಡುವ ಭಾವನೆಗಳನ್ನು ಮರೆಮಾಚದೆ, ವಿನಯವನ್ನು ಮೈದುಂಬಿಸಿಕೊಂಡು, ಅನಂತರ ಅರಿತುಕೊಳ್ಳಬೇಕೆಂಬ ಹಂಬಲ ತಲೆದೋರಿದರೆ ಸರಿ ; ಇಲ್ಲವಾದರೆ, ನಮ್ಮ ಅರಿವು ಆಳವೂ ಆಗುವುದಿಲ್ಲ, ಸಮರ್ಥವೂ ಆಗುವುದಿಲ್ಲ.

ಭಾರತೀಯ ದೇವಾಲಯಗಳ ಹಿನ್ನೆಲೆಯಲ್ಲಿರುವ ಸಂಕೇತ ಗಂಭೀರವಾದುದು, ಗೂಢವಾದುದು, ಎಲ್ಲ ಕಾಲಕ್ಕೂ ಸಮರ್ಪಕ ವಾದುದು. ಈ ಸಂಕೇತಗಳ ಜಾಲ ಅಭಿವ್ಯಕ್ತಿಯನ್ನು ತಳೆಯುವುದು ವಿವಿಧ ವಿನ್ಯಾಸದ ಪ್ರಾದೇಶಿಕ ವಿಕ್ಷೇಪಗಳಲ್ಲಿ, ಕಟ್ಟಡಗಳ ಭೌತಿಕರೂಪದಲ್ಲಿ, ಅಲಂಕರಣದ ಹರವಿನಲ್ಲಿ, ಕುಶಲಕಲೆಗಳ

ಕೈವಾಡದಲ್ಲಿ, ಹೊರಗಿನ ಮತ್ತು ಮೂರ್ತವಾದ ಅಭಿವ್ಯಕ್ತಿಯನ್ನು ತಳೆದ ಸಂಕೇತಗಳನ್ನೇ ಆಯಾ ಕಾಲಗಳ ಮತ್ತು ಪ್ರದೇಶಗಳ ಉಪಾಧಿಯಿಂದ ಪ್ರಕಾರಗಳಾಗಿ ವಿಭಜನೆಮಾಡುತ್ತೇವೆ ; ಈ ಪ್ರಕಾರಗಳು ಯುಗಧರ್ಮದ ಮತ್ತು ಪ್ರಾದೇಶಿಕ ವೈಶಿಷ್ಟ್ಯದ ಲಕ್ಷಣಗಳನ್ನು ತಳೆಯುವುದೆಂದು ತೀರ್ಮಾನಿಸುತ್ತೇವೆ. ಈ ಹೊರಗಿನ ಅಭಿವ್ಯಕ್ತಿ ಮೇಲೆ ತೋರಿಕೊಳ್ಳುವ ಪದರವಷ್ಟೆ ; ಅದರಡಿಯಲ್ಲಿರುವ ವಸ್ತುವನ್ನು ನೋಡುವುದಾದರೆ ಅದಕ್ಕೂ ಪ್ರದೇಶ ಮತ್ತು ಕಾಲಗಳಿಗೆ ಸಂಬಂಧಪಟ್ಟ ವಿಭಜನೆಗೂ ಸಂಬಂಧವಿಲ್ಲ. ಅದರಲ್ಲಿ ಅಡಗಿರುವ ಅಂತಃಸತ್ತ್ವ ಶ್ರದ್ಧೆಯಿಂದ ಬರುವ ಭಕ್ತನ ಗಮನಕ್ಕೆ ಬರುತ್ತದೆ ; ಗುಡಿಯ ಕಟ್ಟಡವನ್ನು ನೋಡಲು ಮಾತ್ರ ಬರುವವನು ಇದನ್ನು ಅರಿತುಕೊಳ್ಳಲಾರ. ಗುಡಿಯು ಊರಿನ ಪ್ರದರ್ಶನ ಕ್ಷೇತ್ರಗಳಲ್ಲೊಂದೆಂದು ಬಗೆದವನಿಗೆ ಬೇಕಾದುದು ಗುಡಿಯ ಹೊರಗಣ ನಿಲುವು ; ತನಗೂ ಗುಡಿಯ ಸತ್ತ್ವಕ್ಕೂ ಸಂಬಂಧವಿದ್ದೀತೆಂದು ಅವನು ಭಾವಿಸುವುದಿಲ್ಲ. ಶ್ರದ್ಧೆಯಿಲ್ಲದೆ ಬರಿಯ ಕುತೂಹಲದಿಂದ ಬರುವವನ ಪಾಲಿಗೆ ಅಂತಸತ್ತ್ವದ ಅರಿವನ್ನು ಕಾಣಿಸದಿರುವುದೇ ಕಲೆಯ ಕೆಲಸ. ಕಲೆ ಎತ್ತಿ ತೋರಿಸುವುದಕ್ಕಿಂತ ಹೆಚ್ಚಾಗಿ ಮರೆಮಾಚುತ್ತದೆಯಲ್ಲವೆ ?

ಗುಡಿಯ ಜೀವಾಳ ಭೌತಿಕವಾಗಿರಲಾರದು ; ಆದರೆ ನೋಡುವ ದೃಷ್ಟಿ ಸರಿಯಾಗಿದ್ದರೆ ಅದು ದಿಟವಾದುದೇ. ಸಾಮಾನ್ಯವಾದ, ಹೊರಗಣ ವ್ಯವಹಾರದಲ್ಲೇ ಮುಳುಗಿರುವ, ಮನುಷ್ಯನ ಮುಖ್ಯ ದೋಷಗಳಲ್ಲಿ ಒಂದೆಂದರೆ, ತೋರಿಕೊಳ್ಳುವುದೇ ದಿಟವಾದುದು ಎಂದು ಬಗೆಯುವುದು. ಅಭಿವ್ಯಕ್ತವಲ್ಲದುದು ಇಲ್ಲವೇ ಇಲ್ಲ, ಅಥವಾ ಇದ್ದರೂ ಅದೇನು ಗಮನಾರ್ಹವಾದುದಲ್ಲ ಎಂದು ಅವನ ವಾದ. ಇಂದ್ರಿಯಗಳಿಗೆ ಗೋಚರವಲ್ಲದುದು ಮನಸ್ಸಿಗೆ

ಗೋಚರವಾಗಬಹುದು ಎನ್ನುವ ಸಂದೇಹ ಅವನನ್ನು ಕಾಡದು ; ಮನಸ್ಸಿನ ತಿಳುವಳಿಕೆಗೂ ಬರದಿದ್ದುದು ಸಾಕ್ಷಾತ್ಕಾರಕ್ಕೆ ಬರಬಹುದು ಎಂದು ಅವನು ಊಹಿಸಲಾರ. ತೋರಿಕೆಯನ್ನುವುದು ದಿಟವಾಗಿರುವುದರ ಮೂರ್ತರೂಪ ಅಷ್ಟೆ ; ದಿಟವಾಗಿರುವುದು ಸಾಕ್ಷಾತ್ಕಾರಕ್ಕೇ ಒಳಪಡುವಂಥದು.

ತೋರಿಕೆಯ ಪ್ರಕಾರವನ್ನು ಒಂದು ಸಾಂಪ್ರದಾಯಿಕವಾದ ಚೌಕಟ್ಟಿನಲ್ಲಿ ಅಡಗಿಸಿಡುವ ಪ್ರಯತ್ನ ಸಹಜವಾದುದು. ದೇವಾಲಯವೆನ್ನುವುದು ಒಂದು ಸಾರ್ವಜನಿಕ ಸಂಸ್ಥೆ ; ಅದರ ಅಗತ್ಯವಿರುವುದು ಸಾಮೂಹಿಕ ನೆಲೆಯಲ್ಲಿ. ಅರ್ಚಕನು ಅಲ್ಲಿ ಆರಾಧನೆಯನ್ನು ನಡೆಸುವುದು ತನಗಾಗಿ ಅಲ್ಲ, ನೆರೆದವರಿಗಾಗಿ. ಈ ಪೂಜೆ 'ಪರಾರ್ಥ'ವಾದುದು. ಮನೆಯಲ್ಲಿ ನಡೆಯುವ ಪೂಜೆ ತನಗಾಗಿಯೇ, ಅದು 'ಸ್ವಾರ್ಥ'. ಭಕ್ತನಿಗೆ ಗುಡಿಯ ಪೂಜೆ ಮನೆಯ ಪೂಜೆಗೆ ಬದಲಾದ ಪೂಜೆಯಲ್ಲ. ಶಾಸ್ತ್ರಗಳು ಮನೆಯ ಪೂಜೆ ಅಗತ್ಯವಾದುದೆಂದೂ (ನಿತ್ಯ), ಗುಡಿಯ ಪೂಜೆ ಸಂದರ್ಭೋಚಿತ ವಾದುದೆಂದೂ (ನೈಮಿತ್ತಿಕ) ವಿಧಿಸುತ್ತವೆ. ಮನೆಯ ಪೂಜೆ ನಡೆಯಲೇಬೇಕು ; ಗುಡಿಗೆ ಹೋದರೆ ಹೋಗಬಹುದು, ಬಿಟ್ಟರೆ ಬಿಡಬಹುದು. ಗುಡಿಯ ಉಗಮವನ್ನು ಕುರಿತು ವಿಷ್ಣುಧರ್ಮೋತ್ತರದಲ್ಲಿ ಸ್ವಾರಸ್ಯವಾದ ವಿವರವೊಂದಿದೆ —

''ಪ್ರಾಚೀನ ಭಾರತೀಯ ಕಲ್ಪನೆಯಂತೆ ಕಾಲವು ಕೃತ, ತ್ರೇತಾ, ದ್ವಾಪರ, ಕಲಿಯೆಂದು ನಾಲ್ಕು ಯುಗಗಳ ಹಂತಗಳಲ್ಲಿ ಅಡಕವಾಗಿದೆ. ಕಲಿಯೆಂದರೆ ಕಪ್ಪುಕಾಲ ; ನಾವು ಈಗ ಇರುವ ಕಾಲ. ಗುಡಿಗಳು ಕಾಣಿಸಿಕೊಂಡುದು ಈ ಯುಗದಲ್ಲೇ. ಕೃತಯುಗದಲ್ಲಿ ಗುಡಿಗಳ ಅಗತ್ಯವಿರಲಿಲ್ಲ, ಏಕೆಂದರೆ ದೇವತೆಗಳು ಮನುಷ್ಯರೊಂದಿಗೆ

ಓಡಿಯಾಡುತ್ತಿದ್ದ ಕಾಲ ಅದು. ಮುಂದಿನ ಯುಗದಲ್ಲಿ, ದೇವತೆಗಳ ಇರವು ಭೂಮಿಯ ಮೇಲೆ ಅಪರೂಪವಾಯಿತು ; ಯಜ್ಞಯಾಗಾದಿಗಳಲ್ಲಿ ಜನರು ಅವರನ್ನು ಕರೆಸಿಕೊಂಡಾಗ ಮಾತ್ರ ಇಲ್ಲಿಗೆ ಬರುತ್ತಿದ್ದರು ; ಬಂದಾಗ ದೇವತೆಗಳಂತೆಯೇ ಇಳಿದು ಬರುತ್ತಿದ್ದರು. ದ್ವಾಪರಯುಗದಲ್ಲಿ ಮನುಷ್ಯರು ಈ ದೇವತೆಗಳ ಪ್ರತಿಕೃತಿಗಳನ್ನು ಮಾಡಿಟ್ಟುಕೊಂಡು ಅರ್ಚಿಸುವುದಷ್ಟೇ ಉಳಿಯಿತು ; ಪ್ರಸನ್ನರಾಗಿ ದೇವತೆಗಳು ಇಳಿದು ಬಂದಾಗಲೂ ತಮ್ಮ ನಿಜರೂಪವನ್ನು ಮರೆಸಿಕೊಂಡು ಬರುತ್ತಿದ್ದರು. ಹೀಗೆ ಮರೆಮಾಚಿಕೊಂಡು ಬಂದು ಭಕ್ತರನ್ನು ಅನುಗ್ರಹಿಸಿ ಹೋಗುತ್ತಿದ್ದರು. ಆಗ ಪೂಜೆಯೆಲ್ಲ ಮನೆಯಲ್ಲಿ ನಡೆಯುತ್ತಿದ್ದುದೇ ; ಗೃಹಾರ್ಚನೆಯೇ. ಕಲಿಯುಗದಲ್ಲಿಯಾದರೋ ಜನರು ಸಾರ್ವಜನಿಕವಾಗಿ ದೇವತೆಗಳಿಗೆ ಗುಡಿಗಳನ್ನು ಕಟ್ಟತೊಡಗಿದರು ; ಅವುಗಳಲ್ಲಿ ಬಿಂಬಗಳನ್ನು ಇರಿಸಿಕೊಂಡು ಪೂಜಿಸತೊಡಗಿದರು. ಆದರೆ ದೇವತೆಗಳು ತಮ್ಮ ನಿಜರೂಪದಲ್ಲಿಯಾಗಲೀ ವೇಷ ಮರೆಸಿಕೊಂಡಾಗಲೀ ಬರುವುದನ್ನು ಬಿಟ್ಟರು. ಆದರೆ ಗುಡಿಗಳನ್ನು ಸರಿಯಾಗಿ ಕಟ್ಟಿ, ವಿಗ್ರಹಗಳನ್ನು ಸರಿಯಾಗಿ ಪ್ರತಿಷ್ಠೆ ಮಾಡಿದಾಗ, ಅವುಗಳಲ್ಲಿ ದೇವತೆಗಳ ಇರವು ವ್ಯಕ್ತವಾಗುತ್ತದೆ. ಪೂಜೆ ಮಾಡುವುದೇ ವೃತ್ತಿಯಾಗಿ ಉಳ್ಳ ಅರ್ಚಕರು ಮಾತ್ರ ಗುಡಿಗಳಲ್ಲಿ ಈ ವಿಗ್ರಹಗಳಿಗೆ ಪೂಜೆ ಮಾಡುವ ಅಧಿಕಾರವುಳ್ಳವರು ; ಅವರು ಮಾಡುವ ಪೂಜೆಯಲ್ಲಿ ಇತರರು ಪಾಲ್ಗೊಳ್ಳಬಹುದಷ್ಟೆ.

ಕಲಿಯುಗದ ಮೊದಲಲ್ಲಿ ದೇವತಾವಿಗ್ರಹಗಳನ್ನು ಋಷಿಗಳು ಪ್ರತಿಷ್ಠೆ ಮಾಡಿದೊಡನೆ ಅಲ್ಲಿ ದೇವತಾ ಸನ್ನಿಧಾನ ಒದಗುತ್ತಿದ್ದಿತು, ಪೂಜೆ-ಪುನಸ್ಕಾರಗಳ ಅವಶ್ಯಕತೆಯಿರಲಿಲ್ಲ. ಆದರೆ ಬರುಬರುತ್ತ ಕಾಲ ಕೆಟ್ಟಾಗ, ದೇವತಾಸನ್ನಿಧಾನವು ನಿತ್ಯಪೂಜೆ, ನೈಮಿತ್ತಿಕ ಉತ್ಸವಗಳು ನಡೆದರೇನೇ ಉಳಿಯುವಂತಾಯಿತು.''

ವಿಷ್ಣುಧರ್ಮೋತ್ತರದ ಈ ವಿವರದಲ್ಲಿ ಸ್ವಾರಸ್ಯವಾದುದೆಂದರೆ ಐತಿಹಾಸಿಕ ಸಂಗತಿಗಳನ್ನೂ ಸಾಂಕೇತಿಕ ವಿವರಣೆಗಳನ್ನೂ ಸೇರಿಸುವುದು. ಮನೆಗಳಲ್ಲಿರುವ ಪೂಜಾಮಂದಿರಗಳಿಗಿಂತ ಈಚಿನವು ಗುಡಿಗಳು. ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲೂ ಮನೆಯ ಪೂಜಾಸ್ಥಳಗಳನ್ನು ಗುರುತಿಸುವುದು ಸಾಧ್ಯ ; ಆದರೆ ಸಾರ್ವಜನಿಕ ದೇವಾಲಯಗಳಿದ್ದ ಕುರುಹಿಲ್ಲ. ಮನುಷ್ಯನು ತನಗೂ ಅತಿಲೌಕಿಕ ವೆನಿಸುವ ಶಕ್ತಿಗಳಿಗೂ ನಡುವೆ ಅಂತರವನ್ನು ಕಲ್ಪಿಸಿಕೊಂಡಾಗಲೇ ಯಕ್ಷಿಣಿ, ಯಾತು (ಜಾದು), ಮಂತ್ರ-ತಂತ್ರ ಮೊದಲಾದ ಕಲಾಪಗಳು ಆರಂಭವಾಗುವುದು ; ಈ ಕಲಾಪಗಳು ಆರಂಭವಾದ ಮೇಲೇ ಗೃಹಪೂಜಾಸ್ಥಾನಗಳು ಮಾಡಿಕೊಳ್ಳುವುದು. ಧಾರ್ಮಿಕ ವಿಕಾಸದ ಅನುಕ್ರಮ ಹಂತಗಳಾಗಿ ಯಾತುಕ್ರಿಯೆಗಳು, ಗೃಹಪೂಜಾ ಸ್ಥಳಗಳು ಮತ್ತು ಸಾರ್ವಜನಿಕ ಗುಡಿಗಳನ್ನು ಗುರುತಿಸಬಹುದು. ಈ ವಿಕಾಸದ ಹಂತಗಳೆಂದರೆ ಒಂದು ಹಂತ ಮುಗಿದು ಮರೆಯಾದ ಮೇಲೆ ಮುಂದಿನ ಹಂತ ಮೊದಲಾಗುತ್ತದೆ ಎಂದರ್ಥವಲ್ಲ. ಮೂರೂ ಹಂತಗಳು ನಮ್ಮ ದೇಶದ ಧಾರ್ಮಿಕ ಜೀವನದಲ್ಲಿ ಒಟ್ಟಿಗೆ ಉಳಿದು ಬಂದಿವೆ ; ಬಹುಕಾಲದಿಂದ ಒಟ್ಟಿಗೇ ಇವೆಯೆಂದರೆ ತಪ್ಪಲ್ಲ. ಇವು ಮೂರೂ ಒಟ್ಟಿಗೆ ಇರುವುದು ಸಾಧ್ಯವಾಗಿರುವುದರ ಕಾರಣ ಮೂರೂ ಸಾಂಕೇತಿಕವಾಗಿರುವುದೇ. ಸಂಕೇತಗಳಾಗಿ ಅವು ಇತಿಹಾಸವನ್ನು ತಿರಸ್ಕರಿಸುವುದಿಲ್ಲ, ಅತಿಕ್ರಮಿಸುತ್ತವೆ.

ಹೀಗೆ ನಮ್ಮ ದೇಶದ ಗುಡಿಗಳು ತುಂಬ ಪ್ರಾಚೀನವಾದ, ಆದರೆ ಇಂದಿಗೂ ಅಚ್ಚಳಿಯದೆ ಉಳಿದುಬಂದಿರುವ ಸಾಂಪ್ರದಾಯಿಕ ಸಂಕೇತದ ನೆಲೆಯಿಂದಲೇ ಎದ್ದುಬಂದುವೆಂಬುದನ್ನು ನಾವು ಮನವರಿಕೆ ಮಾಡಿಕೊಳ್ಳುವುದು ಮುಖ್ಯ. ಈ ಸಂಕೇತದ

ತಾತ್ಪರ್ಯವನ್ನೂ ಅಭಿವ್ಯಕ್ತಿಯನ್ನೂ ಅರಿತುಕೊಳ್ಳದಿದ್ದರೆ ಗುಡಿಯ ಗುಟ್ಟನ್ನು ಬಿಡಿಸಲಾಗುವುದಿಲ್ಲ. ಈ ಸಂಕೇತದ ಅಭಿವ್ಯಕ್ತಿಯಲ್ಲೇ ನಿಂತುಬಿಟ್ಟರೆ, ಗುಡಿ 'ಬೆಳಗುವ ಕತ್ತಲೆ'ಯಷ್ಟೆ ; ಹಾಗಲ್ಲದೆ ಅಭಿವ್ಯಕ್ತಿಯನ್ನು ಬಿಟ್ಟು ತಾತ್ಪರ್ಯವಷ್ಟನ್ನೇ ಹಿಡಿದರೆ ಅದು 'ಮಸುಕಿದ ಬೆಳಕು'. ಸಂಕೇತವು ಪ್ರಕಟವಾಗುವುದು ಅದರ ಅಭಿವ್ಯಕ್ತಿಯಲ್ಲಷ್ಟೇ ಅಲ್ಲ, ತಾತ್ಪರ್ಯದ ದರ್ಶನದಲ್ಲಿಯೂ ಅದು ಹೊರಹೊಮ್ಮುತ್ತದೆ. ಗುಡಿಯ ಚೌಕಟ್ಟಿನಲ್ಲಿ ತಾತ್ಪರ್ಯದ ದರ್ಶನ ಸುಂದರವಾದುದು ಮಾತ್ರವಲ್ಲ, ಆಧ್ಯಾತ್ಮಿಕವಾದುದು

ದೇವಾಲಯದ ಸಂಕೇತದ ಸೌಂದರ್ಯಪ್ರಕಾರವನ್ನೂ ಆಧ್ಯಾತ್ಮಿಕ ಪ್ರಕಾರವನ್ನೂ ಅರಿತುಕೊಳ್ಳಬೇಕೆಂದೇ ಭಾರತೀಯ ಪರಂಪರೆಯಲ್ಲಿ ಗುಡಿಯೆಂಬ ಭಾವನೆ, ಗುಡಿಯ ಸಂವಿಧಾನ, ಗುಡಿಯ ತಾತ್ಪರ್ಯ ಇವನ್ನು ಒಂದು ಚೌಕಟ್ಟಿನಲ್ಲಿ ನಿಲ್ಲಿಸಲಾಗಿದೆ. ಇದನ್ನೇ ನಾವು 'ಆಗಮ' ಎನ್ನುವುದು. 'ಆ–ಗಮ'ವೆಂಬ ಮಾತಿಗೆ 'ತುಂಬ ಹಿಂದಿನಿಂದ ಬಂದುದು' ಎಂದಷ್ಟೇ ಅರ್ಥವಾದರೂ ನಮ್ಮೆಲ್ಲ ಭಾವನೆಗಳ, ಕ್ರಿಯೆಗಳ ಚೌಕಟ್ಟಿನಲ್ಲಿ ನಮ್ಮ ವಿಕಾಸವನ್ನೂ ಸಂತೃಪ್ತಿಯನ್ನೂ ಒದಗಿಸುವ ಸಾಧನವಾಗಿದೆ. ದೇವಾಲಯಗಳನ್ನು ಕುರಿತ ಆಗಮ ಗುಡಿಗಳ ಕಟ್ಟಡ, ಕಟ್ಟೋಣ, ಗುಡಿಗಳಲ್ಲಿ ನಡೆಯುವ ಪೂಜೆ, ಉತ್ಸವಗಲು ಇವನ್ನೆಲ್ಲ ಕುರಿತ ವಿಧಿಗಳನ್ನೂ ವಿವರಣೆಗಳನ್ನೂ ಒಳಗೊಳ್ಳುತ್ತದೆ. ಗುಡಿಯ ಕಟ್ಟಡ ಸೌಂದರ್ಯದ ಕಡೆಗೆ ಒಲಿದರೆ, ಅಲ್ಲಿ ನಡೆಯುವ ಪೂಜೆ ಆಧ್ಯಾತ್ಮದ ಕಡೆಗೆ ಒಲುತ್ತದೆ. ಆದರೆ ಇವೆರಡರ ನಡುವೆ ಇರುವ ಭೇದ ತೀರ ಕೃತಕವಾದುದು ; ಏಕೆಂದರೆ ದಿಟವಾಗಿ ಸೌಂದರ್ಯವನ್ನೂ ಅಧ್ಯಾತ್ಮವನ್ನೂ ಬೇರ್ಪಡಿಸುವುದಾಗದು.

ಭೂಮಿಯನ್ನು ಕಟ್ಟಲು ಸಮರ್ಪಕವಾದ, ಪ್ರಶಸ್ತವಾದ ಸ್ಥಳ, ಕಟ್ಟಲು ತೊಡಗುವ ಮೊದಲು ಮಾಡಬೇಕಾದ ಶುದ್ಧೀಕರಣ, ವಾಸ್ತು ವಿನ್ಯಾಸ, ನಕ್ಷೆ, ಗುಡಿ ಎದುರಿಸಬೇಕಾದ ದಿಕ್ಕು, ಕಟ್ಟಡದ ವಿವಿಧ ಅಂಗಗಳ ಪ್ರಮಾಣ, ಮೂಡಿಸಬಹುದಾದ ಅಲಂಕರಣ, ವಿಗ್ರಹ ಪ್ರತಿಷ್ಠೆ, ಗರ್ಭಗುಡಿಯಲ್ಲಿ ಮತ್ತು ಆವರಣಗಳಲ್ಲಿ ಇರಿಸಬೇಕಾದ ಮೂರ್ತಿಗಳು, ನಿತ್ಯಾರ್ಚನೆಯ ವಿವರಗಳು, ಉತ್ಸವಗಳು, ಮೊದಲಾದ ವಿಷಯಗಳೆಲ್ಲ ಆಗಮಗ್ರಂಥಗಳಲ್ಲಿ ಬರುತ್ತವೆ. ಈ ವಿಚಾರಗಳನ್ನು ಕುರಿತು ಕಟ್ಟಳೆಗಳನ್ನು ವಿಧಿಸುವಾಗ ಹಿನ್ನೆಲೆಯಲ್ಲಿ ಸಂಕೇತದ ಅಭಿವ್ಯಕ್ತಿ ಮತ್ತು ತಾತ್ಪರ್ಯ ಎರಡೂ ಪರಸ್ಪರ ಪೂರಕವೆಂಬ ಭಾವನೆಯಿದೆ.

ಗುಡಿಯು ಸಂಕೇತದ ಮೂರ್ತರೂಪವೆನ್ನುವುದು ಅಲ್ಲಿ ನಡೆಯುವ ವಿಧಿಗಳಲ್ಲಿ ಸ್ಪಷ್ಟವಾಗುತ್ತದೆ. ವಿಧಿ ಎಂದರೆ ಇಲ್ಲಿ ಕ್ರಿಯಾತ್ಮಕವಾದ ಭಾವನೆ. ವಿಧಿಗಳೂ ಕ್ರಿಯೆಗಳೂ ಧ್ಯಾನಕ್ಕೆ ಎಡೆಮಾಡಿಕೊಡುತ್ತದೆ. ಧ್ಯಾನ ಸಾಮಾನ್ಯ ಜೀವನದ ಪ್ರಾಕೃತ ನೆಲೆಯಿಂದ ಚೈತನ್ಯವನ್ನು ಶಾಂತಿಯ ನೆಲೆಗೇರಿಸಲು ಪ್ರಯತ್ನ ಪಡುತ್ತದೆ. ಗುಡಿಯು ವಿಧಿಗಳ ವ್ಯೂಹವೆಂಬುದನ್ನು ಆಗಮ ಎತ್ತಿ ತೋರಿಸುತ್ತದೆ. ಸಂಕೇತವನ್ನು ಸರಿಯಾಗಿ ಅರಿತುಕೊಳ್ಳಲು ಮತ್ತು ಸಂಕೇತವನ್ನು ಕುರಿತು ನಮ್ಮ ಸಮರ್ಪಕವಾದ ಕ್ರಿಯೆಯನ್ನು ನಿರ್ಧರಿಸಲು ಆಗಮ ಸರಿಯಾದ ದೃಷ್ಟಿಕೋನವನ್ನು ಸಿದ್ಧಪಡಿಸುತ್ತದೆ. ನಮ್ಮ ಬದುಕಿನಲ್ಲಿರುವ ಓರೆಕೋರೆಗಳು, ನಮ್ಮ ಗುರಿಯಲ್ಲಿರುವ ಪೂರ್ಣತೆ ಇವೆರಡರ ನಡುವೆ ಸೇತುವೆಯನ್ನು ಕಲ್ಪಿಸುವ ಯತ್ನ ಆಗಮ. ಮನುಷ್ಯ ಜೀವನದಲ್ಲಿ ಕುಂದು ಕೊರತೆಗಳು ಸಹಜವಾದುವು ; ತೀರ ಸಾಧಾರಣವಾದುದರ, ಕುರೂಪವಾದುದರ ನಡುವೆ ನಾವು

ಸಾಮಾನ್ಯವಾಗಿ ಬದುಕುವುದು. ಪೂರ್ಣತೆಯೆನ್ನುವುದು ದೈವೀಗುಣ ; ಅದು ಸುಂದರವೂ ಹೌದು. ಸಾಧಾರಣವಾದುದರಿಂದ ಪೂರ್ಣವಾದುದಕ್ಕೆ, ಕುರೂಪದಿಂದ ಸೌಂದರ್ಯಕ್ಕೆ, ಮನುಷ್ಯತ್ವದಿಂದ ದೇವತ್ವಕ್ಕೆ ಏರಲು ನೆರವಾಗುವುದೇ ವಿಧಿಗಳ ಉದ್ದೇಶ.

ಆಗಮಕ್ಕಿರುವುದು ಮೌಖಿಕವಾದ ಪರಂಪರೆ ; ಕುಶಲಕರ್ಮಿಗಳ (ಶಿಲ್ಪಿಗಳ), ಅರ್ಚಕರ ತಲೆಮಾರುಗಳಲ್ಲಿ ಹರಿದುಬಂದಿರುವ ಪರಂಪರೆ ಇದು. ಮುಂದೊಂದು ಕಾಲದಲ್ಲಿ ಇದು ಗ್ರಂಥಸ್ಥವೂ ಆಯಿತು. ಶಿಲ್ಪಿಗಳ, ಅರ್ಚಕರ ಅನುಕೂಲಕ್ಕೆಂದು ನೂರಾರು ಗ್ರಂಥಗಳು ಸಿದ್ಧವಾದುವು. ಮೌಖಿಕವಾದ ಪರಂಪರೆ ಹೆಚ್ಚೂ ಕಡಮೆ ಪೂರ್ಣವಾಗಿ ನಶಿಸಿಹೋಗಿದೆ ; ಏಕೆಂದರೆ ಶಿಲ್ಪಿಗಳೂ ಅರ್ಚಕರೂ ಇಂದು ದುಃಸ್ಥಿತಿಯಲ್ಲಿದ್ದಾರೆ. ಅದೇ ಕಾರಣಕ್ಕಾಗಿ ಶಿಲ್ಪ ಗ್ರಂಥಗಳೂ ಆಗಮಗ್ರಂಥಗಳೂ ಮೂಲೆಗುಂಪಾಗಿದೆ ; ಯಾರ ಅನುಕೂಲಕ್ಕೆಂದು ಅವು ಬರೆಯಲ್ಪಟ್ಟವೋ ಅವರೇ ಅದನ್ನು ಕಡೆಗಾಣಿಸುತ್ತಿದ್ದಾರೆ. ಜನಸಾಮಾನ್ಯರಿಗಂತೂ ಅವು ಬೇಕಾಗಿಯೇ ಇಲ್ಲ. ಆದರೆ ನಮ್ಮ ಸುದೈವದಿಂದ ಈ ಗ್ರಂಥರಾಶಿಯಲ್ಲಿ ಹಲವಾರು ಗ್ರಂಥಗಳು ಉಳಿದುಬಂದಿವೆ. ಹಲವು ಹಸ್ತಲಿಖಿತವಾಗಿಯೇ ಇವೆ ; ಕೆಲವು ಅಚ್ಚನ್ನು ಕಂಡಿವೆ. ಆಗಮ ಸಾಹಿತ್ಯದಲ್ಲಿ ಮೂರು ಪ್ರಕಾರಗಳನ್ನು ಗುರುತಿಸಬಹುದು — ದಿವ್ಯ, ಮುನಿಪ್ರೋಕ್ತ ಮತ್ತು ಪೌರುಷ ಎಂದು. ದಿವ್ಯವೆಂಬ ಪ್ರಕಾರಕ್ಕೆ ಸೇರುವ ಗ್ರಂಥಗಳು ಅಪೌರುಷೇಯವಾದುವು, ತುಂಬ ಹಿಂದಿನಿಂದ ಬಂದುವು. ಉಳಿದೆರಡು ಪ್ರಕಾರಗಳಿಗೂ ಇವೇ ಆಧಾರ. ಮುನಿಪ್ರೋಕ್ತವೆಂದರೆ ಋಷಿಗಳು ತಮ್ಮ ಪ್ರತಿಭೆಯಿಂದ, ಸಾಕ್ಷಾತ್ಕಾರದಿಂದ, ಅಲೌಕಿಕದರ್ಶನದಿಂದ, ಧ್ಯಾನದಿಂದ ಸಿದ್ಧಪಡಿಸಿದ ಗ್ರಂಥಗಳು. ಈ

ಗ್ರಂಥಗಳು ಈಗ ಬಹುಮಟ್ಟಿಗೆ ಉಪಲಬ್ಧವಿಲ್ಲ. ಪ್ರಚಲಿತವಾಗಿರುವ ಗ್ರಂಥಗಳಲ್ಲಿ ಇವು ಉದ್ಧೃತವಾಗಿವೆ, ಅಷ್ಟೆ. ಮೂರನೆಯ ಪ್ರಕಾರಕ್ಕೆ ಸೇರಿದ ಗ್ರಂಥಗಳು ವಿಶೇಷವಾಗಿ ಮುನಿಪ್ರೋಕ್ತವಾದ ಗ್ರಂಥಗಳಲ್ಲಿ ಬರುವ ಪ್ರಸಕ್ತವಾದ ಭಾಗಗಳ ಸಂಕಲನಗಳು. ಮನುಷ್ಯರೇ ಈ ಸಂಕಲನಗಳನ್ನು ತಮ್ಮ ಬುದ್ಧಿಶಕ್ತಿಯ ಆಧಾರದ ಮೇಲೆ, ತರ್ಕದ ಬಲದಿಂದ ಸಿದ್ಧಪಡಿಸಿರುತ್ತಾರೆ, ಕಾಲಮಾನದ ಪ್ರಕಾರ ಈ ಸಂಕಲನಗಳು ಇತ್ತೀಚಿನವು, ಸಾಮಾನ್ಯವಾಗಿ ಅರ್ಚಕರೂ ಶಿಲ್ಪಿಗಳೂ ಈ ಗ್ರಂಥಗಳನ್ನೇ ಅವಲಂಬಿಸುವುದು.

ಈ ಸಂಮಿಶ್ರ ಪರಂಪರೆಯ ಹಿನ್ನೆಲೆಯಲ್ಲಿರುವ ಭಾವನೆ ದೈವೀತತ್ತ್ವಕ್ಕೆ ಎರಡು ಮುಖಗಳಿವೆ ಎಂಬುದು — ಗೂಢವಾದ, ವ್ಯಾಪಿಸಿರುವ ಮುಖ (ನಿಷ್ಕಲ) ; ಮತ್ತು ವ್ಯಕ್ತವಾದ, ವಿಶಿಷ್ಟವಾದ ಮುಖ (ಸಕಲರೂ ಮೊದಲನೆಯದನ್ನು ಸಾಸಿವೆಯಲ್ಲಿ ಅಡಗಿರುವ ಎಣ್ಣೆ ಸೌದೆಯೊಳಗಿರುವ ಬೆಂಕಿ, ಹಾಲಿನಲ್ಲಿರುವ ಬೆಣ್ಣೆ ಹೂವಿನಲ್ಲಿರುವ ಕಂಪು ಇವಕ್ಕೆ ಹೋಲಿಸುತ್ತಾರೆ) ಅದು ಸರ್ವವ್ಯಾಪಿಯಾಗಿದ್ದು ಮನುಷ್ಯನ ಹೃದಯದಲ್ಲಿ ಅಂತರ್ಯಾಮಿಯಾಗಿ ಅಡಗಿರುತ್ತದೆ. ಅದಕ್ಕೆ ಮೂರ್ತವಾದ ರೂಪವಿರದು, ಅದನ್ನು ಇಂದ್ರಿಯಗಳಿಂದ ಅರಿತುಕೊಳ್ಳಲು ಸಾಧ್ಯವಿಲ್ಲ. ಸಾಮಾನ್ಯವಾದ ಬುದ್ಧಿ ಅದನ್ನು ಗ್ರಹಿಸಲಾರದು. ಎರಡನೆಯದಾದರೋ ಸೌದೆಯಿಂದ ಹೊರಬಂದ ಬೆಂಕಿಯಂತೆ, ಸಾಸಿವೆಯಿಂದ ತೆಗೆದ ಎಣ್ಣೆಯಂತೆ, ಹಾಲನ್ನು ಕಡೆದು ತೆಗೆದ ಬೆಣ್ಣೆಯಂತೆ. ಅದಕ್ಕೆ ಹಲವಾರು ರೂಪಗಳು, ಮನುಷ್ಯನು ಈ ರೂಪಗಳ ಮೂಲಕ ದೈವೀತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲ. ಆದರೆ ಹೀಗೆ ಸಾಕ್ಷತ್ಕರಿಸಿಕೊಳ್ಳಲು ಪೂಜೆಯ ಅಗತ್ಯವಿದೆ. ಮನುಷ್ಯನ ಆಧ್ಯಾತ್ಮಿಕ ಮುನ್ನಡೆಗೆ ನೆರವಾಗುವ ದೈವೀರೂಪಗಳನ್ನು ಸಂಪ್ರದಾಯ ಖಚಿತಗೊಳಿಸಿದೆ ; ಈ ಮುನ್ನಡೆಯ ಕ್ರಮವನ್ನು

ವಿವರಿಸಿದೆ. ಆಗಮ ಗ್ರಂಥಗಳು ವಿಗ್ರಹಗಳನ್ನು ದೈವದ ಸಂಕೇತಗಳೆಂಬಂತೆ ಕಾಣಿಸಿವೆ ; ಅವುಗಳಿಗೆ ಸಲ್ಲಬೇಕಾದ ಅರ್ಚಾಕ್ರಮಗಳನ್ನೂ ವಿವರಿಸಿವೆ. ಬಹುಮಟ್ಟಿಗೆ ಆಗಮಗ್ರಂಥಗಳ ವಿಷಯವ್ಯಾಪ್ತಿ ಇದೇ. ಪ್ರಾಸಂಗಿಕವಾಗಿ, ಅದಕ್ಕೆ ಸಂಬಂಧಪಟ್ಟ ಹಲವು ಸಮಸ್ಯೆಗಳನ್ನು ಅವು ಎತ್ತಿಕೊಳ್ಳುತ್ತವೆ — ವಿಗ್ರಹಗಳನ್ನು ಮಾಡಲು ತಕ್ಕ ಸಾಮಗ್ರಿ, ಉಪಕರಣಗಳು, ವಿಗ್ರಹಗಳನ್ನು ಪ್ರತಿಷ್ಠೆಮಾಡುವ ಬಗೆ, ದೇವಾಲಯಗಳ ಕುಂಭಾಭಿಷೇಕ ಇತ್ಯಾದಿ. ಕೆಲವೊಮ್ಮೆ ಪೂಜೆಯಲ್ಲದೆ ಅದಕ್ಕೆ ಬದಲಾಗಿ ಹೋಮ, ಧ್ಯಾನ (ಯೋಗ), ಜಪ, ಜ್ಞಾನಮಾರ್ಗ ಮೊದಲಾದ ವಿಚಾರಗಳನ್ನೂ ಕುರಿತು ಚರ್ಚೆ ಕಂಡುಬರುತ್ತದೆ.



ವಿಗ್ರಹರೂಪಗಳು ಮತ್ತು ಪೂಜಾಪದ್ಧತಿಗಳು ಈ ಗ್ರಂಥಗಳ ಮುಖ್ಯ ವಿವರಗಳಾಗಿ ಬಂದಾಗ, ಅವುಗಳಲ್ಲಿ ಮತೀಯ ಭೇದ ತಲೆದೋರಿದುದು ಸಹಜವೇ. ಭಾರತದೇಶದಲ್ಲಿ ಸುಮಾರು ಎರಡು ಸಾವಿರ ವರ್ಷಗಳಿಂದ ಉಳಿದುಬಂದಿರುವ ಶೈವ, ಶಾಕ್ತ, ವೈಷ್ಣವ ಮತಗಳು ತಮಗೆ ವಿಶಿಷ್ಟವಾದ ಪರಂಪರೆಗಳನ್ನು ಬೆಳೆಸಿಕೊಂಡು ಬಂದುವು ; ತಮ್ಮದೇ ಆದ ಪೂಜಾಪದ್ಧತಿಗಳನ್ನು ಖಚಿತಗೊಳಿಸಿ ಕೊಂಡುವು. ಆದರೆ ಅವೆಲ್ಲಕ್ಕೂ ಮೂಲಭೂತವಾದ ಚೌಕಟ್ಟು ಒಂದೇ. ಮತ್ತು ಒಂದು ಮತದ ಗ್ರಂಥ ಇತರ ಮತಗಳ ಗ್ರಂಥಗಳಿಂದ ವಿವರಗಳನ್ನು ಬೇಕಾದಂತೆ ಪಡೆದುಕೊಳ್ಳುವ ವಾಡಿಕೆಯಿದೆ ; ಅದರಲ್ಲೇನು ಹಟವಿಲ್ಲ. ನಿದರ್ಶನಕ್ಕೆ ವೈಷ್ಣವರ ವೈಖಾನಸ ಗ್ರಂಥಗಳೂ ಶೈವರ ಆಗಮಗ್ರಂಥಗಳೂ ಪಾಂಚರಾತ್ರಗ್ರಂಥಗಳಲ್ಲಿನ ವಿಧಿಗಳಲ್ಲಿ ಹಲವನ್ನು ತಂತಮ್ಮ ಗ್ರಂಥಗಳಲ್ಲಿ ಸೇರಿಸಿಕೊಂಡಿವೆ. ದೈವದ ಸಾನ್ನಿಧ್ಯವನ್ನು ಬಯಸುವಾಗ ಮತೀಯ ಪಕ್ಷಪಾತ ಅನುಚಿತ, ಅಪ್ರಸ್ತುತ, ಅನಗತ್ಯ.

*

ಆರು

ಗುಡಿಯೊಂದು ಮಂಡಲ

ಗುಡಿಯೇ ಪವಿತ್ರವಾದ ತಾಣವೆಂದು ನಂಬಿಕೆ ಅದರೊಳಗಿರುವ ಅರ್ಚಾಮೂರ್ತಿ ಇನ್ನಷ್ಟು ಹೆಚ್ಚಿನ ಪಾವಿತ್ರ್ಯವನ್ನು ಒದಗಿಸಿಕೊಡುವ ಸಾಧನ. ಗರ್ಭಗುಡಿ ಬರಿದಾಗಿರುವ ಹಲವು ಪ್ರಾಚೀನ ಗುಡಿಗಳಿವೆ ; ಅವುಗಳಲ್ಲಿ ಯಾವ ಕಾಲಕ್ಕೂ ಗರ್ಭಗುಡಿಯಲ್ಲಿರಬೇಕಾದ ಅರ್ಚಾಮೂರ್ತಿ ಇದ್ದಿರಲಾರದು. ಮತ್ತೆ ಹಲವಾರು ಗುಡಿಗಳಲ್ಲಿ ಈಗ ಕಾಣಬರುವ ಅರ್ಚಾಮೂರ್ತಿಗಳು ಮೊದಲು ಅಲ್ಲಿದ್ದವಲ್ಲ, ಅವಕ್ಕೆಂದು ಕಟ್ಟಿದ ಗುಡಿಗಳಂತೆ ತೋರುವುದಿಲ್ಲ. ಗರ್ಭಗುಡಿಯ ಪ್ರಮಾಣಕ್ಕೂ ಮೂರ್ತಿ ಪ್ರಮಾಣಕ್ಕೂ ಆಗಮದಲ್ಲಿ ಕಂಡುಬರುವ ಸಂಬಂಧವನ್ನು ಇಲ್ಲಿ ಕಾಣಲಾರೆವು ; ಕಟ್ಟಡದ ವಿನ್ಯಾಸಕ್ಕೂ ಮೂರ್ತಿ ಲಕ್ಷಣಕ್ಕೂ ವಿರಸ ಹಲವಾರು ಗುಡಿಗಳಲ್ಲಿ ಕಂಡು ಬರುತ್ತದೆ. ಎಂದ ಮೇಲೆ ಗರ್ಭಗುಡಿಯನ್ನು ಸಿದ್ಧಪಡಿಸುವಾಗ ಕಲ್ಪಿಸಿಕೊಂಡ ಮೂರ್ತಿಯೇ ಬೇರೆ, ಈಗ ಅಲ್ಲಿರುವ ಮೂರ್ತಿಯೇ ಬೇರೆ. ಮಧ್ಯಯುಗದ ಅರಸರಿಗೆ ಅಂಟಿಕೊಂಡು ಬಂದ ಪದ್ಧತಿಯೊಂದು ವಿಚಿತ್ರವಾದುದು. ಯಾವುದಾದರೂ ದೇಶದ ಮೇಲೆ ದಂಡೆತ್ತಿ ಹೋಗಿ, ಗೆದ್ದು ಹಿಂದಿರುಗುವಾಗ ಸೋತ ರಾಜ್ಯದ ಪ್ರಸಿದ್ಧ ಗುಡಿಗಳಿಂದ ಮೂರ್ತಿಗಳನ್ನು ತಂದು ತಮ್ಮ ರಾಜ್ಯದ ಗುಡಿಗಳಲ್ಲಿ ಪ್ರತಿಷ್ಠೆ

ಮಾಡಿಸುವುದು ಈ ಪದ್ಧತಿ. ಇದನ್ನು ಹೇಳುವ ಶಾಸನಗಳು ಹಲವಾರು ಇವೆ. ಹೀಗೆ ತಂದ ಮೂರ್ತಿಗಳಿಗೆಂದು ಒಮ್ಮೊಮ್ಮೆ ಹೊಸದಾಗಿ ಗುಡಿಗಳನ್ನು ಕಟ್ಟಿಸಿದುದೂ ಉಂಟು, ಅಥವಾ ಹೆಸರಾದ ಹಳೆಯ ಗುಡಿಗಳು ಬರಿದಾಗಿದ್ದರೆ ಅಲ್ಲಿ ಈ ಮೂರ್ತಿಗಳನ್ನು ಕೂರಿಸಿದುದೂ ಉಂಟು. ಸೋತ ರಾಜ್ಯದಲ್ಲಿ ಗುಡಿಯಿಂದ ಹೀಗೆ ಮೂರ್ತಿ ಮರೆಯಾದರೂ ಗುಡಿಯ ಪಾವಿತ್ರ್ಯಕ್ಕೇನು ಕುಂದು ಬರುತ್ತಿರಲಿಲ್ಲ ವೆಂಬುದು ಗಮನಾರ್ಹವಾದುದು. ಗುಡಿಗೇ ಸ್ವತಂತ್ರವಾದ ಒಂದು ಪಾವಿತ್ರ್ಯವಿದೆ ; ಒಳಗಿನ ಮೂರ್ತಿಯನ್ನು ಇದು ಅವಲಂಬಿಸುವುದಿಲ್ಲ.

ಇದರಿಂದ ಸೋಜಿಗದ ಒಂದು ಸನ್ನಿವೇಶ ಮೈದೋರುತ್ತದೆ. ಗುಡಿಗಳಲ್ಲಿ ಸೇರಿಕೊಳ್ಳುವ ಮೊದಲೇ ಪ್ರತಿಷ್ಠಿತವಾದ ಅರ್ಚಾ ವಿಗ್ರಹಗಳು ಕೆಲವಿವೆ ; ಕಟ್ಟುವಾಗ ವಿಗ್ರಹವಿರದೆ, ಕಟ್ಟಿಯಾದ ಮೇಲೆ ಎಂದೋ ಅಲ್ಲಿ ಕೂಡಿಕೊಳ್ಳುವ ಅರ್ಚಾಮೂರ್ತಿಗಳೂ ಇವೆ. ಆಗಮವೇನು ಇದನ್ನು ಸಂದಿಗ್ಧ ಪರಿಸ್ಥಿತಿಯೆಂದು ಭಾವಿಸುವುದಿಲ್ಲ ; ಏಕೆಂದರೆ ಗುಡಿಗೆ ತನ್ನದೇ ಆದ, ಆಚಾರ್ಯ ಮೂರ್ತಿಯನ್ನ ವಲಂಬಿಸದ ವೈಶಿಷ್ಟ್ಯವಿದೆ, ದೇವತಾ ಸಾನ್ನಿಧ್ಯವಿದೆ. ಹಾಗೆಯೇ ಅರ್ಚಾಮೂರ್ತಿಯ ಹಿರಿಮೆ ಗುಡಿಯನ್ನವಲಂಬಿಸುವುದಿಲ್ಲ. ಅದಕ್ಕೆ ಸ್ವತಂತ್ರವಾದ ವೈಶಿಷ್ಟ್ಯವಿದೆ. ಮೂರ್ತಿಯನ್ನು ಪ್ರತಿಷ್ಠೆಮಾಡುವುದಕ್ಕೆ ಮೊದಲೇ ಕಟ್ಟಿದ ಗುಡಿಯ ಮುಖ್ಯ ಭಾಗವನ್ನು ಆಗಮವು 'ಗೃಹಗರ್ಭ' ಎಂದು ಕರೆಯುತ್ತದೆ ; ಮೂರ್ತಿಯ ಪ್ರತಿಷ್ಠೆಯಾದ ನಂತರ ಗುಡಿಯನ್ನು ಕಟ್ಟಿದರೆ ಅದು 'ಗರ್ಭ-ಗೃಹ'. ಸಂಸ್ಕೃತದಲ್ಲಿ ಗುಡಿಗೆ ಆಯತನವೆಂದು ಹೆಸರು ; ಈ ಹೆಸರಿನಲ್ಲಿ ಯಾವುದೋ ಅಚಿಂತ್ಯಾದ್ಭುತ ಶಕ್ತಿ ಅಲ್ಲಿ ನೆಲೆ

ಮಾಡಿದೆಯೆಂದು ಅರ್ಥವಿದೆ. ಅದೊಂದು ಶಕ್ತಿಕ್ಷೇತ್ರವೆಂದು ಇಂಗಿತ. ಆದುದರಿಂದ ಆಯತನವೆಂದರೆ ಬಿಂಬ ಅಥವಾ ಬೇರವೂ ಆಗಬಹುದು, ಮಂದಿರವೂ ಆಗಬಹುದು.

ವಾಸ್ತವವಾಗಿ ಗುಡಿಯನ್ನು ಮನುಷ್ಯ ದೇಹದಂತೆಯೇ, ಶಕ್ತಿಗಳ ಒಂದು ವ್ಯೂಹವೆಂದು ಭಾವಿಸುವುದಿದೆ. ಶಕ್ತಿಗಳ ವ್ಯವಸ್ಥೆಗೆ ಮಂಡಲವೆಂದು ಹೆಸರು. ಮನುಷ್ಯದೇಹ ಅಡ್ಡಾಡುವ (ಚರ ಅಥವಾ ಜಂಗಮ) ಮಂಡಲವಾದರೆ, ಗುಡಿ ಒಂದೆಡೆ ನಿಂತಿರುವ (ಅಚಲ ಅಥವಾ ಸ್ಥಾವರ) ಮಂಡಲ. ಇವೆರಡರ ನಡುವೆ ಇರುವ ಸಾಂಕೇತಿಕವಾದ ಪರ್ಯಾಯ, ಸಂಬಂಧಗಳನ್ನು ಈಗಾಗಲೇ ಹೇಳಲಾಗಿದೆ. ತಂತ್ರದಲ್ಲಿ ಮನುಷ್ಯದೇಹದ ಮಂಡಲ ಮುಖ್ಯವಾದರೆ ಆಗಮದಲ್ಲಿ ದೈವೀಶಕ್ತಿಗಳ ಮಂಡಲ ಮುಖ್ಯವಾಗುತ್ತದೆ. ಗುಡಿಯಲ್ಲಿರುವ ಬೇರ (ಅರ್ಚಾಮೂರ್ತಿ), ಮನುಷ್ಯದೇಹದಲ್ಲಿರುವ



ಜೀವದಂತೆ ; ಅದೇ ದೈವೀಶಕ್ತಿಗಳ ಸಂಗ್ರಹರೂಪ. ''ದೇಹೋ ದೇಹಾಲಯಃ ಪ್ರೋಕ್ತಃ ಜೀವೋ ದೇವಃ ಸನಾತನಃ'' ಎಂಬ ಮಾತಿದೆಯಲ್ಲವೆ ?

ಮಂಡಲವನ್ನು ಭೌತಿಕವಾಗಿ ನಿರೂಪಿಸುವ ಪದ್ಧತಿಯ ಕುರುಹುಗಳು ವೈದಿಕ ಸಾಹಿತ್ಯದಲ್ಲೇ ಕಂಡುಬರುತ್ತವೆ. ಮುಂದೆ ಇದು ಸ್ತೂಪ ಸಂಕೇತದಲ್ಲಿ ಬೆಳೆಯಿತು. ಚಚ್ಚೌಕ, ವೃತ್ತ, ಅರ್ಧವೃತ್ತ ತ್ರಿಕೋಣ, ಬಹುಭುಜಾಕೃತಿ ಮೊದಲಾದ ಜ್ಯಾಮಿತೀಯ ರೂಪಗಳು ಈ ಮಂಡಲ ನಿರೂಪಣೆಯಲ್ಲಿ ಸೇರಿಬಂದುವು. ಯೋಗ ತತ್ತ್ವೋಪನಿಷತ್ತಿನಲ್ಲಿ ಮಂಡಲ ಸಂಕೇತವನ್ನು ಪಂಚಮಹಾಭೂತ ಗಳ ಆಧಾರದ ಮೇಲೆ ವಿವರಿಸಲಾಗಿದೆ. ಇಡೀ ವಿಶ್ವದ ರಚನೆ ಪಂಚಮಹಾಭೂತಗಳಿಂದಲೇ ಆಗಿದೆಯಲ್ಲವೆ ? ಪೃಥಿವೀತತ್ತ್ವದ ಸಂಕೇತ ಚಚ್ಚೌಕವಾದ ಆಕೃತಿ ; ಆಪೋತತ್ತ್ವದ ಸಂಕೇತ ಅರ್ಧವೃತ್ತ ; ತೇಜಸ್ಸಿನ ಸಂಕೇತ ತ್ರಿಕೋಣ ; ವಾಯುತತ್ತ್ವವನ್ನು ಸೂಚಿಸುವುದು ಷಟ್ಕೋಣಗಳ ಆಕೃತಿ ; ಆಕಾಶತತ್ತ್ವವನ್ನು ಸಂಕೇತಿಸುವುದು ವೃತ್ತ. ಉದ್ದ-ಅಗಲವಿಲ್ಲದ ಬಿಂದುವೇ ಎಲ್ಲ ಶಕ್ತಿಗಳ ಕೇಂದ್ರ. ಉಳಿದೆಲ್ಲ ಆಕೃತಿಗಳೂ ಅದರಿಂದ ಹೊರಹೊಮ್ಮಿದುವೇ. ಗರ್ಭಗುಡಿ ಯಲ್ಲಿರುವ ಅರ್ಚಾಮೂರ್ತಿ ಬಿಂದುವಿನ ಸ್ಥಾನದಲ್ಲಿದೆ ; ಗುಡಿಯ ರಚನೆಯಲ್ಲಿ ಇತರ ನಾಲ್ಕು ತತ್ತ್ವಗಳನ್ನು ಅಳವಡಿಸಬೇಕು. ಸಾಂಪ್ರದಾಯಿಕವಾಗಿ ಸಿದ್ಧವಾದ ದೇವಾಲಯ ಮೂಲಭೂತವಾದ ಈ ಸಂಕೇತವನ್ನು ಕಟ್ಟಡದಲ್ಲಿ ನಿರೂಪಿಸುತ್ತದೆ.

ಸಾಂಪ್ರದಾಯಿಕವಾದ ದೇವಾಲಯದ ರಚನೆ ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನಿಂದ ಮೊದಲಾಯಿತೆಂದು ಪ್ರತೀತಿ. 'ವಿಶ್ವಕರ್ಮ'ನೆಂದರೆ ಎಲ್ಲವನ್ನೂ ಮಾಡುವವನು, ಪ್ರಜಾಪತಿ,

ಸ್ರಷ್ಟಾರ. ಅವನಿಗೆ ಐದು ಮುಖಗಳು : ಒಂದೊಂದು ಮುಖಕ್ಕೂ ಒಂದೊಂದು ಹೆಸರು, ದೇವತೆ, ಬಣ್ಣ, ಗುಣ ಮತ್ತು ಆಕಾರವನ್ನೂ ಹೇಳುತ್ತಾರೆ —

ಹೆಸರು	ದೇವತೆ	ವರ್ಣ	ಗುಣ	ಆಕಾರ
ಸದ್ಯೋಜಾತ	ಶಿವ	ಬಿಳಿ	ತಾಮಸ	ತ್ರಿಕೋಣ
ವಾಮದೇವ	ವಿಷ್ಣು	ನೀಲಿ	ಜ್ಞಾನ	ಚತುಷ್ಕ
ಅಘೋರ	ಬ್ರಹ್ಮ	ಕೆಂಪು	ಕ್ರಿಯಾ	ವೃತ್ತ
ತತ್ಪುರುಷ	ಇಂದ್ರ	ಬೂದಿಬಣ್ಣ	ಮೂರೂ ಕೂಡಿದ್ದು	ಷಟ್ಕೋಣ
ಈಶಾನ	ಸೂರ್ಯ	ಬಂಗಾರಬಣ್ಣ	ಶುದ್ಧಸತ್ತ್ವ	ಅಷ್ಟಕೋಣ



ಇವೆಲ್ಲವನ್ನೂ ಕಲೆಸಿ ಮಂಡಲವನ್ನಾಗಿ ನಿರ್ದೇಶಿಸುವ ಪದ್ಧತಿಯಿದೆ. ಇದಕ್ಕೆ ವಿಶ್ವಕರ್ಮಮಂಡಲವೆಂದು ಹೆಸರು. ದೇವಸ್ಥಾನಗಳ ವಾಸ್ತುಶಿಲ್ಪಕ್ಕೆ, ವಿನ್ಯಾಸಕ್ಕೆ ಇದೇ ಮೂಲಭೂತವಾದುದೆಂದು ನಂಬಿಕೆಯಿದೆ. ಈ ಮಂಡಲದ ಹೊರಗಣ ನಾಲ್ಕೂ ಬಾಹುಗಳೂ ಮುಖ್ಯ ದಿಕ್ಕುಗಳನ್ನು ಪ್ರತಿನಿಧಿಸುತ್ತವೆ, ಚಚ್ಚೌಕದ ನಾಲ್ಕು ಮೂಲೆಗಳು ನಾಲ್ಕು ದಿಕ್ಕುಗಳನ್ನು ಸೂಚಿಸುತ್ತವೆ. ಈ ಎಂಟು ದಿಕ್ಕುಗಳಿಗೂ ಎಂಟು ಅಭಿಮಾನಿ ದೇವತೆಗಳಿದ್ದಾರೆ. ಒಳ ವೃತ್ತ ಸೃಷ್ಟಿಗೆ ಕಾರಣನಾದ ಬ್ರಹ್ಮನನ್ನು ಸಂಕೇತಿಸುತ್ತದೆ. ಹೀಗೆ ಅಷ್ಟದಿಕ್ಪಾಲಕರಿಂದ ಕೂಡಿದ ಬ್ರಹ್ಮನಿರುವ ಮಂಡಲ ಇಡೀ ವಿಶ್ವದ ಸಂಕೇತ. ಈ 'ವಿಶ್ವಕರ್ಮ'ನೇ ಸಾಂಪ್ರದಾಯಿಕವಾದ ಶಿಲ್ಪ, ವಾಸ್ತು, ರೇಖಾಚಿತ್ರ, ವರ್ಣಚಿತ್ರ ಎಲ್ಲದರ ಉಗಮವೂ ಹೌದು. ನಮ್ಮ ದೇಶದಲ್ಲಿ ತುಂಬ ಪ್ರಾಚೀನವೆನಿಸುವ ದೇವಾಲಯಗಳು ವಿಶ್ವಕರ್ಮನಿಂದಲೇ ಕಟ್ಟಲ್ಪಟ್ಟುವೆಂದು ನಂಬಿಕೆಯಿದೆ.

ವಿಶ್ವಕರ್ಮನಿಗೆ ಐವರು ಮಕ್ಕಳು. ಮೊದಲನೆಯವನು ಮನು, ಇವನೇ ಮನುಷ್ಯರಲ್ಲೂ ಮೊದಲನೆಯವನು. ಧರ್ಮರಾಜನ ಸಭೆಯನ್ನು ನಿರ್ಮಿಸಿದ ನೆಂದು ಮಹಾಭಾರತದಲ್ಲಿ ಬರುವ ಮಯ ಎರಡನೆಯವನು. ಅವನು ಜಾನಪದನೆಲೆಯ ಸ್ಥಪತಿ. ಸೂರ್ಯನನ್ನು ಮಾಡಿ, ಉಳಿದ ತುಣುಕುಗಳಿಂದ ವಿಷ್ಣುವಿನ ಚಕ್ರವನ್ನು ಮಾಡಿದ ಬಡಗಿ. ತ್ವಷ್ಟೃ ಮೂರನೆಯವನು. ಮೇಲಿನ ಮೂರೂ ಕೆಲಸಗಳಲ್ಲಿ ನಿಪುಣನಾದ ಶಿಲ್ಪಿ. ನಾಲ್ಕನೆಯವನು ಈ ಮೂರಲ್ಲದೆ ಲೋಹಕರ್ಮ, ನೇಯ್ಗೆ, ಮಣ್ಣಿನ ಗೊಂಬೆಗಳನ್ನು ಮಾಡುವುದು ಈ ಕೆಲಸಗಳಲ್ಲೂ ಅವನು ಚತುರ. ಕಡೆಯವನು ಅರ್ಕ (ಅಥವಾ ವಿಶ್ವಜ್ಞ), ಬಂಗಾರ- ಬೆಳ್ಳಿಗಳಲ್ಲಿ ಕೆಲಸಮಾಡುವ ಕುಶಲಕರ್ಮಿ. ಇವರೇ ಎಲ್ಲ ಕುಶಲ ಕಲೆಗಳ ಪ್ರವರ್ತಕರು ;

ಕುಶಲಕರ್ಮಿಗಳ ಸಮುದಾಯಗಳಿಗೆ ಮೊದಲಿಗರು. ದೇವಾಲಯವೆನ್ನುವುದು ಇವರೆಲ್ಲರೂ ಕೂಡಿ ಮಾಡಿದುದು. ಆದುದರಿಂದ ದೇವಾಲಯದಲ್ಲಿ ಐವರು ದೇವತೆಗಳು, ಐದು ಗುಣಗಳು, ಐದು ಆಕಾರಗಳೂ ಸೇರಿರುತ್ತವೆ. ಇವೆಲ್ಲವನ್ನೂ ವಿಶ್ವಕರ್ಮಮಂಡಲ ಸಂಕೇತಿಸುತ್ತದೆ.

ದೇವಾಲಯಗಳಿಗೆ ಇರುವ ಮಂಡಲದ ಹಿನ್ನೆಲೆಯಲ್ಲಿ ಸೇರಿಬರುವ ಇನ್ನೊಂದು ಪ್ರತಿಮೆ ವಾಸ್ತುವಿನ ವಿನ್ಯಾಸ. ಭಾರತದಲ್ಲಿ ಈಗಲೂ ಉಳಿದು ಬಂದಿರುವ ಪದ್ಧತಿಯೆಂದರೆ, ಏನನ್ನಾದರೂ



ಕಟ್ಟಬೇಕಾದರೆ ಮೊದಲು ಕಟ್ಟಡ ಏಳಬೇಕಾದ ಸ್ಥಳವನ್ನು ವಿಧಿವತ್ತಾಗಿ ಪೂಜೆ ಮಾಡುವುದು. ಕಟ್ಟಡಕ್ಕೆ ಅಗತ್ಯವಾಗುವ ಸ್ಥಳವನ್ನು ಆ ಸ್ಥಳದಲ್ಲಿ ವಾಸಮಾಡುತ್ತಿರುವ ದೇವತೆಗಳಿಂದ, ಭೂತಗಳಿಂದ ಪಡೆದುಕೊಳ್ಳ ಬೇಕು. ಸ್ಥಳದ ವಾಸ್ತವವಾದ ಒಡೆಯರು ಈ ದೇವತೆಗಳೇ, ಭೂತಗಳೇ, ಅವು ಅಪ್ಪಣೆ ಕೊಟ್ಟರೇನೇ ಕಟ್ಟಡ ಚೆನ್ನಾಗಿ ಏಳುವುದು, ಅದರಲ್ಲಿ ವಾಸಮಾಡುವವರಿಗೆ ಏಳಿಗೆಯಾಗುವುದು. ಈ ದೇವತೆ ಗಳನ್ನೂ ಭೂತಗಳನ್ನೂ ಒಪ್ಪಿಸಿ, ಅವರ ಮನಸ್ಸನ್ನು ತಣಿಸಿ, ಭೂಮಿ ಯನ್ನು ಪಡೆದುಕೊಳ್ಳುವ ವಿಧಿ 'ವಾಸ್ತುಶಮನ' ವೆನ್ನಿಸಿಕೊಳ್ಳುತ್ತದೆ. ಈ ವಿಧಿಯಲ್ಲಿ ಮಂಡಲವೊಂದನ್ನು ಬಳಸುತ್ತಾರೆ. ಈ ಮಂಡಲದ ಆಕಾರ ಚಚ್ಚೌಕವಾದುದು. ಅದರ ಒಂದೊಂದು ಕಡೆಯೂ ಒಂಭತ್ತು ಸಣ್ಣ ಚಚ್ಚೌಕಗಳಿದ್ದು ಒಟ್ಟು ಎಂಬತ್ತೊಂದು ಚಚ್ಚೌಕಗಳಿರುತ್ತವೆ. ಇದು ಸಾಮಾನ್ಯವಾದ ವಾಸ್ತುಮಂಡಲವಾದರೆ, ಗುಡಿಗಾಗಿಯೇ ವಿಶಿಷ್ಟವಾದುದು ಚಚ್ಚೌಕದ ಒಂದೊಂದು ಕಡೆಯೂ ಎಂಟು ಸಣ್ಣ ಚಚ್ಚೌಕಗಳನ್ನು ಮಾಡಿ ಒಟ್ಟು ಅರವತ್ತುನಾಲ್ಕು ಚಚ್ಚೌಕಗಳನ್ನೇರ್ಪಡಿ ಸುವರು. ಇದು ಹಯಶೀರ್ಷ ಸಂಹಿತೆಯಲ್ಲಿ ಬರುವ ವಿವರ. ಚಚ್ಚೌಕದ ನಾಲ್ಕೂ ಕಡೆಗಳು ಮೂವತ್ತೆರಡು ಕೋಣೆಗಳನ್ನು ಒಳಗೊಳ್ಳುತ್ತವೆ ; ಒಂದೊಂದರಲ್ಲಿ ಒಂದೊಂದು ದೇವತೆಯನ್ನು ಬರಮಾಡಿಕೊಂಡು ಪೂಜೆ ಮಾಡುತ್ತಾರೆ. ಈ ದೇವತೆಗಳಲ್ಲಿ ಸೂರ್ಯ, ಇಂದ್ರ, ಯಮ, ಗಂಧರ್ವ, ನಾಗ ಇಂಥವರು ಮಾತ್ರವಲ್ಲದೆ ಪಾಪ, ರೋಗಗಳೂ ಪಿತೃಗಳೂ ಪ್ರಾಣಿಗಳೂ ಸೇರುತ್ತವೆ.

ನಟ್ಟನಡುವಣ ಪ್ರದೇಶದಲ್ಲಿ ಒಂಬತ್ತು ಕೋಣೆಗಳಿದ್ದು ಅದನ್ನು ಬ್ರಹ್ಮಭಾಗವೆನ್ನುತ್ತಾರೆ. ಒಂದೊಂದು ಕಡೆಯೂ ಮೂರು ಸಣ್ಣ

ಚಚೌಕ್ಕಗಳನ್ನುಳ್ಳ ಚಚೌಕ್ಕ ಇದು. ದೇವತೆಗಳಲ್ಲಿ ಪ್ರಧಾನನಾದವನು ಬ್ರಹ್ಮ ಅವನ ಪೂಜೆಯೇ ಇಲ್ಲಿ ಮುಖ್ಯವಾದುದು. ಇಡೀ ಮಂಡಲ ವನ್ನು ಸುತ್ತರಿದು ಅದನ್ನು ಕಾಪಿಡುವಂತೆ ಏಳು ರಾಕ್ಷಸಿಯರಿರುತ್ತಾರೆ ; ಪೂತನಾ, ಪಲಿಪಿಂಜರಾ, ವಿದಾರಾ ಮೊದಲಾದವರು. ಇವರು ದೇವತೆಗಳ ಪರಿಚಾರಿಕೆಯರೆಂದು ನಂಬಿಕೆ. ಈ ವಾಸ್ತುಮಂಡಲದ ಕಲ್ಪನೆ ವೈದಿಕಚೌಕಟ್ಟಿನಿಂದ ಹೊರಗೇ ಇದ್ದಿತೆಂದು ತೋರುತ್ತದೆ.

ಈ ಮಂಡಲದ ಹಿನ್ನೆಲೆಯಾಗಿ ಬರುವ ಕಥೆಯನ್ನು ಹಲವಾರು ಶಿಲ್ಪ ಶಾಸ್ತ್ರ ಗ್ರಂಥಗಳೂ ಮತ್ಸ್ಯದಂಥ ಕೆಲವು ಪುರಾಣಗಳೂ ಹೇಳುತ್ತವೆ. ರಾಜವಲ್ಲಭ (ಅಥವಾ



ಸೂತ್ರಧಾರ-ಮಂಡನ)ದಲ್ಲಿ ಬಂದಿರುವ ಕಥೆ ಹೀಗೆ. ಶಿವನು ಭಯಂಕರನಾದ ಅಂಧಕನೆಂಬ ಅಸುರನೊಂದಿಗೆ ಬಿರುಸಾಗಿ ಕಾದಾಡುವಾಗ ಶಿವನ ಹಣೆಯಿಂದ ಬೆವರಿನ ಒಂದು ಹನಿ ಭೂಮಿಗೆ ಬಿದ್ದಿತು. ಬಿದ್ದೊಡನೆ ಗಟ್ಟಿಯಾಗಿ ಗುಡುಗಿನಂತೆ ಅಬ್ಬರಿಸಿತು. ಆ ಹನಿಯು ಅಸುರನ ರೂಪವನ್ನು ತಳೆಯಿತು. ಅಸುರನಿಗೆ ಎಂದೂ ನೀಗದ ಹಸಿವು. ದೇವತೆಗಳನ್ನೂ ಮೂರು ಲೋಕಗಳನ್ನೂ ನುಂಗಿ ತನ್ನ ಹಸಿವನ್ನು ತೀರಿಸಿಕೊಳ್ಳಲು ತೊಡಗಿದ. ಆದರೆ ದೇವತೆಗಳೆಲ್ಲರೂ ಒಮ್ಮೆಲೆ ಅವನ ಮೇಲೆ ಬಿದ್ದು ಅವನನ್ನು ಭೂಮಿಗೆ ಬೀಳಿಸಿ ಅದುಮಿ ಹಿಡಿದುಕೊಂಡರು. ಅಸುರನು ಭೂಮಿಯ ಮೇಲೆ ಬಿದ್ದುದು ಮುಖ ಕೆಳಗೆ ಮಾಡಿ ; ಅವನು ಮೇಲೇಳದಿರುವಂತೆ ಒತ್ತಿಹಿಡಿದರು. ದೇವತೆಗಳು ಅವನ ಮೇಲೆ ಇರತೊಡಗಿದುದರಿಂದ (ವಾಸಿಸತೊಡಗಿದುದರಿಂದ) ಅಸುರನು 'ವಾಸ್ತುಪುರಷ' ನೆನಿಸಿಕೊಂಡ. ಅವನ ಮೈ ಭೂಮಿಯ ಮೇಲೆ ಮಲಗಿಕೊಂಡುದರಿಂದ ಅವನು 'ಶಯ್ಯಾರತಪ್ರಭು'. ಮಂಡಲ ದೊಳಗೆ ಅವನು ಈ ಭಂಗಿಯಲ್ಲಿ ಮಲಗಿಕೊಂಡಿರುವಂತೆ ಚಿತ್ರಿಸುತ್ತಾರೆ. ಅವನ ಕೈಕಾಲುಗಳು ಮಂಡಲದೊಳಗೆ ಅಡಕವಾಗುವಂತೆ ಮುದುಡಿಕೊಂಡಿರುತ್ತವೆ. ಈಶಾನ ಮೂಲೆಯಲ್ಲಿ ಅವನ ತಲೆಯಿರುತ್ತದೆ. ಅವನ ಅಂಗಗಳ, ಸಂಧಿಗಳ ಮೇಲೆ ನಲವತ್ತೈದು ಮಂದಿ ದೇವತೆಗಳು ಕುಳಿತಿರುತ್ತಾರೆ. ಶ್ರೀಚಕ್ರಕ್ಕೂ ನಲವತ್ತೈದು ಕೋಣ ಗಳಿವೆಯೆಂಬುದನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬೇಕು. ವಾಸ್ತುಮಂಡಲಕ್ಕೂ ತಾಂತ್ರಿಕ ಹಿನ್ನೆಲೆಯಿರುವುದು ಸಾಧ್ಯ.

ವಾಸ್ತುವೆಂಬ ಮಾತು ಋಗ್ವೇದದಲ್ಲೇ ಬರುತ್ತದೆ (7, 54, 1); ವಾಸ್ತುವಿನ ಒಡೆಯ (ವಾಸ್ತೋಷ್ಪತಿ) ದೇವತೆಗಳ ಒಡೆಯ ಇಂದ್ರನೇ. ಇಂದಿಗೂ ವಾಸ್ತುಶಮನದ ವಿಧಿಯಲ್ಲಿ ಇಂದ್ರನಿಗೇ

ಸಂಬಂಧಿಸಿದ ಮಂತ್ರದ ಬಳಕೆಯಿದೆ. ವೈದಿಕ ವಿವರಣೆಗಳಿಗೆ ಪ್ರಮಾಣಪುರುಷ ನಂತಿರುವ ದೇವರಾಜ – ಯಜ್ವನ ಪ್ರಕಾರ, ವಾಸ್ತುವೆಂದರೆ ಅಂತರಿಕ್ಷ; ಭೂಮಿಗೂ ಸ್ವರ್ಗಕ್ಕೂ ನಡುವಣ ನೆಲೆ. ಈ ನೆಲೆಯಲ್ಲಿರುವ ದೇವತೆಗಳೆಲ್ಲ ವಾಸ್ತುಪುರುಷನಲ್ಲಿ ಸೇರುತ್ತಾರೆಂದು ಅವನ ವಿವರಣೆ. ಮುಂದೆ ವಾಸ್ತುಪುರುಷನು ಅಸುರನೆಂದೋ ಅಥವಾ ಅರ್ಧಮರ್ಧ ದೇವತೆಯೆಂದೋ ಕಲ್ಪನೆ ಬಂದು, ಭೂಮಿಯ ಮೇಲ್ಭಾಗವೆಲ್ಲ ಅವನ ವಶದಲ್ಲೇ ಇರುವುದೆಂದೂ ಮನೆ ಮೊದಲಾದ ಕಟ್ಟಡಗಳನ್ನು ಕಟ್ಟುವ ಮೊದಲು ಅವನ ಅಪ್ಪಣೆಯನ್ನು ಪಡೆದು ಕೊಳ್ಳಬೇಕೆಂದೂ ನಂಬಿಕೆಗಳು ಬಳಕೆಗೆ ಬಂದುವು. ಮಲಗಿರುವ ಅಸುರನ ಮೇಲೆ ಕುಳಿತ ದೇವತೆಗಳನ್ನು ತಣಿಸುವ ವಿಧಿಯೇ 'ವಾಸ್ತುಶಮನ' ; ವಾಸ್ತುಪುರುಷನು ಮೇಲೇಳದಿರುವಂತೆ ಅವರ ನೆರವನ್ನು ಕೋರುವುದೇ ಉದ್ದೇಶ.

ಮಂಡಲವೆಂದರೆ ಮೂಲಾರ್ಥ ಸೂರ್ಯಚಂದ್ರರಿಂದ





SRĪ ANANTEŚVARA TEMPLE
UDUPI

ಬರುವ ಬೆಳಕನ್ನು ಸುತ್ತರಿದ ಗಾಳಿಯ ಹರವು (ವಾಯುಮಂಡಲ). ಇದು ವಿಶ್ವವನ್ನು ಸುತ್ತರಿದು ಬೆಳಗುವುದೆಂದು ಕಲ್ಪನೆಯಿದೆ. ಎಂದರೆ ವಿಶ್ವದ ಸಮಷ್ಟಿಯ ಸಂಕೇತ ಮಂಡಲ. ಆದುದರಿಂದ ಅದು ಸಾಮಾನ್ಯವಾಗಿ ವೃತ್ತಾಕಾರವಾದುದೆಂದೇ ಬಗೆಯುತ್ತಾರೆ. ವೃತ್ತವೆಂದರೆ ಪೂರ್ಣವಾದುದು, ಎಲ್ಲವನ್ನೂ ತನ್ನೊಳಗೆ ಅಡಗಿಸಿಕೊಳ್ಳುವಂಥದು. ಪ್ರಾಯಶಃ ಮಂಡಲದ ಮೊದಲ ಆಕಾರ ಅಂಡದಂತೆ ಇದ್ದು ಬ್ರಹ್ಮಾಂಡ ಅಥವಾ ಹಿರಣ್ಯಗರ್ಭ ಎಂಬುದರ ಸಂಕೇತವಾಗಿದ್ದಿತ್ತೆಂದು ತೋರುತ್ತದೆ. ಸಹಜವಾದ ಮಾರ್ಪಾಡಿನಲ್ಲಿ ಅದು ವತ್ತವಾಯಿತು. ಇದಕ್ಕೆ ಸಂಬಂಧಪಟ್ಟಂತೆ, ವಿಶ್ವದ ಕೇಂದ್ರವು ಮೇರುವೆಂಬ ಪರ್ವತವೆಂದೂ ಅದರ ಸುತ್ತ ಎಲ್ಲ ದ್ವೀಪಗಳೂ ಖಂಡಗಳೂ ವ್ಯವಸ್ಥಿತವಾಗಿವೆಯೆಂದೂ ನಂಬಿಕೆಗಳಿವೆ. ಮೇರುವಿನ ಸಂಕೇತವೂ ವೃತ್ತವೇ ; ಅದನ್ನು ಸುತ್ತುಗಟ್ಟಿರುವ ನಾಲ್ಕು ದಿಕ್ಕುಗಳನ್ನು ಸೂಚಿಸಲು ವೃತ್ತದ ಹೊರಗೆ, ವೃತ್ತವನ್ನು ಒಳಗೊಂಡಂತೆ ಚಚ್ಚೌಕ. ವಾಸ್ತು ಮಂಡಲದ ನಿರೂಪಣೆಗೆ ಇದೇ ಚೌಕಟ್ಟು, ಅದರ ನಡುವೆ ಇರುವ ಬ್ರಹ್ಮಭಾಗವೇ ಮೇರು ಪರ್ವತ. ಗುಡಿಯ ಕಟ್ಟಡದಲ್ಲಿ ಚಚ್ಚೌಕವಾದ ಗರ್ಭಗೃಹವೇ ಹೊರಗಿನ ಮಂಡಲ ; ಗರ್ಭಗೃಹದ ಮೇಲಿರುವ ವಿಮಾನವೇ ಮೇರುಪರ್ವತದ ಸ್ಥೂಲರೂಪ. ವಿಮಾನದ ರಚನೆ ಯಲ್ಲಿ ವಿಶ್ವಕರ್ಮಮಂಡಲದ ಹಲವು ಆಕಾರಗಳು ಸೇರಿಬರುತ್ತವೆ.

ವಾಸ್ತುಮಂಡಲದಲ್ಲಿ ಬ್ರಹ್ಮಸ್ಥಾನವೇ ಪ್ರಧಾನವಾದ ಅಂಗ ; ಹಾಗೆಯೇ ಗುಡಿಯಲ್ಲಿ ಗರ್ಭಗೃಹ ಬ್ರಹ್ಮಸ್ಥಾನ. ಈ ಚಚ್ಚೌಕದ ನಟ್ಟ ನಡುವಣ ಬಿಂದು ಅರ್ಚಾಮೂರ್ತಿಯಿರುವ ಸ್ಥಳ. ಇದೇ ಬಿಂದುವನ್ನೇ ಕಟ್ಟಡದ ವಿನ್ಯಾಸದಲ್ಲಿ ಮೇಲೆತ್ತಿ ಶಿಖರದ ಮೇಲಿರುವ ಸ್ತೂಪಿಯಲ್ಲಿ ಪ್ರತಿಬಿಂಬಿಸುತ್ತಾರೆ. ದೇವಾಲಯ-ಮಂಡಲದ

ನಡುವಣ ಸ್ಥಾನವಾದ ಗರ್ಭಗೃಹವೇ ದೈವೀ ಊರ್ಜೆಯ ಕೇಂದ್ರವಾಗಿರುವುದು ಸಹಜವೇ ; ಅರ್ಚಾ ಮೂರ್ತಿ ಈ ದೈವೀಶಕ್ತಿಯ ಭೌತಿಕರೂಪ, ಮೂರ್ತಸ್ವರೂಪ. ವಿಮಾನದ ಮೇಲೆ ನಿರ್ದಿಷ್ಟವಾದ ಹಲವು ದೇವತಾಮೂರ್ತಿಗಳನ್ನು ಮೂಡಿಸಬೇಕೆನ್ನುವ ವಿಧಿಯಿದೆ ; ವಾಸ್ತುಮಂಡಲದಲ್ಲಿ ವಾಸ್ತುಪುರುಷನ ಮೈಮೇಲೆ ಕುಳಿತಿರುವ ದೇವತೆಗಳಿಗೂ ಈ ಮೂರ್ತಿಗಳಿಗೂ ಸಾದೃಶ್ಯವಿದೆ, ಸಂಬಂಧವಿದೆ. ಹೀಗೆ ಗುಡಿಯು ಮಂಡಲದ ಒಂದು ಪ್ರತಿಮೆಯೆನ್ನಬಹುದು.

ಗರ್ಭಗುಡಿಯ ವಿಸ್ತರಣ (ಮುಖಮಂಡಪ, ರಂಗಮಂಡಪ, ಆವರಣ ಮೊದಲಾಗಿ ಮೂಲಭೂತವಾದ




OPEN
MŪKĀMBIKĀ
C. 1400 A.D.
JYŌTIRLINGA
9TH CENT. A.D.
PAÑCHAMUKHA GANAPATI
OPEN
OPEN
LION
0 5 10 15 20
FEET
MŪKAMBIKA TEMPLE
KOLLŪR
VIRABHADRA
SHRINE



ಮಂಡಲದಿಂದ ಹೊರ ಹೊಮ್ಮುವುದು. ಪ್ರಾಚೀನ ದೇವಾಲಯಗಳ ವಾಸ್ತುವಿನ್ಯಾಸವನ್ನು ಪರಿಶೀಲಿಸಿದರೆ, ಅವೆಲ್ಲ ಮಂಡಲಕಲ್ಪನೆಯ ರೂಪಾಂತರಗಳೇ ಎಂಬುದು ಸ್ಪಷ್ಟವಾಗುತ್ತದೆ. ಸಾಂಪ್ರದಾಯಿಕವಾದ ಆಕೃತಿಗಳು (ತ್ರಿಕೋಣ, ಚಚ್ಚೌಕ, ವೃತ್ತ ಮೊದಲಾದುವು) ಗಾತ್ರದಲ್ಲಿ ಮತ್ತು ಸರಳತೆಯಲ್ಲಿ ಬೇರ್ಪಟ್ಟು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಭಕ್ತನು ಗುಡಿಯೊಳಗೆ ಪ್ರವೇಶಿಸುವುದೆಂದರೆ ಮಂಡಲದೊಳಗೆ ಹೊಕ್ಕಂತೆ ; ಶಕ್ತಿಕ್ಷೇತ್ರದಲ್ಲಿ ಪಾಲ್ಗೊಂಡಂತೆ. ಆವರಣಗಳ, ಮಂಡಪಗಳ ಮೂಲಕ ಅವನು ಹಾದುಹೋಗಿ ಗರ್ಭಗೃಹದ ಮುಂದೆ ನಿಲ್ಲುವುದು ಸಾಂಕೇತಿಕ ವ್ಯವಹಾರ. ಮನುಷ್ಯನು ದೈವೀ ನೆಲೆಯನ್ನು ಮುಟ್ಟಲು ಕೈಗೊಳ್ಳುವ ಪ್ರವಾಸದಲ್ಲಿ ಇವೆಲ್ಲ ವಿವಿಧ ಹಂತಗಳು.

ಭಕ್ತನು ಮಹಾದ್ವಾರದ ಹೊಸ್ತಿಲನ್ನು ಕಂಡೊಡನೆ ತಲೆಬಾಗಿಸಿ, ಅದರ ನಡುವೆ ಇರುವ ಪದ್ಮಮಂಡಲವನ್ನು


1
2
3
4
5
6
7
8

ಮುಟ್ಟುವುದಿಲ್ಲವೆ ? ಅನಂತರ ಅವನು ಹೊಸ್ತಿಲನ್ನು ದಾಟಿ ಗುಡಿಯ ಆವರಣದೊಳಗೆ ಕಾಲಿಡುತ್ತಾನೆ. 'ಲೋಕಧರ್ಮ'ದಿಂದ 'ಶಿವ ಧರ್ಮ'ಕ್ಕೆ ಸಾಗುವುದರ ಸಂಕೇತ ಇದು. ಧ್ವಜಸ್ತಂಭ ಅಥವಾ ಬಲಿಪೀಠವನ್ನು ಮುಟ್ಟುವವರೆಗೂ ಅವನು ಸಾಮಾನ್ಯವಾದ ಲೌಕಿಕ (ಎಂದರೆ ಎಚ್ಚರದ, ಜಾಗ್ರತ) ಅವಸ್ಥೆಯಲ್ಲೇ ಇರುತ್ತಾನೆ. ಅಲ್ಲಿ ಅವನಿಗೆ ಗರ್ಭಗೃಹದ ಮೊದಲ ನೋಟ ದೊರೆತೊಡನೆ ಹೊರಗಿನ ಎಚ್ಚರದಿಂದ ಜಾರಿ 'ಸ್ವಪ್ನ'ವೆನ್ನಬಹುದಾದ ಅವಸ್ಥೆಗೆ ಸಾಗುತ್ತಾನೆ. ಗರ್ಭಗೃಹದ ಕಡೆ ನಡೆದು ಹೋಗಿ ಮುಖಮಂಡಪ ದಲ್ಲಿ ನಿಂತಾಗ ಅದು 'ಸುಷುಪ್ತಿ'. ಅಲ್ಲಿ ನಿಂತು ಎದುರಿನ ಗರ್ಭಗೃಹದೊಳಗಿರುವ ಅರ್ಚಾಮೂರ್ತಿಯನ್ನು ನೋಡುವಾಗ ಅದು 'ಶಾಂತೋದಿತ'ವೆಂಬ ಸ್ಥಿತಿ ; ಅರ್ಚಾಮೂರ್ತಿಯ ರೂಪ ಮನಸ್ಸಿನಲ್ಲಿ ನೆಟ್ಟು, ಭಕ್ತನು ಅದರಲ್ಲಿ ತನ್ನನ್ನು ತಾನು ಮರೆತಾಗ 'ಶಾಂತಿ'ಯ ಮಳೆ ಅವನನ್ನು ನೆನೆಸುತ್ತದೆ.

ಈ ಸಂಕ್ರಮಣದ, ಎಂದರೆ ಸಾಗಾಟದ, ಕ್ರಮವನ್ನನುಸರಿಸಿ ಗುಡಿಯ ಕಟ್ಟಡದ ಬೇರೆ ಬೇರೆ ಭಾಗಗಳೂ, ಅಲ್ಲಲ್ಲಿ ಭಕ್ತನು ನಡೆದುಕೊಳ್ಳಬೇಕಾದ ವಿಧಿಗಳೂ ಸ್ಪಷ್ಟವಾಗುತ್ತವೆ. ಭಕ್ತನು ಗುಡಿಯ ಮಹಾದ್ವಾರವನ್ನು ಮುಟ್ಟುವಾಗ ಅವನದ್ದು ಇನ್ನೂ ಲೌಕಿಕ ಸ್ಥಿತಿಯೇ ; ಆದುದರಿಂದ ಮಹಾದ್ವಾರದ ಮೇಲೆ, ಅದರ ಮೇಲಿರುವ ಗೋಪುರದಲ್ಲಿ, ಪ್ರಾಕಾರದಲ್ಲಿ ಪ್ರಾಕೃತಜೀವನದ ಚಿತ್ರಣಗಳೇ ಇರುತ್ತವೆ. ಮುಂದೆ ಬಲಿಪೀಠವು ಸಣ್ಣ ಮಂಡಲವೇ ಆದುದರಿಂದ ಅದರಲ್ಲಿ ಮಂಡಲದ ಪ್ರಕಾರಗಳನ್ನೇ ಕಾಣುವೆವು. ಈ ಮಂಡಲದ ಬಳಿ ಭಕ್ತನು ನಿಂತಾಗ ಅವನನ್ನು ಎಚ್ಚರದ ಸಾಮಾನ್ಯಸ್ಥಿತಿಯಿಂದ ಸ್ವಪ್ನದ ಸ್ಥಿತಿಗೆ ಮುಟ್ಟಿಸುವುದೇ ಬಲಿಪೀಠದ ಉದ್ದೇಶ. ಇಲ್ಲಿ ಸ್ವಪ್ನದ ದೃಶ್ಯ. ಬಲಿಪೀಠದಿಂದ ಕಾಣುವ ಗರ್ಭಗೃಹ, ಕನಸಿನ ಲೋಕವನ್ನು

ಅನುಕರಿಸಿ ಕಂಬಗಳೂ, ತೋರಣಗಳೂ, ಸುಕನಾಸಿಗಳೂ, ಯಾಳಿಗಳೂ ಇರುತ್ತವೆ. ಪುರಾಣದ ಕಲ್ಪನೆಗಳು, ಕಥೆಗಳು, ಶರಭ-ವ್ಯಾಳ ಮೊದಲಾದ ವಿಚಿತ್ರ ಪ್ರಾಣಿಗಳು, ಮತ್ತು ಅಲಂಕರಣದ ವಿನ್ಯಾಸಗಳು ಕಂಬಗಳ ಮೇಲೂ ಗೋಡೆಗಳ ಮೇಲೂ

ಮೂಡಿಬಂದು ಎಚ್ಚರದ ಲೋಕವನ್ನು ಮರೆಸುತ್ತವೆ. 'ಲೋಕಧರ್ಮ' ದಿಂದ 'ಶಿವಧರ್ಮ'ಕ್ಕೆ ಸಾಗಿ ಹೋಗಲು ಇವೆಲ್ಲ ನೆರವಾಗುತ್ತವೆ. ಒಳಗಿನ ಮಂಡಪಗಳು ಕತ್ತಲೆಗಟ್ಟಿರುವುದು ಈ ಸ್ವಪ್ನಲೋಕದ ಕಳೆಯನ್ನು ಇನ್ನಷ್ಟು ಹೆಚ್ಚಿಸಲೆಂದೇ.

ಕನಸಿನ ಕಲ್ಪನಾ ವೈವಿಧ್ಯವನ್ನು ದಾಟಿ, ಗರ್ಭಗುಡಿಯ ಸರಳತೆಯ ಮುಂದೆ ನಿಂತಾಗ, ಸ್ವಪ್ನದ ವಿಕ್ಷೇಪಸ್ಥಿತಿಯೂ ಮರೆಯಾಗಿ, ಶಾಂತಿ ಒದಗಿಕೊಳ್ಳುವ ಸೌಲಭ್ಯವಿರುತ್ತದೆ. ಇದನ್ನೇ 'ಶಾಂತೋದಿತ' ಎನ್ನುವುದು. ಈ ಮನೋವೃತ್ತಿಯಲ್ಲಿ ಅರ್ಚಾಮೂರ್ತಿಯ ಕಡೆ ನಮ್ಮ ಅರಿವನ್ನೆಲ್ಲ ಹರಿಸುವುದು ಸಾಧ್ಯವಾಗುತ್ತದೆ. ಗರ್ಭಗುಡಿಯ ಒಳಭಾಗ ಸರಳವಾಗಿರಬೇಕೆಂದು ಆಗಮದ ಕಟ್ಟಳೆ ; ಅಲ್ಲಿ ಯಾವ ಅಲಂಕರಣವೂ ಆಡಂಬರವೂ ಇರುವ ಹಾಗಿಲ್ಲ, ಎಣ್ಣೆ ದೀಪಗಳಷ್ಟೇ ಅಲ್ಲಿ ಉರಿಯುತ್ತಿರಬೇಕು. ಅರ್ಚಾಮೂರ್ತಿಯನ್ನು ಬಿಟ್ಟು ಉಳಿದ ಭಾಗ ಕತ್ತಲಾಗಿಯೇ ಇರಬೇಕು. ಲೌಕಿಕವಾದ ಬೆಳಕನ್ನು ಭಕ್ತ ಹಿಂದೆಯೇ ಬಿಟ್ಟು ಬಂದಿದ್ದಾನಷ್ಟೆ? ಇಲ್ಲಿ ಆ ಬೆಳಕು ಅವನ ಕಣ್ಣನ್ನು ಕುಕ್ಕಬಾರದು. ಅರ್ಚಾಮೂರ್ತಿಯ ಬೆಳಕಿನಲ್ಲಿ ತನ್ನ ಇರವನ್ನು ಸುರಿದುಕೊಂಡು ಧನ್ಯತೆಯನ್ನು ಪಡೆದುಕೊಳ್ಳುವಾಗ ಈ ಪ್ರಾಪಂಚಿಕ ವಾದ ಬೆಳಕು ನೆರವಾಗುವುದಿಲ್ಲ, ಅಡ್ಡಿಯಾಗುತ್ತದೆ. ಅರ್ಚಾ ಮೂರ್ತಿಯ ಮುಂದೆ ನಿಂತಿರುವಲ್ಲಿ ವಾಸ್ತುಮಂಡಲದ ಬ್ರಹ್ಮ ಭಾಗದಲ್ಲಿ ತಾನಿರುವೆನೆಂಬ ಅರಿವು ಅವನಿಗಾಗಬೇಕು.

ಗರ್ಭಗೃಹದ ಚಚ್ಚೌಕವಾದ ವಿನ್ಯಾಸ, ಇನ್ನೊಂದು ನೆಲೆಯಿಂದ ನೋಡಿದರೆ, ಜಾಗ್ರತ್ತಿನ ಅವಸ್ಥೆ. ಅದರ ಮೇಲೆ ನಿಂತಿರುವ ವಿಮಾನ (ವೃತ್ತಾಕಾರವಾಗಿ ಬಹುಭುಜಾಕೃತಿಯಲ್ಲಿ) ಸ್ವಪ್ನಾವಸ್ಥೆಯ ಸಂಕೇತ. ವಿಮಾನದ ಮೇಲಣ ಕಲಶದ ಭಾಗ ಸುಷುಪ್ತಿಯ ಸ್ಥಿತಿ. ಸುಷುಪ್ತಿಯಲ್ಲಿ

ಪ್ರಪಂಚದ ಬೇರೆ ಬೇರೆ ರೂಪಗಳೂ ಓರೆಕೋರೆಗಲೂ ಮರೆಯಾಗಿ ಬಿಡುವಂತೆ ವಿಮಾನದ ವಿನ್ಯಾಸವೆಲ್ಲ ಕಲಶದಲ್ಲಿ ಮುಗಿದು, ಸ್ತೂಪಿಯಿಂದ ಒಮ್ಮುಖವಾಗಿ ಮೇಲೇರಿ ಬಿಂದುವಿನಲ್ಲಿ ಅರಿವು ಮರೆಯಾಗುತ್ತದೆ. ಇಡೀ ವಿಮಾನದ ಗತಿ ಊರ್ಧ್ವಮುಖವಾದುದು; ಚಚ್ಚೌಕವಾದ ಅಧಿಷ್ಠಾನದಿಂದ ಮೊದಲಾಗಿ ಸ್ತೂಪಿಯ ಬಿಂದುವಿನಲ್ಲಿ ಮುಗಿಯುವ ವಿಮಾನವು ಮನುಷ್ಯನ ಅವಸ್ಥೆಗಳನ್ನು ಸಂಕೇತಿಸಿ, ಹಂತದಿಂದ ಹಂತಕ್ಕೆ ಸಂಕ್ರಮಣವನ್ನು ಸೂಚಿಸುತ್ತದೆ.

ವೈಷ್ಣವಾಗಮಗಳಲ್ಲಿ ಮಂಡಲಕ್ಕೆ ಇನ್ನೊಂದು ಸಾಂಕೇತಿಕ ವಿವರವನ್ನು ಕಾಣಿಸಿದ್ದಾರೆ. ಗರ್ಭಗೃಹವು ದೈವೀಶಕ್ತಿಯ ಅರ್ಚಾ ಸ್ವರೂಪವನ್ನು ಪ್ರತಿನಿಧಿಸುತ್ತದೆ. ಅದರೊಳಗೆ ಇರುವ ವಿಗ್ರಹವು 'ಅಂತರ್ಯಾಮಿ', ಪ್ರತಿಯೊಂದು ಪ್ರಾಣಿಯಲ್ಲೂ ಹೃದಯದೊಳಗೆ ಅಡಗಿರುವ ದೈವಸಾನ್ನಿಧ್ಯ. ಗರ್ಭಗೃಹದ ಮೇಲಿರುವ ವಿಮಾನವು ದೈವೀಶಕ್ತಿಯ ವಿಭವಸ್ವರೂಪವನ್ನು ಪ್ರತಿನಿಧಿಸುತ್ತದೆ. ವಿಮಾನದ ಮೇಲಿರುವ ಕಲಶವು 'ವ್ಯೂಹ'ದ ಅಭಿವ್ಯಕ್ತಿ. ಕಲಶದ ಮೇಲಿರುವ ಸ್ತೂಪಿ ದೈವೀಶಕ್ತಿಯ 'ಪರ'ವೆಂಬ ಪ್ರಕಾರ.

ಹೀಗೆ ಗುಡಿಯೆಂಬುದು ಮಂಡಲದ ಹರವು ; ಗುಡಿಯ ಸಾಂಕೇತಿಕ ತಾತ್ಪರ್ಯವಿರುವುದು ಮಂಡಲದ ಕಲ್ಪನೆಯಲ್ಲಿಯೇ.

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ (ರಿ.)

ಸದಸ್ಯರು :

ಶ್ರೀಮತಿ ರಮಾ ರಾಮಚಂದ್ರ ರಾವ್

ಶ್ರೀಮತಿ (ಡಾ) ಉಮಾ ಅನಿಲ್ ಕುಮಾರ

ಡಾ॥ ಸಾ. ರಾ. ಸುದರ್ಶನ

ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳು :

1. ಶ್ರೀ ರಾಘವೇಂದ್ರ ಸ್ವಾಮಿಗಳು (Rs. 40)
2. The Three Acharyas: Sankara, Ramanuja, Madhva (Rs. 35)
3. ದಂಡಿಯ ಅವಂತಿ ಸುಂದರೀ (Rs. 70)
4. The Teachings of the Buddha (Rs. 85)
5. The Temple : Icons and Rituals (Rs. 100)
6. ಬೋಧಿಯ ಬೆಳಕಿನಲ್ಲಿ (Rs. 100)
7. Jainism in South India. (Rs. 85)
8. ಪುರಂದರದಾಸರು (Rs. 70)
9. ವೇದದಲ್ಲಿನ ಕಥೆಗಳು (Rs. 60)
10. Adhyatma Rasa Ranjani (Spiritual Bliss) (Rs. 20)

ಪ್ರಕಟವಾಗಲಿರುವ ಪುಸ್ತಕಗಳು :

1. ತಿರುಮಲ ತಿರುಪತಿ ದೇವರು
2. ಪೂರ್ಣಪ್ರಜ್ಞಪ್ರಶಸ್ತಿ
3. The Hill Shrine of Tirumala
4. The Saint of Sringeri
5. ಶ್ರೀ ಶಾರದಾಪೀಠದ ಮಾಣಿಕ್ಯ

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ (ರಿ.)ಯು ಪ್ರೊ. ರಾಮಚಂದ್ರರಾಯರ ಉಪನ್ಯಾಸಗಳನ್ನು ಧ್ವನಿಸುರುಳಿ ರೂಪದಲ್ಲಿ (CDs) ಹೊರತಂದಿದೆ. ಅವುಗಳಲ್ಲಿ ಕೆಲವು ಇಲ್ಲಿ ಸೂಚಿಸಲಾಗಿದೆ.

		(ಘಂಟೆಗಳು)
1.	ರಾಮಾಯಣ	3
2.	ಅಭಿನವ ಗುಪ್ತ	3.5
3.	ವೇದದಿಂದ ವೇದಾಂತಕ್ಕೆ	3.5
4.	ವೇದಾಂತದ ಉಗಮ	1
5.	ತ್ರಿಪುರಾ ರಹಸ್ಯ	12
6.	ಶಂಕರಾಚಾರ್ಯರ ಸಂದೇಶ	1
7.	ಬುದ್ಧ ಮತ್ತು ಉಪನಿಷತ್ತುಗಳು –	1
8.	ಭಗವದ್ಗೀತೆಯ ಸಂದೇಶ	1
9.	ಹಠಯೋಗ ಪ್ರದೀಪಕ	8.5
10.	Darshanas (Systems of Indian Philosophy)	12
11.	ಮಾಧ್ವಸಿದ್ಧಾಂತ	3
12.	ರಾಮಾನುಜಾಚಾರ್ಯ	1
13.	ಮಧ್ವಾಚಾರ್ಯ	1

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಪ್ರೊ. ಸಾ. ಕೃ. ರಾಮಚಂದ್ರರಾಯರು ಕಾಲವಾದ ಕೆಲವು ತಿಂಗಳನಂತರ ಅವರ ಕುಟುಂಬದವರು ಅವರ ಹೆಸರಿನಲ್ಲಿ ಒಂದು ಸ್ಮಾರಕ ನಿಧಿಯನ್ನು ಸ್ಥಾಪಿಸಿದರು.

ಈ ನಿಧಿಯ ಉದ್ದೇಶಗಳು ಹೀಗಿವೆ :

★ ಪ್ರೊ. ರಾಮಚಂದ್ರರಾಯರು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಬರೆದ ಹಲವಾರು ಪುಸ್ತಕಗಳನ್ನು ಹಾಗೂ ಲೇಖನಗಳನ್ನು ಸಂಗ್ರಹಿಸುವುದು.

★ ಇವುಗಳಲ್ಲಿ ಪ್ರಸ್ತುತ ದೊರೆಯದ ಪುಸ್ತಕಗಳನ್ನು ಪುನರ್ಮುದ್ರಣ ಮಾಡುವುದು.

★ ಅವರು ವಿವಿಧ ವಿಷಯಗಳ ಬಗ್ಗೆ ದಿನಪತ್ರಿಕೆಗಳಲ್ಲಿ ಹಾಗೂ ಮಾಸಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದರು. ಅವುಗಳನ್ನು ಪುಸ್ತಕರೂಪದಲ್ಲಿ ತರುವುದು.

★ ಅವರು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾಡಿದ ಉಪನ್ಯಾಸಗಳನ್ನು ಧ್ವನಿಸುರುಳಿ ರೂಪದಲ್ಲಿ ಹೊರತರುವುದು. ಈಗಾಗಲೇ 25ಕ್ಕಿಂತ ಹೆಚ್ಚು ಧ್ವನಿಸುರುಳಿಗಳನ್ನು ಹೊರತರಲಾಗಿದೆ.

★ ರಾಯರು ಅವರ ಮನೆಯಲ್ಲಿ 3-4 ದಶಕಗಳಿಂದ ಭಗವದ್ಗೀತೆ, ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ತ್ರಿಪುರಾ ರಹಸ್ಯ, ಶಿಲ್ಪಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು ಪ್ರವಚನಗಳನ್ನು ಮಾಡುತ್ತಿದ್ದರು. ಇದರ ಧ್ವನಿಸುರುಳಿಗಳನ್ನು ತಯಾರಿಸುವುದು. ಈಗಾಗಲೇ ಬ್ರಹ್ಮಸೂತ್ರ, ಗೀತಾ ವಿವೃತ್ತಿ, ಶಿವಸೂತ್ರ ಹಾಗೂ ಮಾಂಡೂಕ್ಯೋಪನಿಷತ್‌ಗಳ ಧ್ವನಿಸುರುಳಿಗಳು ತಯಾರಾಗಿವೆ.

★ ಅವರು ರಚಿಸಿದ ಕಲಾಕೃತಿಗಳ, ರೇಖಾ ಮತ್ತು ವರ್ಣಚಿತ್ರಗಳ ಸಂರಕ್ಷಣೆ ಮತ್ತು ಪ್ರದರ್ಶನ ಮಾಡುವುದು. 2007ರಲ್ಲಿ ಅವರ ಕಲಾವೈಭವದ ಪ್ರದರ್ಶನ ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಏರ್ಪಡಿಸಲಾಗಿತ್ತು.

ಪ್ರೊ. ರಾಮಚಂದ್ರರಾಯರ ಬರಹಗಳನ್ನು ಪ್ರಕಟಿಸುವ ಉದ್ದೇಶದಿಂದ ನಾವು 'ಸುರಮಾ ಪ್ರಕಾಶನ' ಎಂಬ ಹೆಸರಿನಲ್ಲಿ ಒಂದು ಪ್ರಕಟನಾ ವಿಭಾಗವನ್ನು ಸ್ಥಾಪಿಸಿ ರಾಯರ ಹತ್ತು ಪುಸ್ತಕಗಳನ್ನು ಹೊರತಂದಿದ್ದೇವೆ.

Sole Distributors :
JANAPADA PRAKASHANA

ISBN 819067400-5
9788190674003

Price Rs. 75=00